
# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ 2023




ಬಿಡಿ ಪ್ರತಿ: ರೂ. 10/-

beechi

TEMPLE OF
KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ  ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

50 ಪುಸ್ತಕಗಳ ಪ್ಯಾಕ್

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592  after discount  ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


G Pay 9845264304

**ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302**

---

# BEECHI PRAKASHANA

# ಬೀchi ಪ್ರಕಾಶನ,



## BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

---

Email : admin@beechi.in | www.beechi.in | 9845264304

# Ravi Graphics
OFFSET PRINTERS

*Bringing colours alive*

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

**+91 89719 95599 | sales@bagfactory.co.in | bagfactory.co.in**

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

Certificate No.: MC-2068

# ಮಲ್ಲಿಗೆ ಆಸ್ಪತ್ರೆ

**ವೈಯಕ್ತಿಕ ಸಂಪೂರ್ಣ ಆರೋಗ್ಯ ಆರೈಕೆ**

# MALLIGE HOSPITAL

PERSONALISED COMPLETE HEALTHCARE



**ಮಲ್ಲಿಗೆ ಮೆಡಿಕಲ್ ಸೆಂಟರ್ ಪ್ರೈವೆಟ್ ಲಿಮಿಟೆಡ್**
೩೧ ಮತ್ತು ೩೨ ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦೦೦೧, ಭಾರತ
ದೂರವಾಣಿ - +೯೧.೮೦.೬೭೧೬೫೫೫೫, +೯೧.೮೦.೨೨೨೦೩೩೩೩ ಮಿಂಚಂಚು - info@ಮಲ್ಲಿಗೆ.com ಜಾಲತಾಲ - www.ಮಲ್ಲಿಗೆ.com

MALLIGE MEDICAL CENTRE PVT. LTD.
31 & 32 Crescent Road, Bangalore 560001, India
Phone: +91.80.67165555, +91.80.22203333 Email: info@mallige.com Web: www.mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ವಾರ್ಷಿಕ ಚಂದಾ : ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 40

ಸಂಚಿಕೆ – 6

ಮಾರ್ಚ್–2023


*ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಪಲಾಜೋ ಖರೀದಿಯ ಕಥೆಯು | ಜಯಶ್ರೀ ದೇಶಪಾಂಡೆ | 6 |
| ಕಲ್ಯಾಣ ವೈಭೋಗವೇ | ಚಿತ್ರ ರಾಮಚಂದ್ರನ್ | 9 |
| ಬಾಯಿ ಲೆಕ್ಕ ಭೂತದ ಬಾಯಲ್ಲಿ | ಕವಿತ ಹೆಗಡೆ ಅಭಯಂ | 14 |
| ಅವಿಭಾಜ್ಯ ಅಂಗ | ಎಚ್. ಗೋಪಾಲಕೃಷ್ಣ | 18 |
| ನಗೆ ಸುಗ್ಗಿ | | 20 |
| ತುಂತುರು | ದಂನಳ | 24 |
| ಫ್ಯಾಮಿಲಿ ಪ್ರಾಬ್ಲಂ ಫ್ಯೂಚರ್ ಪ್ಲಾನ್ಸ್ | ಚಿತ್ರ ರಾಮಚಂದ್ರನ್ | 25 |
| ಸೋಮು ಅತ್ತೆಯ ಓಲಾಡಮ್ಮ....... | ಬೇಲೂರು ರಾಮಮೂರ್ತಿ | 28 |
| ಅಜ್ಜನಿಗಾಗಿ ಟ್ರೈನ್ ನಿಲ್ಲಿಸಿಯೇಬಿಟ್ವೆ | ಸಂಗಮೇಶ ಮೆಣಸಿನಕಾಯಿ | 31 |
| ವಿಧಾನಸಭಾ ಕಲಾಪದಲ್ಲಿ....... | ಡಾ॥ ಕೆ.ಆರ್. ಸಂಧ್ಯಾರೆಡ್ಡಿ | 34 |

**ವ್ಯಂಗ್ಯ ಚಿತ್ರಗಳು:**

ಹೊರ ಪುಟ–ನಂಜುಂಡಸ್ವಾಮಿ

ಒಳ ಪುಟ–ಆದರ್ಶ ಪೈ ಮತ್ತು ರಘುಪತಿ ಶೃಂಗೇರಿ



*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಮಹಿಳಾ ಪ್ರೀಮಿಯರ್ ಲೀಗ್

......ಪತ್ರಿಕೆ

ಅಪರಂಜಿ ತನ್ನ ಉತ್ಸಾಹ-ಭರಿತ ಶುಭಾಶಯಗಳನ್ನು
ಕಳಿಸಿದಳಂತೆ !!

****

ಅದಾನಿ ಹಾಗೂ ಪ್ರಧಾನಿಯವರಿಗೆ ಏನು ಸಂಬಂಧ ?

........ದಿನಪತ್ರಿಕೆ

ತೀರಾ ಬಾಲಿಶ ಪ್ರಶ್ನೆ ಎಂದರೆ ಇದೇ !!

****

ಭಾವಗೀತೆಗಳಿಂದ ಲಕ್ಷಾಂತರ ಜನರ ಹೃದಯ
ಮಿಡಿಯುವಂತೆ ಮಾಡಿದ ವಾಣಿ ಜಯರಾಮ್ ಅವರ
ನೆನಪು ಚಿರವಾಗಲಿ !

****

ಪ್ರಶಸ್ತಿಗಳು ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ

.......ಹೇಳಿಕೆ

ಗಹನವಾದ ಚರ್ಚೆಗೆ ಅರ್ಹವಾದ ವಿಷಯ !

****

12 ದೇವಾಲಯಗಳಲ್ಲಿ ಸ್ವಚ್ಛತಾ ಅಭಿಯಾನ

......ಪತ್ರಿಕೆ

ಭಗವಂತ ತಲೆದೂಗಿದನಂತೆ !!!

****

ಸಭಾಭವನ ನಿರ್ಮಾಣಕ್ಕೆ ಸಾಂಸದರ ನಿಧಿಬಳಕೆ

......ದಿನಪತ್ರಿಕೆ

ಅಪರಂಜಿ ಚಕಿತಳಾದಳಂತೆ !!

****

ಶಿಕ್ಷಕರ ನೇಮಕ; ಆಯ್ಕೆ ಪಟ್ಟಿ ರದ್ದು

......ಪತ್ರಿಕೆ

ಇದೆಂತಹ ಶಿಕ್ಷೆ ಪಾಪ !!

****

ಸ್ಯಾಂಕೀ ಮೇಲು ಸೇತುವೆ ವಿರುದ್ಧ ಚಳುವಳಿ

......ಪತ್ರಿಕೆ

ಸುಂದರವಾದ ಪರಿಸರ ನಾಶ ಮಾಡಲು ಯಾರೋ
ಹೊರಟಂತಿದೆ !!

****

■

# ನಮ್ಮ ನಿಮ್ಮಲ್ಲಿ

ಶಿವಕುಮಾರ್

ತಿಂಗಳಿಗೊಮ್ಮೆ ನನ್ನ ತಮ್ಮ ಕೋರಮಂಗಲದಿಂದ ಮಲ್ಲೇಶ್ವರಕ್ಕೆ ನನ್ನನ್ನು ನೋಡುವ ಸಲುವಾಗಿ ಬರುತ್ತಾನೆ. ಈ ಬಾರಿ ಬಂದಾಗ ಕೈಯ್ಯಲ್ಲಿ ಒಂದು ಪುಸ್ತಕ ಹಿಡಿದುಕೊಂಡು ಬಂದಿದ್ದ. ಪುಸ್ತಕದ ಹೆಸರು, "ಯಾವ ಜನ್ಮದ ಮೈತ್ರಿ". ಲೇಖಕರು, ಮಾನ್ಯ ಚಿರಂಜೀವಿ ಸಿಂಘ್ ಅವರು. ಹೊರ ಹೊದಿಕೆಯ ಮೇಲೆ ಅವರ ಬಹು ಆಕರ್ಷಕ ವದನ. ಪಂಜಾಬಿನಿಂದ ಬಂದು, ನಮ್ಮ ಕರ್ನಾಟಕ ಸರ್ಕಾರದ ಸೇವೆಯಲ್ಲಿದ್ದು ಈಗ ನಿವೃತ್ತರಾಗಿ, ಬೆಂಗಳೂರಿನಲ್ಲೇ ನೆಲೆಸಿರುವ ಇವರು ತಮ್ಮ ಸಜ್ಜನಿಕೆಯಿಂದ ಎಲ್ಲರ ಪ್ರೀತಿ ಆದರಗಳಿಗೆ ಪಾತ್ರರಾಗಿದ್ದಾರೆ. ಇವರು, ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತನಾಡುವ ಸಂಗತಿ ನನಗೆ ತಿಳಿದಿತ್ತು. ಆದರೆ ಕನ್ನಡದಲ್ಲಿ ಪುಸ್ತಕವೊಂದನ್ನು ಬರೆದಿರುವ ಸಂಗತಿ ನನಗೆ ಹೊಸದು.

ಇವರು ಈ ಪುಸ್ತಕದಲ್ಲಿ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾರೆ. ಈ ನೆನಪುಗಳ ಹೊನಲಿನಲ್ಲಿ, ದಕ್ಷ ಆಡಳಿತದ ಬಗ್ಗೆ ವಿಶ್ಲೇಷಣೆಗಳ ಜೊತೆಗೆ ಕರ್ನಾಟಕದ ಅನೇಕ ಸಂಭಾವಿತ ವ್ಯಕ್ತಿಗಳೊಂದಿಗೆ ಇವರ ನಿಕಟ ಸಂಪರ್ಕದ ಬಗ್ಗೆ ಬಹು ಆತ್ಮೀಯ ಚಿತ್ರಣಗಳಿವೆ. ಪಂಜಾಬಿನ ಜೀವನ ಶೈಲಿಯ ಬಗ್ಗೆ ಪ್ರತ್ಯಕ್ಷ ದರ್ಶಿಯೊಬ್ಬನ ದೃಷ್ಟಿಕೋನಗಳಿವೆ. ಗಂಗೂಬಾಯಿ ಹಾನಗಲ್, ಆರ್.ಕೆ. ಲಕ್ಷ್ಮಣ್ ಮುಂತಾದ ಖ್ಯಾತನಾಮರೊಂದಿಗಿನ ಒಡನಾಟ ಬಹು ಸ್ವಾರಸ್ಯವಾಗಿ ಮೂಡಿಬಂದಿದೆ.

ಸರ್ಕಾರದ ಹಿರಿಯ ಅಧಿಕಾರಿಯಾಗಿ ಲೇಖಕರಿಗೆ ರಾಜ್ಯಾದ್ಯಂತ ಓಡಾಡುವ ಅವಕಾಶಗಳೇನು ಕಡಿಮೆಯೇ. ತರೀಕೆರೆಯಿಂದ ಹಿಡಿದು ಬೆಳಗಾಮಿನವರೆಗೂ ರಾಜ್ಯದ ವಿವಿಧ ಗ್ರಾಮ, ಪಟ್ಟಣ ಹಾಗೂ ನಗರಗಳಲ್ಲಿನ ತಮ್ಮ ಅನುಭವಗಳನ್ನು ಇವರು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

ಒಂದು ನೆನಪಿನ ತುಣುಕಿನಲ್ಲಿ ಗೋವಿಂದರಾಜುಲು ಅವರ ಪ್ರಸ್ತಾಪ ಬಂದಾಗ ಒಂದು ಕ್ಷಣ ಅವಾಕ್ಕಾದೆ. ಏಕಂದರೆ ಈತ ನನ್ನ ಸಹಪಾಠಿ ಹಾಗೂ ಆಪ್ತ ಗೆಳೆಯ. ತಕ್ಷಣ "ಚಿರಂಜೀವಿ ಸಿಂಘ್ ಅವರು ನನ್ನ ಗೆಳೆಯನ ಗೆಳೆಯ" ಅಂತ ನನ್ನ ಅಹಂಕಾರ ವಿಜೃಂಭಿಸಿತು. ವಿಜೃಂಭಿಸಲಿ ಬಿಡು ಬಡಪಾಯಿ ಅಂತ ನಾನು ಸುಮ್ಮನಾದೆ. ಸುಗತ ಶ್ರೀನಿವಾಸ ರಾಜು ರವರು ಈ ಪುಸ್ತಕಕ್ಕೆ ಒಂದು ಚೆಂದದ ಬೆನ್ನುಡಿಯನ್ನು ಬರೆದಿದ್ದಾರೆ. ಅದರ ಒಂದು ಭಾಗವನ್ನು ನಾನು ಉದ್ಧರಿಸಲೇ ಬೇಕು.

"ಜಗತ್ತು ಕಂಡು, ಅದರ ಮೂಲೆ ಮೂಲೆಗಳಲ್ಲಿ ಬದುಕಿ, ತಮ್ಮ ಲೋಕದೃಷ್ಟಿ ವಿಸ್ತರಿಸಿಕೊಂಡು, ಆಧುನಿಕತೆಯ ಒಳ ಹೊರಗನ್ನು ಅರಿಯುತ್ತಲೇ ಸಂಪ್ರದಾಯಕ್ಕೆ ವಿಶಾಲತೆಯ ಚಾದರವನ್ನು ಹೊದಿಸಿದ ಸಿಂಘ್ ಸಾಹೇಬರು ನಮ್ಮಲ್ಲಿ ನಮ್ಮವರಾಗಿ ಬದುಕಿದ್ದು ಅವರ ದೊಡ್ಡತನ. ಅವರ ಸಂಸ್ಕಾರಕ್ಕೆ ಹಿಡಿದ ಕನ್ನಡಿ. ಆದರೆ ನಾವು ಅವರಿಂದ ಕಲಿತದ್ದು ಏನು? ಅವರ ಶ್ರೀಮಂತಿಕೆಯನ್ನು ನಮ್ಮದಾಗಿಸಿಕೊಂಡದ್ದು ಹೇಗೆ? ಅವರ ಘನತೆ, ಸೂಕ್ಷ್ಮತೆ ಮತ್ತು ಪ್ರಬುದ್ಧತೆಗೆ ನಾವು ಸ್ಪಂದಿಸಿದ್ದು ಹೇಗೆ? ಅವರ ಭಾಷೆ ಅವರ ಧರ್ಮ, ಅವರ ಸಂಸ್ಕೃತಿಯ ವಿಶೇಷಗಳಿಗೆ ನಾವು ತೆರೆದುಕೊಂಡದ್ದು ಹೇಗೆ? ಇದೆಲ್ಲವನ್ನು ನಾವು ಯೋಚಿಸಬೇಕಿದೆ. ಹೀಗೆ ಯೋಚಿಸುವುದರ ಮೂಲಕ ನಾವು ನಮ್ಮ ಸಂಕುಚಿತತೆ, ಸಣ್ಣತನ, ಅಹಂಕಾರ,

ಅಸಹನೆ ಅಂಧಾಭಿಮಾನವನ್ನು ಮೀರಬೇಕಿದೆ. ನಮಗೆ ಇರಬಹುದಾದ ನಮ್ಮ ಶ್ರೇಷ್ಠತೆಯ ವ್ಯಸನದ ಸೂಚನೆಗಳನ್ನು ಧಿಕ್ಕರಿಸಬೇಕಿದೆ. ಇಲ್ಲಿರುವ ಲೇಖನಗಳು ನಮಗೆ ಈ ದಿಕ್ಕಿನಲ್ಲಿ ಸಾಗುವುದಕ್ಕೆ ಅನುವು ಮಾಡಿಕೊಡಲಿವೆ."

ಕರ್ನಾಟಕದ ಸೊಬಗನ್ನು ಸವಿಯಲು, ನೋಡುವ ಕಣ್ಣುಗಳ ಹಿಂದೆ ಬೆರಗುಗೊಳ್ಳುವ ಮನ ಇರಬೇಕಾಗುತ್ತದೆ. ಇಲ್ಲಿ ನೋಡಿ, ಸಿಂಘರು ಕಂಡ ಕರ್ನಾಟಕ.

"ನನ್ನ ಕರ್ನಾಟಕ ಎರಡು ಬಣ್ಣಗಳಿಗೆ ಸೀಮಿತವಾಗುವುದಿಲ್ಲ. ಅದು ಒಂದು ಚೆಲುವಿನ ಕಾಮನ ಬಿಲ್ಲು. ಅದರಲ್ಲಿ ಕಡಲಿನ ನೀಲಿ ಬಣ್ಣ, ಮಲೆನಾಡಿನ ಹಸಿರು ಬಣ್ಣ, ಶ್ರೀಗಂಧದ ಗೋಧಿ ಬಣ್ಣ, ಉತ್ತರ ಕರ್ನಾಟಕದ ಕರಿ ಮಣ್ಣಿನ ಬಣ್ಣ, ಹಳೆ ಮೈಸೂರಿನ ಕೆಮ್ಮಣ್ಣಿನ ಬಣ್ಣ, ಸ್ಪಟಿಕ, ಕನಕಾಂಬರ ಮತ್ತು ಮಲ್ಲಿಗೆ ಹೂಗಳ ಬಣ್ಣ, ಬೆಟ್ಟಸಾಲುಗಳ ಬೂದು ಬಣ್ಣ, ಅರಿಶಿನ ಕುಂಕುಮದ ಹಳದಿ ಕೆಂಪು ಬಣ್ಣಗಳು ಜೊತೆಗೂಡಿವೆ. ಕರ್ನಾಟಕ ಎಷ್ಟೋ ಚೆಲುವಾದ ನಾಡು. ಅದರ ಉದಯವೇನೋ ಆಗಿದೆ. ಆದರೆ ಅದರ ಚೆಲುವು ನಿರ್ಲಕ್ಷಿಸಲ್ಪಟ್ಟಿದೆ....."

"ಕರ್ನಾಟಕಕ್ಕೆ ಬಂದ ಮೇಲೆ ಹೊಸ ವರ್ಷ ಅಂದರೆ ಯುಗಾದಿ ಅಂತ ಗೊತ್ತಾಯಿತು. ಯುಗಾದಿಯ ಬೇವು ಬೆಲ್ಲ ಸಂಪ್ರದಾಯ ನನಗೆ ಹಿಡಿಸಿತು. ಬರುವ ವರ್ಷದಲ್ಲಿ ಕಹಿ, ಸಿಹಿ ಎಲ್ಲ ಇರುತ್ತದೆ. ಅದನ್ನು ಸಮಭಾವದಿಂದ ಸ್ವೀಕರಿಸಬೇಕು ಎಂಬ ಯುಗಾದಿಯ ಸಂದೇಶವನ್ನು ನಾನು ಮೆಚ್ಚುತ್ತೇನೆ. ಗುರುತೇಗ್ ಬಹಾದುರ್ ಅವರು ತಮ್ಮ ಒಂದು ಶಬದ್ (ಕೀರ್ತನೆ) ಯಲ್ಲಿ ಹೇಳಿದ್ದಾರೆ. "ಸುಖ ದುಃಖ ಎರಡನ್ನು ಸಮಭಾವದಿಂದ ತಿಳಿಯುವವರು, ಹಾಗೆಯೇ ಮಾನ ಅಪಮಾನ ಹರ್ಷ ಶೋಕದಿಂದ ಅತೀತರಾದವರು ತತ್ವವನ್ನು ಅರಿಯುತ್ತಾರೆ." ಬೇವು ಬೆಲ್ಲ ಸಮಭಾವದ ಪ್ರತೀಕ. ಹೊಸ ವರ್ಷಕ್ಕೆ ಇದಕ್ಕಿಂತ ಬೇರೆ ಆಚರಣೆ ಬೇರೆ ಇಲ್ಲ."


ಚಿರಂಜೀವಿ ಸಿಂಘ್ ಅವರಿಗೆ ಔದಾರ್ಯ, ಕರ್ತವ್ಯ ನಿಷ್ಠೆ ಇವೆಲ್ಲಾ ಸಹಜ ಗುಣಗಳಾಗಿರುವಂತೆ ಸೂಕ್ಷ್ಮ ಸಂವೇದನೆಯೂ ಅವರಿಗೆ ದೈವದತ್ತವಾದ ಗುಣ. ಉತ್ತರ ಕರ್ನಾಟಕದ ಊಟದ ತಾಟು ಅವರಿಗೆ ಹೀಗೆ ಕಾಣಿಸುತ್ತದೆ.

"ಉತ್ತರ ಕರ್ನಾಟಕದ ಊಟದ ತಾಟನ್ನು ನೋಡಿದರೆ ದುರ್ಗಾ ಭಾಗವತ್ ಅವರು ಬರೆದಿರುವ ಮಾತಿನ ಅರ್ಥ ಸ್ಪಷ್ಟವಾಗುತ್ತದೆ. ಆ ತಾಟಿನ ಎಡಭಾಗದಲ್ಲಿ ಹವಳ ಬಣ್ಣದ ಶೇಂಗಾ ಚಟ್ನಿ, ಕಪ್ಪು ಬಣ್ಣದ ಗುರೆಳ್ಳು ಚಟ್ನಿ, ಕಂದು ಬಣ್ಣದ ಅಗಸಿ ಚಟ್ನಿ, ಕೆಂಪು ಮಾಣಿಕ್ಯ ಬಣ್ಣದ ಬ್ಯಾಡಗಿ ಮೆಣಸಿನ ಕಾಯಿ ಚಟ್ನಿ, ತಿಳಿ ಗುಲಾಬಿ ಬಣ್ಣದ ಉಳ್ಳಾಗಡ್ಡಿ, ಹಸಿರು ಬಣ್ಣದ ಎಳೆ ಮೆಂತ್ಯ ಸೊಪ್ಪು, ಹಳದಿ ಬಣ್ಣದ ಹಪ್ಪಳ, ಬಿಳಿ ಬಣ್ಣದ ಗಟ್ಟಿ ಮೊಸರು, ತಿಳಿ ಹಸಿರು ಬಣ್ಣದ ಸೌತೆಕಾಯಿ, ಹಸಿರು ಮೆಣಸಿನ ಕಾಯಿ ಇತ್ಯಾದಿ ಇರುತ್ತದೆ. ಬಲಭಾಗದಲ್ಲಿ ಬದನೆಕಾಯಿ ಎಣ್ಣೆಗಾಯಿ, ಮಡಿಕೆ ಕಾಳು ಉಸುಳಿ, ಮತ್ತಿತರ ಪಲ್ಯಗಳಿರುತ್ತವೆ. ತಾಟಿನ ಮಧ್ಯದಲ್ಲಿ ಜೋಳದ ರೊಟ್ಟಿ ಮತ್ತು ಖಡಕ್ ಸಜ್ಜೆ ರೊಟ್ಟಿ, ಅದರಲ್ಲಿ ಗಗನದ ನಕ್ಷತ್ರದ ಹಾಗೆ ಎಳ್ಳು ಇಣುಕುತ್ತಿರುತ್ತದೆ. ಇದು ಯಾವುದೇ ಚಿತ್ರಕಾರನ ಪ್ರತಿಭೆಗಿಂತ ಕಡಿಮೆ ಅಲ್ಲ."

ಸಿಂಘ್ ಸಾಹೇಬರ ಪರಿಚಿತ ವಲಯದಲ್ಲಿ ಅಸಂಖ್ಯಾತ ಕಲೆಗಾರರು, ಸಾಹಿತಿಗಳು ನಾಟಕಕಾರರು ಇದ್ದರು. ಅವರು ತಮ್ಮ ನೆನಪಿನ ಭಂಡಾರದಿಂದ ಉದಹರಿಸಿರುವ ಪಾತ್ರಗಳಲ್ಲಿ ನಟ ಸಿ.ಆರ್. ಸಿಂಹ, ಸಿನಿಮಾ ನಿರ್ಮಾಪಕ ಭಕ್ತವತ್ಸಲ, ಸಂಗೀತಗಾರ ಶ್ರೀಕಂಠನ್, ಗಾಯಕ ಪಿ.ಬಿ.ಶ್ರೀನಿವಾಸ್ ಇವರೆಲ್ಲ ಕಂಡುಬರುತ್ತಾರೆ. ಬಾಲಿವುಡ್‌ನ

ಸಂಗೀತ ಸಂಯೋಜಕ ಅನಿಲ್‌ದಾ ಬಗ್ಗೆ ಅವರ ಮಾತುಗಳನ್ನು ಇಲ್ಲಿ ಕೇಳಿ.

"ಖ್ಯಾತ ಸಂಗೀತ ಸಂಯೋಜಕ ಅನಿಲ್ ಬಿಸ್ವಾಸ್ ಬಳಿ ಒಂದು ದಿನ ಮೋತಿಲಾಲ್ ಅವರು ಒಬ್ಬ ಯುವಕನನ್ನು ಕರೆತಂದು, "ಇವನು ನಮ್ಮ ನೆಂಟರ ಹುಡುಗ. ಇವನಿಗೆ ಹಾಡುವುದೆಂದರೆ ಪಂಚಪ್ರಾಣ. ಇವನನ್ನೇನಾದರೂ ಮಾಡಬಹುದಾ ನೋಡು" ಎಂದರು. ಮೋತಿಲಾಲ್ ಬಗ್ಗೆ ಇದ್ದ ಗೌರವದಿಂದಾಗಿ ಅನಿಲ್ ದಾ ಅವರು ಆ ಯುವಕನಿಗೆ "ಪೆಹಲಿ ನಝರ್" (1945) ಸಿನಿಮಾದಲ್ಲಿ ಹಾಡಲು ಅವಕಾಶ ಕೊಡಲು ನಿರ್ಧರಿಸಿದರು. ಕೆಲವು ತಾಲೀಮುಗಳಾದ ಮೇಲೆ ಆ ಹಾಡು ರೆಕಾರ್ಡಿಂಗ್‌ಗೆ ಸಿದ್ಧವಾಯಿತು. ಸ್ಟುಡಿಯೋ ಗೊತ್ತು ಮಾಡಲಾಗಿತ್ತು. ಆರ್ಕೆಸ್ಟ್ರಾದವರು ಕಾಯುತ್ತಿದ್ದರು; ಆದರೆ ಹಾಡುಗಾರ ನಾಪತ್ತೆ! ಅನಿಲ್ ದಾ ಕೆಂಡಾಮಂಡಲವಾದರು. ಕೂಡಲೇ ತಮ್ಮ ಗೆಳೆಯ ಮೋತಿಲಾಲ್‌ಗೆ ಫೋನ್ ಮಾಡಿ, "ಎಲ್ಲಿ ನಿನ್ನ ಹುಡುಗ?" ಎಂದರು. ಆದರೆ, ಮೋತಿಲಾಲ್‌ಗೂ ಅವನು ಎಲ್ಲಿದ್ದಾನೆ ಎಂದು ಗೊತ್ತಿರಲಿಲ್ಲ. ಕೊನೆಗೆ ಎಲ್ಲೆಲ್ಲಿಗೋ ಫೋನ್ ಕರೆಗಳನ್ನು ಮಾಡಿದ ಮೇಲೆ ಅವನು ಯಾರೋ ಕೆಲವು ಗೆಳೆಯರ ಜೊತೆ ಹೆಂಡ ಕುಡಿಯುತ್ತ, ಇಸ್ಪೀಟ್ ಆಡುತ್ತಿರುವುದು ಗೊತ್ತಾಯಿತು. ಅನಿಲ್‌ದಾ ಅವರ ಜೊತೆ ಕೂತು ರೆಕಾರ್ಡಿಂಗ್ ಮಾಡಬೇಕಲ್ಲ ಎಂಬ ಯೋಚನೆಗೇ ಆ ಯುವಕ ಅಧೀರನಾಗಿ, ಸ್ವಲ್ಪ ಧೈರ್ಯ ಏರಿಸಿಕೊಳ್ಳಲು ಒಂದೆರಡು ಪೆಗ್ಗು ಹಾಕಲು ಹೋಗಿದ್ದ. ಆದರೆ ಅದರ ಜೊತೆ ಇಸ್ಪೀಟಾಟ ಸೇರಿ ಅವನಿಗೆ ಸಮಯದ ಪರಿವೆ ಸಹಾ ಕಳೆದುಹೋಗಿತ್ತು. ಅನಿಲ್‌ದಾ ಅವರು ಒಂದು ಕಾರು ತೆಗೆದುಕೊಂಡು, ಅವನು ಇದ್ದಲ್ಲಿಗೆ ಹೋಗಿ, ಅವನ ಕೆನ್ನೆಗೆ ಒಂದು ಬಾರಿಸಿ, ಅವನನ್ನು ಎಳೆದುಕೊಂಡು ಬಂದು ಕಾರಲ್ಲಿ ಕುಳ್ಳಿರಿಸಿ, ಸ್ಟುಡಿಯೋಗೆ ತಂದು, ನೀರಿನ ಬಕೆಟ್ ಒಂದರಲ್ಲಿ ಅವನ ತಲೆಯನ್ನು ಚೆನ್ನಾಗಿನ ಅದ್ದಿ ತೆಗೆದು, ಆಮೇಲೆ ಒಂದೇ ಟೇಕಿಗೆ ಆ ಹಾಡಿನ ಧ್ವನಿ ಮುದ್ರಣ ಮುಗಿಸಿದರು. ಆ ಹಾಡು, "ದಿಲ್ ಜಲ್ತಾಹೈ, ತೋ ಜಲ್ನೇ ದೇ.......". ಹಾಡುಗಾರ ಮುಖೇಶ್. ಮುಖೇಶ್ ಅವರ ಸಿನಿಮಾ ವೃತ್ತಿ ಶುರುವಾಗಿದ್ದು ಹೀಗೆ. ಮುಂದಕ್ಕೆ ಅನಿಲ್‌ದಾ ತುಂಬಾ ತಮಾಷೆಯಾಗಿ "ನಾನು ಅವನ ಕಪಾಳಕ್ಕೆ ಬಾರಿಸಿದೆ ನೋಡು, ಆ ಏಟಿನ ನೋವೇ ಅವನ ಆ ಹಾಡಿಗೆ ಅದ್ಭುತ ಶೋಕ ತಪ್ತತೆಯನ್ನು ತಂದುಕೊಟ್ಟಿದ್ದು..." ಎಂದು ಹೇಳುತ್ತಿದ್ದರು."




ಒಟ್ಟಿನಲ್ಲಿ ಒಂದು ಒಳ್ಳೆಯ ಓದು ಈ ಪುಸ್ತಕ. ನವಕರ್ನಾಟಕದವರು ಪ್ರಕಟಿಸಿರುವ ಈ ಪುಸ್ತಕ ನಿಮ್ಮ ಆಪ್ತ ಪುಸ್ತಕಗಳ ಕಪಾಟನ್ನು ಅಗತ್ಯವಾಗಿ ಸೇರಬಹುದು.

■

# ಪಲಾಜೋ ಖರೀದಿಯ ಕತೆಯು!

✍ ಜಯಶ್ರೀ ದೇಶಪಾಂಡೆ

ನಮ್ಮ ಬೆಂಗಳೂರಿನಲ್ಲಿ ಏನಿಲ್ಲವೆಂದರೂ ಇಪ್ಪತ್ತಿಪ್ಪತ್ತೈದು ಬೊಂಬಾಟ್ 'ಮಾಲ್' ಗಳಿಗೆ ಬರವಿಲ್ಲ ಹೌದಲ್ಲ? ನಾನು ಅಂಥದರಲ್ಲೆ ಒಂದಾವುದೋ ದೊಡ್ಡದನ್ನಾಯ್ದು–ಕೊಂಡು ಮಟ ಮಟ ಮಧ್ಯಾಹ್ನದ ಹೊತ್ತಿನಲ್ಲಿ ಅದರೊಳಗೆ ನುಗ್ಗಿದ್ದೆ.

ಲಿಫ್ಟಿಗಾಗಿ ಕಾದು ಬಸವಳಿದು ಕೊನೆಗೆ ಎಸ್ಕಲೇಟರಿಗೆ ಶರಣಾಗಿ ಮೂರನೆಯ ಮಹಡಿಗೇರಿ ಅಲ್ಲಿನ ಬೃಹತ್ ಲೇಡಿಸ್ ಸೆಕ್ಷನ್ನಿನಲ್ಲಿ ಅರಬ್ಬೀ (ಉತ್ತರ ಕರ್ನಾಟಕದವರಂತೆ–ಅರಿವೆ ಅನ್ನಿ ಬೇಕಾದರೆ) ಸಮುದ್ರದಲ್ಲಿ ಕಳೆದು ಹೋಗುವುದಕ್ಕೂ ಮೊದಲು ನಾನು ಅಲ್ಲಿಗೆ ಬಂದಿದ್ದು ಪಲಾಜೋ ಖರೀದಿಗೆ ಎಂದು ಇನ್ನೊಮ್ಮೆ ನೆನಪಿಸಿಕೊಂಡು ಆ ಸೆಕ್ಷನ್ ಹುಡುಕಿ ಹೋದೆ... ಹೋದದ್ದೇನೋ ನಿಜ, ಆದರೆ ಆಮೇಲೆ ಆ ಚಕ್ರವ್ಯೂಹದಿಂದ ಹೊರಬರುವ ದಾರಿ ನೆನಪಿಟ್ಟುಕೊಳ್ಳಬೇಕಿತ್ತಲ್ಲ ಎಂದು ಅನಿಸಿ ಹೋಗಲಿ ಹೊರಡುವ ಹೊತ್ತು ಬಂದಾಗ ತಲೆ ಕೆಡಸಿಕೊಂಡ್ರಾಯ್ತು ಅಂತ ನನಗೇ ಹೇಳಿಕೊಳ್ಳುತ್ತ ಸಾಗುವಾಗ.. ಅಲ್ಲಿ ತಮ್ಮ ಡಿಸ್ಕೌಂಟು ಗಾಥೆಗಳನ್ನು ನಾನಾ ರಾಗಗಳಲ್ಲಿ ಹಾಡಿಕೊಂಡು ಸ್ವಯಂರತಿಯಲ್ಲಿ ಲಾಭದತ್ತ ಕಣ್ಣಿಟ್ಟಿರುವ ಆ ಮಾಲಿನ ಹವಾನಿಯಂತ್ರಿತ ಅಂಗಳವಿಡೀ ತುಂಬಿ ತುಳುಕುವ ಕಣ್ಣಿಗೆ ತಂಪು, ಪರ್ಸಿಗೆ ತೂತು ಮಾಡುವ ಆಕರ್ಷಣೆಗಳ ಗಿರಗಿಟ್ಲೆಯೊಳಗೆ ಕಳೆದು ಹೋಗುವ ಮೊದಲು ನನಗಲ್ಲದಿದ್ದರೂ ಇನ್ನೊಬ್ಬರಿಗೆ ಏನೋ ಖರೀದಿಸಬೇಕಿತ್ತು!

ಅಂದ ಹಾಗೆ ವಸ್ತ್ರಲೋಕಕ್ಕೆ ಕಳೆದ ಕೆಲವು ಸಮಯದ ಕೊಡುಗೆಯಾಗಿ ಹುಟ್ಟಿ ಬಂದಿರುವ...ಸೊಂಟದಿಂದ ಎರಡು ಕಾಲಿಗಿಳಿವ ಈ 'ಪಲಾಜೋ' ಎಂಬ ಅವತಾರವನ್ನು ನೀವೆಲ್ಲ ನೋಡಿರಲಿಕ್ಕೂ ಸಾಕು. ಒಂದೂವರೆ ಮೀಟರು ಬಟ್ಟೆಯಿಂದ ಹಿಡಿದು ಐದು ಮೀಟರಿನ ಅಗಲಕ್ಕೂ ಹಿಗ್ಗಿಸಿ ಕಾಲುಗಳೆಲ್ಲಿ ಇದರೊಳಗೆ ಎಂದು ಹುಡುಕಬೇಕಾಗಿ ಬರುವ ಅಗಳ ಬಗಳ ಕಾಲ್ಚೋಳಿಗೆ ! ಇವನ್ನು ಹೊಲಿದಿರುವ ನಮೂನೆಗಳು ಕೂಡ ದಂಗುಬಡಿಸಿ ಅಯ್ಯೋ ಈ ಹತ್ತು ಸಾವಿರ ಪಲಾಜೋಗಳಲ್ಲಿ ನನಗೆ ಬೇಕಾದ ಎರಡನ್ನು ಹೆಂಗಪ್ಪಾ ಹೆಕ್ಕಲಿ? ಅನಿಸಿ, ಅದಂತೂ ಬಿಡಿ ಕೆಳಗಿನ ಭಾಗಕ್ಕೆ ಹೊಂದುವ ಅದರ ಉತ್ತರಾರ್ಧ ಅಥವಾ ಮೇಲಂಗಿಯನ್ನು ಹೇಗೆ ಮ್ಯಾಚ್ ಮಾಡಿ ಹುಡುಕಲಿ? ಇದೊಳ್ಳೇ ಹರ್ಕ್ಯೂಲನ್ ಟಾಸ್ಕ್ ಆಯ್ತಲ್ಲ ಅನಿಸುವಾಗಲೇ ಇನ್ನೊಂದು ಅನುಮಾನ ಕಾಡಿತು.

ಈ ಬಟ್ಟೆಗಳನ್ನು ಇಲ್ಲಿ 34–24–36 ಅಳತೆಯವರಿಗೆ ಹಾಕಿ ನಿಲ್ಲಿಸಿದ ಪರಿ ಉಂಟಲ್ಲ ಈ 36–24–36ರ ಉಲ್ಟಾ ಅಳತೆಯಿದ್ದವರು ಏನು ಮಾಡಬೇಕು? ಅವರಿಗೂ ಸುಲಭವಾಗಿ ಸಿಕ್ಕಾವೇ ಇವು? ಅಥವಾ ಇವೆಲ್ಲ ಕೇವಲ ಕೆಲವರೇ ಹಾಕ್ಕೊಳ್ಳಬೇಕೋ ಎಂದೆಲ್ಲ ತಲೆ ಕೆಟ್ಟು ಚಿಟ್ಟಿಡಿಯುವ ಸಮಯ ಆದರೆ ನನಗಂತೂ ಈ ಅಳತೆ ಗಿಳತೆಯ ಬಗ್ಗೆ ಹೀಗೆ ಚಿಂತೆ ಮಾಡಬೇಕಿಲ್ಲವಲ್ಲ ಅಂತ ಕೂಡ ಅನಿಸಿ ಇನ್ನು ಈ ಮ್ಯಾಚಿಂಗ್ ಎಂಬ ಯಕ್ಷಪ್ರಶ್ನೆಯನ್ನು ಬಿಡಿಸುವುದು ಹೇಗೆ ಅಂತ ಚಿಂತಾಕ್ರಾಂತಳಾಗಿದ್ದಾಗ ಅಲ್ಲಿಂದ ಒಂದು ಚಂದದ ಪಲಾಜೋ ಹಾಕಿಕೊಂಡ ಹುಡುಗಿ ಇತ್ತಲೇ ಟುಕು ಟುಕು ಬಂದದ್ದು ಕಂಡು ಅತೀವ ಖುಷಿಯಾಗಿ ಇವಳನ್ನು ಕೇಳಿದರೆ ಹೇಗೆ ಅನಿಸಿ ಅಲ್ಲಿಗೆ ಓಡಿ... ಮುಗುಳುನಗೆ ಚೆಲ್ಲಿ "ಓಹ್. ಯುವರ್

ಡ್ರೆಸ್ ಇಸ್ ವೆರಿ ನೈಸ್.. ನನಗೂ ಇಂಥದ್ದೇ ಬೇಕಿತ್ತು.. ಸ್ವಲ್ಪ ಆರ್ಸೋಕೆ ಹೆಲ್ಪ್ ಮಾಡ್ತೀರಾ ಇಫ್ ಯೂ ಡೋಂಟ್ ಮೈಂಡ್?" ಅಂತ ಅವಳನ್ನು ಅನುನಯಿಸಿದೆ... ಹಾಗೆ ಅಲ್ಲೇ ಠಳಾಯಿಸುವ ಸೇಲ್ಸ್ ಹುಡುಗಿಯರನ್ನು ಕೇಳಬಹುದಿತ್ತು ಆದರೆ ಅವರು ಇಂಡೈರೆಕ್ಟಾಗಿ ತಾನು ಮಾರುವ ಬಟ್ಟೆಯನ್ನೇ ಕೊಳ್ಳಲು ಪುಸಲಾಯಿಸುವ ಅಪಾಯ ಇರೋದು ನಿಜ ತಾನೇ?

ಆ ಹುಡುಗಿ ನಕ್ಕು "ಓ ಶೂರ್ ಆಂಟೀ...ಇದು ನಿಮಗಾ? ಇಸ್ ಇಟ್ ಫಾರ್ ಯೂ" ಅನ್ನುತ್ತ ನನ್ನೆಡೆಗೊಂದು ಕಿರು ಶಂಕಾಸ್ಪದ ನೋಟ ಬೀರಿದಳು... 'ಅಯ್ಯೋ ಅಮ್ಮಯ್ಯಾ, ನನ್ನ ಕಂಡ್ರೆ ನಾನೀ ಪಲಾಜೋ ಹಾಕ್ಕೋತೀನಿ ಅನ್ನಿಸ್ತದಾ ನಿನಗೇ' ಅನ್ನಬೇಕನಿಸಿದರೂ ನಾಲಿಗೆ ಒತ್ತಿ ಹಿಡಿದು. "ಓ ನೋ..ನೋ ಆಕ್ಚುವಲಿ ಇಟೀಸ್ ಫಾರ್ ಮಾಯ್ ಡಾಟರ್.. ಎಂದು ನಕ್ಕು ನನ್ನ ಮಗಳಿಗೆರಡು ಬೇಕಂತ ಬಂದೆ..ಕೊಂಚ ಮ್ಯಾಚಿಂಗ್ ಮಾಡಿಕೊಡು ಸ್ವೀಟಿ .." ಅಂದೆ.

"ಓ.. ಓಕೆ ಆಂಟೀ ಐ ಥಾಟ್ ಅದು ನಿಮಗೆ ಅಂದ್ಕೊಂಡೆ, ಆದರೂ ನಿಮ್ಮ ಫಿಗರ್ ಇಷ್ಟು ಚೆನ್ನಾಗಿದೆಯಲ್ಲ ಅದಕ್ಕೇ.." ಅಂತ ನಕ್ಕರೂ ಇನ್ನಷ್ಟು ಏನೋ ಅನುಮಾನದ ದೃಷ್ಟಿ ಬೀರಿ ಹುಡುಗಿ ಹ್ಯಾಂಗರುಗಳಿಗೆ ಕೈ ಹಾಕಿದಳು...!

'ಅಲ್ಲ, ನಾನಿನ್ನೂ ಚೂಡಿದಾರಕ್ಕಿಂತ ಹೆಚ್ಚು ಮುಂದುವರಿದಿಲ್ಲ ಅದೂ ಅನುಕೂಲವೇ ಮುಖ್ಯ ಅಂತ ಹಾಕುತ್ತೀನಿ ಅಷ್ಟೇ ಹೊರತು' ಅನ್ನಬೇಕನಿಸಿದರೂ ನಾನು ವಿದೇಶದಲ್ಲಿ ಮುಲಾಜಿಲ್ಲದೆ ಕುರ್ತಾ ಕೆಳಗೆ ಜೀನ್ಸ್ ಹಾಕ್ತೀನಲ್ಲ...ಇಲ್ಲಾಂದ್ರೆ ನಮ್ಮ ತೆಳು ಪೈಜಾಮ ಆ ಚಳಿ ತಡೀದೇ ನನ್ನ ಕಾಲೇ ಕೊರೆದು ಹಾಕಲ್ವೇ..." ಎನ್ನುವ ಪೂರ್ಣ ಪುರಾಣವನ್ನು ಅವಳಿಗೆ ಯಾಕೆ ಹೇಳಬೇಕು ಬಿಡು ಅನಿಸಿ ಸುಮ್ಮನಾದೆ. ಮತ್ತಿನ್ನೇನೂ ಮಾತಾಡದೆ ನನ್ನ ಬಟ್ಟೆಗಳ ಆಯ್ಕೆಯ ಭಾರವನ್ನು ಅವಳ ಹೆಗಲಿಗೆ ವರ್ಗಾಯಿಸಿ ಅವಳ ಹಿಂದಿಂದೇ ಸುತ್ತಿದೆ. ಮಾತಾಳಿ ಆ ಹುಡುಗಿ ನನ್ನ ಮಗಳ ವಯಸ್ಸು, ಹೈಟು, ಬಣ್ಣ ಇತ್ಯಾದಿ ಕೇಳುತ್ತಾ "ವಾವ್ ಯುವರ್ ಡಾಟರ್ ಹ್ಯಾಸ್ ನೈಸ್ ಸೈಜಸ್ ಆಂಟೀ..." ಅನ್ನುತ್ತ ಹತ್ತೆಂದರೆ ಹತ್ತೇ ನಿಮಿಷಗಳಲ್ಲಿ ನಾಲ್ಕಾರು ಪಲಾಜೋ ಮತ್ತು ಅವಕ್ಕೊಪ್ಪುವ ಟಾಪ್ ಹೆಕ್ಕಿ ನನಗೆ ತೋರಿಸಿದಳು...ಇದು ಹೀಗೆ ಕಾಂಟ್ರಾಸ್ಟ್ ಮ್ಯಾಚ್ ಮಾಡಿದರೆ ತುಂಬ ಬ್ಯೂಟಿಫುಲ್...ಹೀಗೆಲ್ಲ ಹೇಳುತ್ತ ಅಂತೂ ಎಲ್ಲ ಬಟ್ಟೆಗಳ ಆಯ್ಕೆ ಆಗಿಬಿಟ್ಟಿತು! ಅರೆ ಎಷ್ಟು ಚಂದ ಇವೆಯಲ್ಲ ಇವು... ಅಷ್ಟಲ್ಲದೇ ಹೇಳ್ತಾರೇನು ಇಂದಿನ ಪೀಳಿಗೆಯೇ ಇಂದಿನ ಪೀಳಿಗೆಯನ್ನರಿಯುತ್ತೆ ಅಂತ... ಹೀಗೆಲ್ಲ ಏನೋ ಅನಿಸಿ ಒಟ್ಟಿನಲ್ಲಿ ಖುಷಿಯಾಗಿ ಅವಳಿಗೆ ಮನಃಪೂರ್ವಕ ಧನ್ಯವಾದ ಹೇಳಿ "ಬಾಮ್ಮಾ ನಂಜೊತೆ ಸ್ವಲ್ಪ ಕಾಫಿ ಕುಡಿ ಬಾ ಅಂದೆ"

"ಓ ನೋ ಆಂಟೀ ನನ್ನ ಫ್ರೆಂಡ್ ಕಾಯ್ತಾ ಇರ್ಬೇಕು.. ನಿಮಗೆ ಬಟ್ಟೆ ಇಷ್ಟ ಆಯ್ತಲ್ಲ ಅದೇ ಖುಷಿ ನಂಗೆ. ಬರ್ತೀನಿ" ಅಂದವಳೇ ಅತ್ತ ಹೊರಳಿದಳು, ನಾನೂ ಅತ್ತ ನೋಡಿದರೆ ಅಲ್ಲೇ ಕಾಫೀ ಡೇ ಸೆಕ್ಷನ್ನಿನಲ್ಲಿ ಅವಳ ಗಂಡು ಫ್ರೆಂಡೊಂದು ಅವಳಿಗಾಗಿ ಕೂತು ಕಾಯುತ್ತಿದ್ದ. ಅವನ ತೊಡೆಯಿಂದ ಕೆಳಗಿಳಿಯದ ಬರ್ಮುಡಾಕ್ಕೆ ಹಾಕಬೇಕಿದ್ದ ಬಟ್ಟೆಯನ್ನೆಲ್ಲ ಇವಳ ಪಲಾಜೋ ಕಬಳಿಸಿತ್ತು ಎಂದನಿಸಿದ ಕಿರುಕುಹಕ ಯೋಚನೆಗೆ ನನ್ನನ್ನೇ ಬೈದುಕೊಂಡೆ 'ಪಾಪ ಸಹಾಯ ಮಾಡಿದೆ ಹುಡುಗಿ...ಅವಳಿಗೆ ಇವತ್ತು ಒಳ್ಳೇ ಡಿಸ್ಕೌಂಟು ಸಿಕ್ಕು ಒಳ್ಳೇ ಉಡುಪೂ ಸಿಗಲಿ' ಅಂತ ಮನದಲ್ಲೇ ಹಾರೈಸಿದೆ!

ಅಷ್ಟರಲ್ಲಿ ಮತ್ತೆರಡು ಹೆಜ್ಜೆ ಇಟ್ಟ ಹುಡುಗಿ ಹಿಂದೆ ತಿರುಗಿ "ಅರೇ ಆಂಟೀ ಇದು ನೀವು ಹಾಕ್ಕೊಂಡ್ರೆ ಚಂದ ಇರುತ್ತೆ. ವೈ ಡೊಂಟ್ ಯೂ ಟ್ರೈ?" ಅಂದು ನನ್ನ ನೋಡಿ ನಕ್ಕು ತಿರುಗಿ ಹೋದಳು...

ಯಾಕಾಗ್ಬಾರದು?

ಮುಗುಳ್ನಗೆ ಅಷ್ಟೇ ನನ್ನಿಂದ!!

■

## ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



# ಕಲ್ಯಾಣ ವೈಭೋಗವೇ !

ಚಿತ್ರಾ ರಾಮಚಂದ್ರನ್

"ಮುಂಬೈಯಲ್ಲಿ ಒಳ್ಳೆ ಪುರೋಹಿತರು ಸಿಕ್ತಾರೇನೇ? ಮದುವೆ ಶಾಸ್ತ್ರೋಕ್ತವಾಗಿ ನಡೀಬೇಕಲ್ಲ ಅನ್ನೋ ಆತಂಕ ನನಗೆ! ಅಂದ ಹಾಗೆ ಹುಡುಗಿ ಕಡೆಯವ್ರಿಗೆ ನಮ್ಮ ಸಂಪ್ರದಾಯಗಳೆಲ್ಲ ಗೊತ್ತಿರತ್ತ? ಇಲ್ವ?! ಛತ್ರಿ, ಚಪ್ಲಿ, ವಾಕಿಂಗ್ ಸ್ಟಿಕ್ಕು ಇನ್ನು ಕಾಶಿ ಯಾತ್ರೆಗೆ ಬೇಕಾದ ವಸ್ತುಗಳನ್ನೆಲ್ಲ ನೀವೇ ಇಲ್ಲಿಂದ ಕೊಂಡ್ಕೊಂಡು ಹೋಗೋದು ಒಳ್ಳೇದು! ಮುರುಕ್ಕು, ಅದಿರಸ, ಲಾಡು, ಮೈಸೂರುಪಾಕು, ಮುತ್ಸಾರೆ ಮಾಡ್ಸಿ, ಪಂಚ ಭಕ್ಷ್ಯಗಳ ಪೊಟ್ಟಣವನ್ನ ತಾಂಬೂಲದ ಜೊತೆ ಬೀಗರಿಗೆ ಕೊಡಬೇಕಲ್ಲ! ಅದಾದ್ರೂ ಮಾಡಿಸ್ತಾರೋ ಇಲ್ವೋ? ನಮ್ಮನೆಯವ್ರಿಗೆ ಏನೂ ಬೇಡ್ವೇ! ಆದ್ರೆ ಅಳಿಯಂದ್ರು ಗಂಡಿನ ತಂದೆ ಅನ್ನೋದನ್ನ ಮರೀಬೇಡ! ಅವ್ರ ಮನೆಯವರಿಗಾದ್ರೂ ಕೊಡಬೇಡವೇ?"

"ಅಮ್ಮ ! ಅಗ್ನಿ ಸಾಕ್ಷಿಯಾಗಿ ಸಪ್ತಪದಿ ಶಾಸ್ತ್ರ ಮಾಡಿಯೇ ನಿನ್ನ ಮರಿಮಗನ ಮದುವೆ ನಡಿಯೋದು! ಅಷ್ಟು ಸಾಲದೇ? ಅದೇ ತಾನೆ ನಮಗೆ ಮುಖ್ಯ?"

ಮರಿಮಗನ ಅಂತರ್ ಸಂಸ್ಕೃತಿ ವಿವಾಹದ ಸಲುವಾಗಿ ನನ್ನ ವಯಸ್ಸಾದ ತಾಯಿಯವರ ತಲೆ ತಿನ್ನುವ ಪ್ರಶ್ನೆಗಳಿಗೆ ಆ ಸಮಯಕ್ಕೆ ತೋಚಿದ ಹಾಗೆ ಚುಟುಗಾಗಿ ಉತ್ತರಿಸಿಬಿಟ್ಟೆ !

ಆದರೆ ಮುಂಬೈಗೆ ಹಾರಿ, ಅಲ್ಲಿಂದ ಮೂರು ಗಂಟೆಗಳ ಕಾಲ ಎರಡು ಕಾರು ಮತ್ತು ಒಂದು ವ್ಯಾನಿನಲ್ಲಿ ಪಯಣಿಸಿದ ನಮ್ಮ ಪರಿವಾರ, ಸಮುದ್ರ ತೀರದ ಒಂದು ಆಧುನಿಕ ರೆಸಾರ್ಟ್ ತಲುಪುವವರೆಗೂ ನನ್ನ ಹೃದಯ 'ಲಬ್ ಡಬ್ ಲಬ್ ಡಬ್' ಎನ್ನಲು ಮರೆತು, 'ಹೇಗೋ ಏನೋ ! ಹೇಗೋ ಏನೋ !' ಎಂದು ಬಡಿದುಕೊಳ್ಳುತ್ತಿತ್ತು.

ಗೇಟಿನ ಬಳಿ ಇಳಿಯುತ್ತಿದ್ದ ಹಾಗೆಯೇ ನಮಗೆ ಅದ್ದೂರಿಯ ಸ್ವಾಗತ ನೀಡಲಾಯಿತು! ದಾಹ ಶಾಂತಿಗೆ ಎಳನೀರು ಮತ್ತು ಇತರ ತಂಪು ಪಾನೀಯಗಳನ್ನು ನೀಡಿ, ಹಣೆಗೆ ವೀರ ತಿಲಕಗಳನ್ನು ಹಚ್ಚಿದ ಮಹಿಳೆಯರು ಕುಣಿಯುತ್ತ ಕೈ ಹಿಡಿದು ಸ್ವಾಗತಿಸಿದಾಗ ನಮ್ಮ ಅರಿವಿಲ್ಲದೆಯೇ ನಾವೂ ಸಹ ಡೋಲು ವಾದ್ಯಕ್ಕೆ ತಕ್ಕಂತೆ ಹೆಜ್ಜೆ ಹಾಕತೊಡಗಿದೆವು!

ಮದುವೆಗೆಂದೇ ಕಾದಿರಿಸಲಾಗಿದ್ದ ಇಡೀ ರೆಸಾರ್ಟ್ ಬಣ್ಣ ಬಣ್ಣದ ತೋರಣಗಳಿಂದಲೂ, ಹೂವು ಮತ್ತು ದೀಪಾಲಂಕಾರಗಳಿಂದಲೂ ಕೂಡಿ ಇಂದ್ರ ಲೋಕದಂತೆ ಕಂಗೊಳಿಸುತ್ತಿತ್ತು. (ಇಂದ್ರಲೋ ಕವನ್ನು ಕಂಡವ್ರಾರು? ಬರೆಯಲು ಲೈಸೆನ್ಸ್ ಇರೋ ಕಾರಣ ಹಾಗೇ ಸುಮ್ಮನೆ ಬರೆದದ್ದು ಅಷ್ಟೆ !). ಬಣ್ಣದ ಹುಡಿಗಳನ್ನು ಎರಚುತ್ತ, ವಧುವರರೊಂದಿಗೆ ಕೂಡಿದ್ದವರೆಲ್ಲ ನಗುನಗುತ ಕುಣಿದು ನಲಿದು ಸಂಭ್ರಮಿಸಿದ್ದು ಕಂಡಾಗ, ಯಾವುದೋ ಬಾಲಿವುಡ್ ಸಿನೆಮಾದ ಚಿತ್ರಣ ನಡೆಯುತ್ತಿರುವಂತೆ ಭಾಸವಾಯಿತು. ಮನಸ್ಸು 'ಚುಪ್' ಎಂದರೂ ಡೋಲು ವಾದ್ಯದ ತಾಳಕ್ಕೆ ದೇಹವು ತನ್ನಿಂದ ತಾನಾಗಿಯೇ ಸ್ಪಂದಿಸತೊಡಗಿತು ! ಅದರಲ್ಲೂ ಪ್ರೀತಿಯ ಮೊಮ್ಮಗ ಹೆಜ್ಜೆ ಹಾಕುತ್ತ ಬಂದು ಕೈ ಹಿಡಿದು ಕರೆದಾಗ ಇಲ್ಲ ಎನ್ನಲಾಗತ್ತದೆಯೇ? ಯಾವಾಗಲೂ ಹೋಗುವ ಕಡೆ ಗಂಭೀರ ಗುಂಡುಗಳಾಗಿ ಕೂರುವ ಅಭ್ಯಾಸವಿರುವವರು ಸಹ ಅಂದು ಆ ಸಂಭ್ರಮದಲ್ಲಿ ಪಾಲ್ಗೊಳ್ಳಲೇ

ಬೇಕಾಯಿತು! ಕುಣಿದು ನಲಿದು ನಕ್ಕಾಗ ಬಿಗಿದುಕೊಂಡಿದ್ದ ಮನಸ್ಸು ಅರಳಿ ನಿರಾಳವಾಯಿತು !

ಮೆಹೆಂದಿ ಮುಗಿದಿದ್ದು ವಧು ವರರಿಗೆ ಮಂಗಳ ಸ್ನಾನ ಮಾಡಿಸುವ ವೇಳೆ. 'ಹಲ್ದೀ' ಕಾರ್ಯಕ್ರಮಕ್ಕೆ ಆಗಲೇ ಎಲ್ಲ ಸಿದ್ಧತೆಗಳೂ ನಡೆದಿದ್ದವು. ತಾವರೆಯ ಹೂವಿನ ವಿನ್ಯಾಸವಿದ್ದ ಎರಡು ತೊಟ್ಟಿಗಳನ್ನು ಮಂಟಪದಲ್ಲಿ ಇರಿಸಲಾಗಿತ್ತು. ವಧು ವರರನ್ನು ಈ ತೊಟ್ಟಿಗಳ ಮಧ್ಯೆ ಇದ್ದ ಪೀಠಗಳಲ್ಲಿ ಕೂರಿಸಿ ಅರಿಶಿನವನ್ನು ಕೆನ್ನೆಗೆ ಹಚ್ಚಿದರು ಹಿರಿಯರು. ಅರಿಶಿನದ ನೀರಿನಿಂದ ಅಭಿಷೇಕವೂ ಮುಗಿಯಿತು. ನಂತರ ಶುರುವಾದ ಮೋಜು ಮಸ್ತಿಯನ್ನು ಬಾಯಿಬಿಟ್ಟುಕೊಂಡು ನೋಡುತ್ತಾ ಕುಳಿತೆ ನಾನು! ಪರಸ್ಪರ ಅರಿಶಿನ ಮೆತ್ತಿಕೊಂಡ ಯುವ ಜನರೆಲ್ಲಾ ವಧು ವರರನ್ನು ಈಜುಕೊಳಕ್ಕೆ ನೂಕಿ, ತಾವೂ ಜೊತೆಗೆ ಹಾರಿ ಜಲಕ್ರೀಡೆಯಲ್ಲಿ ತೊಡಗಿಬಿಟ್ಟರು! ಕೊಳದ ನೀರು ಅರಿಶಿನ ಬಣ್ಣಕ್ಕೆ ತಿರುಗಿತು! ಅದೇನು ಖುಷಿ! ಅದೇನು ಚೆಲ್ಲಾಟ! ಆ ಧನಾತ್ಮಕ ಶಕ್ತಿ ಎಲ್ಲರನ್ನೂ ಆವರಿಸಿಕೊಂಡಿತು! ನಮ್ಮ ಹಳ್ಳಿಯ ನದಿಯಲ್ಲಿ ಮಿಂದು ಅಭ್ಯಾಸವಿದ್ದರೂ ವರನ ಅಜ್ಜಿ ಎಂದ ಮೇಲೆ ಎಳ್ಳಷ್ಟಾದರೂ ಗೌರವವನ್ನು ಕಾಯ್ದು ಕೊಳ್ಳಬೇಕಾಗಿದ್ದ ಕಾರಣ ನಾನು ಬರೀ ವೀಕ್ಷಕಳಾಗಿಯೇ ಉಳಿಯಬೇಕಿತ್ತು !

ತಾಯಿ ತಂದೆಯರೊಂದಿಗೆ ಹೆಣ್ಣನ್ನೂ ಕೂರಿಸಿ ಗಣಪತಿ ಪೂಜೆ ಮುಂತಾದ ಅನೇಕ ಪೂಜಾ ಕಾರ್ಯಗಳನ್ನು ಸಾಂಗವಾಗಿ ನಡೆಸಿಕೊಟ್ಟರು ಅವರ ಕಡೆ ಪುರೋಹಿತರು.

ಮಣ್ಣಿನ ಸಣ್ಣ ಕುಡಿಕೆಗಳಲ್ಲಿ ಸರಬರಾಜಾಗುತ್ತಿದ್ದ ಮಸಾಲ ಚಾಯನ್ನು ಹೀರುತ್ತಾ ಮೆಹೆಂದಿ ಸ್ಟಾಲಿನಲ್ಲಿ ಕೈ ಚಾಚಿ ಕುಳಿತಿದ್ದ ಮಕ್ಕಳು ಮತ್ತು ಮಹಿಳೆಯರ ಜೊತೆ ನಾವೂ ಕುಳಿತೆವು. ಅಂಗೈಯಲ್ಲಿ ಅರಳುತ್ತಿದ್ದ ಮೆಹೆಂದಿ ಹೂವಿನ ವಿನ್ಯಾಸ ಕಣ್ಮನ ಸೆಳೆದವು.

ಸಂಜೆ ಉಂಗುರ ಬದಲಾಯಿಸುವ ಕಾರ್ಯಕ್ರಮ, ಮೀಟ್ ಅಂಡ್ ಗ್ರೀಟ್ ಕಾರ್ಯಕ್ರಮಗಳೊ ಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು. ಈಜು ಕೊಳದ ಸುತ್ತ ಅದಾಗಲೇ ಒಂದು ತಿಂಡಿ ಬೀದಿಯೇ ನಿರ್ಮಾಣವಾಗಿತ್ತು! ವಿವಿಧ ಚಾಟ್ ತಿನಿಸುಗಳು, ಹಣ್ಣಿನ ರಸಗಳು, ಬಜ್ಜಿ ಬೋಂಡಾಗಳು, ಸ್ಯಾಂಡ್ವಿಚ್, ಪಾವ್ ಭಾಜಿ ಮುಂತಾದ ಪದಾರ್ಥಗಳ ಘಮಲು ನಮ್ಮ ರುಚಿ ಮೊಗ್ಗುಗಳಿಗೆ ಕಚಗುಳಿ ಇಟ್ಟವು!

ಕಾರ್ಯಕ್ರಮಗಳು ಮುಗಿದು ಡಿನ್ನರ್ ಶುರುವಾಗಲು ಬಹಳ ಹೊತ್ತು ಆಗಬಹುದು ಎನ್ನಿಸಿದ್ದರಿಂದ ನಮ್ಮ ಸವಾರಿ ತಿಂಡಿ ಸ್ಟಾಲ್ಗಳ ಬಳಿಯೇ ಪ್ರತಿಷ್ಠಾಪನೆ ಆಯಿತು! ಕುಣಿಯುತ ನಲಿಯುತ ನಗುನಗುತ ಫೋಟೋಗಳನ್ನು ಕ್ಲಿಕ್ಕಿಸಿಕೊಳ್ಳುತ್ತ ಸಡಗರದಿಂದ ಓಡಾಡುತ್ತಿದ್ದವರನ್ನು ವೀಕ್ಷಿಸುತ್ತಲೇ ನಾವು ಜಿಹ್ವಾ ಚಾಪಲ್ಯವನ್ನು ತಣಿಸಿಕೊಂಡೆವು !

ತೃಪ್ತಿಯಿಂದ ತೇಗುತ್ತಾ ಲಾನ್ ಕಡೆ ಪಾದಬೆಳೆಸಿದ ನಮಗೆ ಆಶ್ಚರ್ಯ ಕಾದಿತ್ತು. ವಿಶಾಲವಾದ ಲಾನಿನ ಒಂದು ಬದಿಯಲ್ಲಿ ಕಾರ್ಯಕ್ರಮಕ್ಕಾಗಿ ಸುಂದರವಾಗಿ ಅಣಿಮಾಡಲಾಗಿದ್ದ ವೇದಿಕೆ. ಮತ್ತೊಂದು ಬದಿಯಲ್ಲಿ ಬಫೆ ಊಟ ಆಗಲೇ ಶುರುವಾಗಿತ್ತು! ಹಿಮ ಬಿಳಿಪಿನಲ್ಲಿ ದಾಳಿಂಬೆ ಮುತ್ತುಗಳೊಂದಿಗೆ ಕಂಗೊಳಿಸಿದ ಮೊಸರನ್ನ ಮತ್ತೊಂದು ಆಶ್ಚರ್ಯ !

'ಮದುವೆಯಲ್ಲಿ ಯಾವುದೇ ಶೈಲಿಯ ಭೋಜನವನ್ನು ಏರ್ಪಾಟು ಮಾಡಿದರೂ ಅಡ್ಡಿ ಇಲ್ಲ! ಆದರೆ ಜೊತೆಗೆ ಮೊಸರನ್ನ ಮಾತ್ರ ಇರಲೇಬೇಕು.' ಎಂಬ ನನ್ನ ಅಳಿಯಂದಿರ ಕೋರಿಕೆಯನ್ನು ಶಿರಸಾವಹಿಸಿ ನಡೆಸಿಕೊಟ್ಟಿದ್ದರು ಹೆಣ್ಣಿನ ಕಡೆಯವರು! ಆದ್ದರಿಂದ ಎಲ್ಲ ಹೊತ್ತಿನ ಊಟದಲ್ಲೂ ಮೊಸರನ್ನ ಅಗ್ರಸ್ಥಾನ ವಹಿಸಿತ್ತು! ಆಗಷ್ಟೇ ತಿಂಡಿಗಳನ್ನು ಮುಕ್ಕಿ ಬಂದಿದ್ದ ಕಾರಣ ಈ ಬಾರಿ ನಮ್ಮ ಅಚ್ಚುಮೆಚ್ಚಿನ ಮೊಸರನ್ನವನ್ನು ತ್ಯಾಗ ಮಾಡಲೇ ಬೇಕಾಯಿತು!

ನಂತರ ಡಿ ಜೆ ನೈಟಲ್ಲಿ ಭಾಗವಹಿಸಲು ಲವಲವಿಕೆಯಿಂದ ಎಲ್ಲರೂ ಹೊರಡಲು, ಸೀನಿಯರ್ಸ್ ಎಲ್ಲ ಆಕಳಿಸುತ್ತ ಮಲಗಲು ಹೊರಟೆವು! 'ಈ ಹಾಳು ವಯಸ್ಸು!' ಎಂದು ಮನದಲ್ಲೇ ಗೊಣಗಿಕೊಳ್ಳಲು ಮರೆಯಲಿಲ್ಲ !

ಮಾರನೆಯದಿನ ಮುಹೂರ್ತ ರಾತ್ರಿ ಒಂಬತ್ತು ಗಂಟೆ ಮೂವತ್ತು ನಿಮಿಷಕ್ಕೆ ಎಂದು ನಿಶ್ಚಯವಾಗಿತ್ತು. ಆದ್ದರಿಂದ ಬೆಳಿಗ್ಗೆ ಆರಾಮವಾಗಿ ನಮ್ಮ ಕೆಲವು ಸಂಪ್ರದಾಯಗಳನ್ನು ಆಚರಿಸಲು ಅವಕಾಶವಿತ್ತು. ನಾವು ಕೇಳಿಕೊಂಡಿದ್ದ ಹಾಗೆಯೇ ಮಂಟಪದಲ್ಲಿ ಅಲಂಕರಿಸಲ್ಪಟ್ಟ ಉಯ್ಯಾಲೆ ಸಿದ್ಧವಾಗಿತ್ತು. ನಾದಸ್ವರ ಕಲಾವಿಧ ಸಂದರ್ಭಕ್ಕೆ ತಕ್ಕ ಸಂಗೀತವನ್ನು ನುಡಿಸ ತೊಡಗಿದ್ದ.

ಸಂಪ್ರದಾಯದಂತೆ ಮದುಮಕ್ಕಳಿಬ್ಬರಿಗೂ ಸೀರೆ ಪಂಚೆಗಳನ್ನು ಉಡಿಸಿ ನಮ್ಮ ಪದ್ಧತಿಯ ಅಲಂಕಾರ ಮಾಡಲಾಗಿತ್ತು. ತಂತಮ್ಮ ಸೋದರ ಮಾವಂದಿರ ಹೆಗಲ ಮೇಲೆ ಕುಳಿತು ಹಾರ ಬದಲಾಯಿಸಿಕೊಳ್ಳಲು ಸಿದ್ಧವಾಗಿದ್ದರು (ಮಲೈ ಮಾಟ್ರಲ್) ಮದುಮಕ್ಕಳು. ಅವರನ್ನು ಹೊತ್ತ ಮಾವಂದಿರು ಹಾರಗಳನ್ನು ಹಾಕಲು ಅವಕಾಶ ನೀಡದೆ ಹಿಂದೂ ಮುಂದೂ ಓಡಿ ಆಟ ತೋರಿಸಿದರು! ಬಾಲ್ಯ ವಿವಾಹ ನಡೆಯುತ್ತಿದ್ದ ಕಾಲದ ಪದ್ಧತಿಯನ್ನು ಮೋಜಿಗಾಗಿಯೂ ಖುಷಿಗಾಗಿಯೂ ಇಂದಿಗೂ ಮುಂದುವರಿಸಲಾಗುತ್ತಿದೆ. ಹಾಗಾಗಿ ಇಂದಿನ ಮದುವೆಯಲ್ಲಿ 'ಭಾರ' ಹೊತ್ತ ಮಾವಂದಿರಿಗೆ ಎರಡು ಕಡೆಯವರ ಯುವ ಸೇನೆಯೂ ಸಹ ಹೆಗಲು ಕೊಟ್ಟು ಸಹಕರಿಸಿತು! ಎರಡು ಟೀಮ್ಗಳನ್ನೂ ಪ್ರೋತ್ಸಾಹಿಸುವವರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಮೂರು ಬಾರಿ ಹಾರಗಳನ್ನು ಈ ರೀತಿ ಆಟವಾಡುತ್ತಲೇ ಬದಲಾಯಿಸಿಕೊಂಡರು ಮದುಮಕ್ಕಳು.

ಜೀವನದ ಏರಿಳಿತಗಳಲ್ಲಿ ಒಟ್ಟಿಗೆ ಇದ್ದು ಸಂತೋಷದಿಂದ ಮುನ್ನಡೆಯಬೇಕು ಎಂಬ ತಾತ್ಪರ್ಯವನ್ನು ತಿಳಿಸಿಕೊಂಡುತ್ತದೆ 'ಊನ್ಜಲ್' ಕಾರ್ಯಕ್ರಮ. ಇಬ್ಬರನ್ನೂ ಉಯ್ಯಾಲೆಯಲ್ಲಿ ಕೂರಿಸಿ, ಹಾಲು ಹಣ್ಣಿನಂತೆ ಮನಸ್ಸುಗಳು ಬೆರೆತು ಜೀವನ ಸಿಹಿಯಾಗಿರಲಿ ಎಂದು ಹಾರೈಸಿ ಮದುಮಕ್ಕಳಿಗೆ 'ಹಾಲು ಹಣ್ಣು' ಕೊಡುವ ಶಾಸ್ತ್ರವನ್ನು ಆಚರಿಸಿದರು ಹಿರಿಯ ಮಹಿಳೆಯರು. ಕೆಂಪು, ಹಳದಿ, ಬಿಳಿ ಅನ್ನದ ಉಂಡೆಗಳಿಂದ ನೀವಾಳಿಸಿ ಮದುಮಕ್ಕಳಿಗೆ ದೃಷ್ಟಿ ತೆಗೆಯಲಾಯಿತು. ವಾಟ್ಸಪ್ಪಲ್ಲಿ ಸಾಹಿತ್ಯ ಹಂಚಿಕೊಂಡು, ಜೂಮಲ್ಲಿ ಒಟ್ಟಿಗೆ ಅಭ್ಯಾಸ ಮಾಡಿಕೊಂಡಿದ್ದ 'ಮಾಲೈ ಮಾಟ್ರಲ್' ಮತ್ತು 'ಊನ್ಜಲ್' ಹಾಡುಗಳನ್ನು ನಾವೆಲ್ಲಾ ಸೇರಿ ಘೋಷ್ಠಿಯಾಗಿ ಹಾಡಿದಾಗ ಇಡೀ ಮಂಟಪವೇ ಅದುರಿತು !

ವರನ ಸೋದರಿಯರು ನವ ವಧುವಾಗಲಿರುವ ಬಾಲಕಿಯೊಂದಿಗೆ ಆಪ್ತತೆಯನ್ನು ಬೆಳೆಸಿಕೊಳ್ಳುವುದರ ಸಲುವಾಗಿ ಅವಳಿಗೆ ಆಟಿಕೆಗಳನ್ನೂ ಅಲಂಕಾರದ ವಸ್ತುಗಳನ್ನೂ ಉಡುಗೊರೆಯಾಗಿ ಕೊಡುವುದು ಹಿಂದಿನಿಂದಲೂ ಬಂದಿರುವ

ಒಂದು ಪದ್ಧತಿ. ಪದ್ಧತಿಯನ್ನನುಸರಿಸಿ ಉಡುಗೊರೆಗಳನ್ನು ಇರಿಸಿದ್ದ ತಟ್ಟೆಗಳನ್ನು ನಮ್ಮ ಮನೆಯ ಪುಟಾಣಿಗಳ ಕೈಗಳಿಗೆ ಕೊಡಲಾಯಿತು. ಕಥಕಳಿ ವೇಷ ಭೂಷಣ ಧರಿಸಿದ್ದ ಕಲಾವಿಧ ನರ್ತಿಸುತ್ತ ಮಕ್ಕಳನ್ನು ವಧುವಿನ ಬಳಿ ಕರೆದೊಯ್ದು. ಆಟಿಕೆಗಳಿಗೆ ಬದಲು, ದಕ್ಷಿಣ ಭಾರತದ ನಾಲಕ್ಕು ರಾಜ್ಯಗಳಲ್ಲಿ ತಯಾರಾಗುವ ಕರಕುಶಲ ವಸ್ತುಗಳ ಬಗ್ಗೆ ವಿವರ ಹೇಳಿ, ಒಂದೊಂದೇ ವಸ್ತುವನ್ನು ಎತ್ತಿ ಹಿಡಿದು ತೋರಿಸಿ, ವಧುವಿಗೆ ಅವುಗಳನ್ನು ಮಕ್ಕಳೇ ನೀಡಿದ ಆ ಕಾರ್ಯಕ್ರಮವನ್ನು ಮೆಚ್ಚದವರೇ ಇಲ್ಲ!

ನಾದಸ್ವರದಿಂದ 'ಕುಮ್ಮಿ ಹಾಡು' ಹೊಮ್ಮಿ ಹರಿಯುತ್ತಿರಲು, ಎಲ್ಲ ವಯಸ್ಸಿನ ಹೆಂಗೆಳೆಯರೂ ವಧುವರರ ಸುತ್ತ ಚಪ್ಪಾಳೆಯೊಂದಿಗೆ ನರ್ತಿಸತೊಡಗಿದೆವು! ಕೂಡಲೇ ಹೆಣ್ಣಿನ ಕಡೆಯವರೂ ಸಹ ಉತ್ಸಾಹದಿಂದ ನಮ್ಮೊಂದಿಗೆ ಸೇರಿಕೊಂಡರು. ಹಾಡಿಗೂ ನೃತ್ಯಕ್ಕೂ ಒಂದು ಹೂನಗೆಗೂ ಅದೆಂತಹ ಆಕರ್ಷಣಾ ಶಕ್ತಿ!

ರಾತ್ರಿ ಮುಹೂರ್ತ ಮುಗಿಸಿಕೊಂಡು ಮರುದಿನ ಬೆಳಿಗ್ಗೆಯೇ ನಾವು ಹೊರಡವುದಿತ್ತು. ಆದ್ದರಿಂದ ಬೀಗರಿಗಾಗಿ ಅಂದು ಮಧ್ಯಾಹ್ನವೇ ವಿಶೇಷವಾದ ಬೀಗರ ಊಟವನ್ನು ಏರ್ಪಡಿಸಲಾಗಿತ್ತು. ನಮಗಾಗಿಯೇ ಅಲಂಕರಿಸಲ್ಪಟ್ಟ ಒಂದು ಸಾಲು ಮೇಜುಗಳನ್ನು ಕಾದಿರಿಸಲಾಗಿತ್ತು. ಈ ವಿಶೇಷ ಊಟವನ್ನು ಹೆಣ್ಣಿನ ಕಡೆಯವರೇ, ಮುಖ್ಯವಾಗಿ ಹೆಣ್ಣಿನ ತಂದೆಯವರು ತಮ್ಮ ಕೈ ಯಾರೆ ಬೀಗರಿಗೆ ತಿನ್ನಿಸುವುದು ಪದ್ಧತಿಯಂತೆ!

ನಾನಾವಿಧ ಕರಿದ ತಿಂಡಿಗಳು ಮತ್ತು ಸಿಹಿ ತಿಂಡಿಗಳೊಂದಿಗೆ ನಾಲಿಗೆಯಲ್ಲಿ ನೀರೂರಿಸುವ ವಿಶೇಷವಾದ ರಾಜಸ್ಥಾನಿ ಭೋಜನ! ಪದಾರ್ಥಗಳನ್ನು ದೊಡ್ಡ ಹರಿವಾಣಗಳಲ್ಲಿ ಬಡಿಸಲಾಯಿತು. ಹೆಣ್ಣಿನ ಸೋದರಮಾವ ರಾಜ್ಭೋಗ್ ಎಂಬ ಸಿಹಿ ಪದಾರ್ಥವನ್ನು ತಂದರು! ಬ್ಯಾಡ್ಮಿಂಟನ್ ಚೆಂಡಿನ ಗಾತ್ರವಿದ್ದ ರಸಗುಲ್ಲದಂತಹ ಸಿಹಿಯನ್ನು ತಮ್ಮ ಕೈ ಯಾರೆ ತೆಗೆದು ಒಬ್ಬೊಬ್ಬರ ಬಾಯಿಗೂ ತುರುಕಿದರು! ಸಾಕು ಎನ್ನಲು ಬಾಯಿ ತೆರೆದಿದ್ದೆ ತಡ, ಮತ್ತೊಂದು ರಾಜ್ಭೋಗ್ ಬಾಯಲ್ಲಿ ತೂರಿಬಿಡುತ್ತಿತ್ತು!

ನನ್ನ ಸರದಿ ಬಂದಾಗ "ಆಂಟಿ! ಫಾರ್ ಮೆಡಿಕಲ್ ರೀಸನ್ಸ್, ನಿಮ್ಮನ್ನ ಒತ್ತಾಯ ಮಾಡೋಲ್ಲ!" ಎಂದವರೇ ಮುಂದೆ ಸಾಗಿಯೇ ಬಿಟ್ಟರು! 'ಅಯ್ಯೋ ಮಹರಾಯ! ಸಿಹಿ ತಿನ್ನಬಾರದಂತ ಎಂತಾ ಮೆಡಿಕಲ್ ಕಾರಣವೂ ನನಗೆ ಇಲ್ಲ ಕಣಪ್ಪ! ಊಟದ ವಿಷಯದಲ್ಲಿ ಅದರಲ್ಲೂ ಸಿಹಿ ತಿಂಡಿಯ ವಿಷಯದಲ್ಲಿ ಪಕ್ಷಪಾತ ಮಾಡಲೇ ಬಾರದು ನನ್ನಪ್ಪಾ!' ಬಾಯಿ ತರೆದು ಹೇಳಲಾಗಲಿಲ್ಲ! ಕಾರಣ, ಮೊದಲೇ ತಟ್ಟೆಗೆ ಬಡಿಸಿದ್ದ ರಾಜ್ಭೋಗ್ ನನ್ನ ಬಾಯಿ ಸೇರಿತ್ತು !

ಸಾಕು ಸಾಕು ಎಂದರೂ ಒಬರಲ್ಲ ಒಬ್ಬರು ಸಿಹಿ ತಿಂಡಿಯನ್ನು ಬಾಯಿಗೆ ತುರುಕುತ್ತಲೇ ಇದ್ದರು! ನಮ್ಮ ಹುಡುಗರು ತಾವೂ ಅದೇ ತಿಂಡಿ ಪಾತ್ರೆ ಕೈಗೆತ್ತಿಕೊಂಡು, ಹೆಣ್ಣಿನ ಕಡೆಯವರ ಬಾಯಿಗೆ ಸಿಹಿ ತುರುಕಿ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತ್ತಿದ್ದರು! ಪರಸ್ಪರ ಒಬ್ಬರನೊ ಬ್ಬರು ಕಾಲೆಳೆಯುತ್ತಾ ತಮಾಷೆ ಮಾಡುತ್ತಾ ಖುಷಿ ಖುಷಿಯಾಗಿ ಸಾಗಿತು ಬೀಗರ ಊಟದ ಕಾರ್ಯಕ್ರಮ. ಒಂದೇ ದಿನದಲ್ಲಿ ನಮ್ಮ ನಮ್ಮಲ್ಲಿ ಬೆಸೆದುಕೊಂಡುಬಿಟ್ಟಿದ್ದ ಅನ್ಯೋನ್ಯತೆ ಮತ್ತು ಬಾಂಧವ್ಯ ನಿಜಕ್ಕೂ ಬೆರಗುಗೊ–ಳಿಸುವಂತಿತ್ತು!

ಹೆಣ್ಣಿನ ತಾಯಿ ತನ್ನ ತವರು ಮನೆಯವರನ್ನು ಗೌರವಿಸುವ ಕಾರ್ಯಕ್ರಮ

ಮಾಯಿರ. ಪುರೋಹಿತರು ಮಂತ್ರ ಪಠಣ ಮಾಡುತ್ತಿರಲು ತನ್ನ ಒಡಹುಟ್ಟಿದವರಿಗೂ ಅವರ ಪರಿವಾರದವರಿಗೂ ತಿಲಕವಿಟ್ಟು, ಹಾರಗಳನ್ನು ಹಾಕಿ, ಉಡುಗೊರೆ ನೀಡಿ ಹೆಣ್ಣಿನ ತಾಯಿ ತನ್ನ ಮನೆಯವರಿಂದ ಆಶೀರ್ವಾದ ಪಡೆದುಕೊಂಡ ದೃಶ್ಯ ಮನಮುಟ್ಟುವಂತಿತ್ತು.

ಅಂದು ಸಂಜೆ ನಡೆದ 'ಬರಾತ್' ನಮ್ಮನ್ನು ಬೇರೆಯೇ ಕನಸಿನ ಲೋಕಕ್ಕೆ ಕರೆದೊಯ್ಯಿತು! ಜಾಜ್ವಲ್ಯವಾಗಿ ದೀಪಗಳು ಹೊಳೆಯುತ್ತಿರಲು, ಸಂಗೀತವೂ ಸಂತೋಷವೂ ಉಕ್ಕಿ ಹರಿಯುತ್ತಿರಲು, ಸ್ನೇಹಿತರು, ಬಂಧು ಬಳಗ ಎಲ್ಲರೂ ಕೂಡಿ ಕುಣಿದು ಕುಪ್ಪಳಿಸುತ್ತಿರಲು ಪ್ರಾರಂಭವಾಯಿತು 'ಬರಾತ್'! ಜರತಾರಿ ಶೆರವಾಣಿ ಧರಿಸಿ, ಸಿಂಗಾರದ ಪೇಟ ಕಟ್ಟಿ, ಮುತ್ತಿನ ಹಾರವ ಧರಿಸಿ, ಸೊಂಟಕ್ಕೆ ಖಡ್ಗ ಸಿಕ್ಕಿಸಿ, ಶತಮಾನಗಳ ಹಿಂದಿದ್ದ ರಾಜಕುಮಾರನಂತೆ ಕುದುರೆ ಏರಿ ಬಂದ ಮದುಮಗ! ನನ್ನ ಮುದ್ದು ಮೊಮ್ಮಗ! ಅವನಿಗೆ ತಕ್ಕ ಹಾಗೆ ಸರ್ವಾಲಂಕಾರಭೂಷಿತೆಯಾಗಿ ವರಮಾಲೆ ಹಿಡಿದು ರಾಜಕುಮಾರಿಯಂತೆ ನಿಂದಳು ಅವನ ಮನ ಗೆದ್ದ ಮುದ್ದು ಮದುಮಗಳು!

ಆಕಾಶದಲ್ಲಿ ಹುಣ್ಣಿಮೆ ಚಂದ್ರ ನಗುತಿರಲು, ಪುರೋಹಿತರು ಮಂತ್ರ ಪಠಿಸುತ್ತಿರಲು ಮುಹೂರ್ತದ ವೇಳೆಗೆ ಅಗ್ನಿ ಸಾಕ್ಷಿಯಾಗಿ ಸಪ್ತಪದಿ (ಸಾತ್‌ಫೇರೇ) ತುಳಿದು ಪತಿ ಪತ್ನಿಯರಾದರು ಮದುಮಕ್ಕಳು. ಹೆಣ್ಣಿನ ಮನೆಯವರೂ ಗಂಡಿನ ಮನೆಯವರೂ ಪರಸ್ಪರ ತಬ್ಬಿಕೊಂಡು ಶುಭಾಶಯಗಳನ್ನು ಹಂಚಿಕೊಂಡಾಗ, ಎರಡು ಕಲಾಚಾರಗಳ ಈ ಸುಂದರವಾದ ಸಂಗಮಕ್ಕೆ ಕಾರಣರಾದ ಮದುಮಕ್ಕಳನ್ನು ಮನದುಂಬಿ ಹರಸಿದೆವು!

ಮುಂಬೈ ವಿಮಾನ ನಿಲ್ದಾಣದಲ್ಲಿ ನೆಲೆಗೊಂಡಿರುವ 'ಜಯಹೇ ಮ್ಯೂಸಿಯಂ' ನಮ್ಮ ದೇಶದ ವಿವಿಧ ಕಲಾಚಾರಗಳನ್ನು ಪ್ರತಿನಿಧಿಸುವ ಅನೇಕ ಕಲಾಕೃತಿಗಳನ್ನೊ-ಳಗೊಂಡಿದೆ. ಅಲ್ಲಿ 'ಒನ್‌ನೇಷನ್ ಮೆನಿ ಕಲ್ಚರ್ಸ್!' ಎಂಬ ಸಂದೇಶವನ್ನು ಸಾರುತ್ತಿದ್ದ ಒಂದು ಫಲಕ ನನ್ನ ಕಣ್ಮನ ಸೆಳೆಯಿತು !

ಸ್ನೇಹ ಸೌಹಾರ್ದ, ಪ್ರೀತಿ ಕಾಳಜಿ, ಬಂಧುತ್ವ ಆತಿಥ್ಯ, ಮುಂತಾದ ಮೌಲ್ಯಗಳು ನಮ್ಮ ದೇಶದ ಎಲ್ಲ ಕಲಾಚಾರಗಳ ಬುನಾದಿಯಲ್ಲವೇ? ವಿಶಾಲವಾದ ಮನೋಭಾವದೊಂದಿಗೆ ಧನಾತ್ಮಕ ಚಿಂತನೆಯೂ ಸೇರಿಕೊಂಡರೆ ಎಲ್ಲಾರೂ ನಮ್ಮವರೇ ಎಂಬ ಸತ್ಯವನ್ನು ನನ್ನ ಮೊಮ್ಮಗನ ಅಂತರ್ ಸಂಸ್ಕೃತಿ ವಿವಾಹದಲ್ಲಿ ಪ್ರತ್ಯಕ್ಷವಾಗಿ ಕಂಡುಕೊಂಡೆ!

■



## ಬಾಯಿ ಲೆಕ್ಕದ ಭೂತದ ಬಲೆಯಲ್ಲಿ!

**✍ ಕವಿತ ಹೆಗಡೆ ಅಭಯಂ**

ಕತಗಾಲೆನ್ನುವ ಸುಗ್ರಾಮದಲ್ಲಿ ಖುಷಿ ಖುಷಿಯಾಗಿ ಬಾಲ ಲೀಲೆಗಳನ್ನು ತೋರುತ್ತ ಬೆಳೆಯುತ್ತಿದ್ದೆ ಸ್ವಾಮಿ, ಯಾರ ದೃಷ್ಟಿ ತಾಕಿತೋ ಈ ಬದುಕಿನಲ್ಲಿ ಬಾಯಿ ಲೆಕ್ಕವೆಂಬ ಭೂತರಾಜನ ಪ್ರವೇಶವಾಗಿಯೇಬಿಟ್ಟಿತು.

ಆ ಮಹಾರಾಜನ ಸೇವೆ ಮಾಡದ ತಪ್ಪಿಗೆ ವಿಚಾರಣೆ ನಡೆದು ತೀರ್ಪೊಂದು ಹೊರಬಿದ್ದು ನಿರಂತರವಾಗಿ ಲೆಕ್ಕದ ಪ್ರಶ್ನೆ ಎದುರಿಸಬೇಕು ಎಂಬ ಶಿಕ್ಷೆ ಕೂಡ ನನ್ನದಾಗಿಬಿಟ್ಟಿತು.

ಚಂಡಿಕಾ ಮತ್ತು ಅಘನಾಶಿನಿ ನದಿಗಳ ಸಂಗಮದ ಮೇಲಿನ ಆ ಚೆಂದದ ಕತಗಾಲಿನ ಬಾಲ್ಯದ ದಿನಗಳೆಂದರೆ ಧರೆಗಿಳಿದ ಸ್ವರ್ಗದ ಸೊಬಗು. ಹಚ್ಚ ಹಸಿರು ಗದ್ದೆ, ತೋಟ, ಘನ ಪರ್ವತ ಹರಿವ ನದಿಗಳು ಆವರಿಸಿದ್ದ ಮೋಹಕ ತಾಣ. ಇಡೀ ಊರಲ್ಲಿ ಒಂದೋ ಎರಡೋ ಕಾರು, ಲೋಕಲ್ಲು ಬಾರಿನ ಆರ್ಭಟವಿದ್ದರೂ ಈ ಬಾಯಿ ಲೆಕ್ಕದ ಭೂತದ ಕಾರುಬಾರು ಮಾತ್ರ ಲೆಕ್ಕತಪ್ಪಿ ಜೋರಿತ್ತು. ಮಕ್ಕಳ ಬಾಲ್ಯದ ಚೆಂದದ ಗಳಿಗೆಗಳನ್ನೇ ಕಸಿದ ಬಾಯಿಲೆಕ್ಕದ ಭೂತ ನನ್ನಂಥ ಬಡ ಪಾತ್ರಧಾರಿಯ ಹಿಂದೆ ನಿಂತು ಜೋರಾಗಿ ಢಣ ಢಣ ಚಂಡೆ ಬಾರಿಸುತ್ತಿತ್ತು. ಅದರ ತಾಳಕ್ಕೆ ತಕ್ಕಂತೆ ನನ್ನಿಂದ ಕುಣಿತ ಶುರು ಹಚ್ಚಿಸಿಯೇ ಬಿಡುತ್ತಿತ್ತು.

ಈ ಮಕ್ಕಳನ್ನು ಕಂಡರೆ ದೊಡ್ಡವರಿಗೇನಾಗುತ್ತದೋ ತಿಳಿಯದು. ಬಿಟ್ಟಿ ಸಿಕ್ಕಿದವರ ಹಾಗೆ ಅದೇನು ಪ್ರಶ್ನೆ ಹಾಕುವುದು! ಗೋಳು ಹೊಯ್ದುಕೊಂಡು ತಾವು ಮಜಾ ತೆಗೆದುಕೊಳ್ಳುವುದೇನು! ನಾನಂತೂ ಇಂಥವರ ಖಾಯಂ ವಿಕ್ಟಿಮ್.

ಎಲ್ಲಿಯೇ ಆದರೂ ನನ್ನನ್ನು ಕಂಡಕೂಡಲೇ ಬಾಯಿ ಲೆಕ್ಕ ಹಾಕಲು ಬಾಯಿ ಬಿಟ್ಟುಕೊಂಡು ಕುಳಿತ ಮಂದಿ ಬೇಕಷ್ಟಿದ್ದರು ಅನ್ನುವುದೇ ನನ್ನ ದೊಡ್ಡ ಗೋಳಾಗಿತ್ತು. ಭಯಂಕರ ಲಿಗಾಡಿ ಕೂಸಾದ ನಾನು ಅವರೆಲ್ಲರ ಕಣ್ಣು ತಪ್ಪಿಸಿ ಮಂಗಾಟ ನಡೆಸುವುದು ದೊಡ್ಡ ಸಾಹಸವೇ ಆಗಿತ್ತು.

ಒಬ್ಬ ಹಿರಿಯರು, "ತಂಗಿ, ಒಂದು ಮರದಲ್ಲಿ ಹತ್ತು ಹಕ್ಕಿ ಇದ್ದು, ಒಂದು ಹಾರಿ ಹೋದ್ರೆ ಎಷ್ಟು ಉಳೀತು?" ಎಂದು ನನ್ನ ಕಂಡ ಕೂಡಲೇ ಕೇಳುತ್ತಿದ್ದರು. ಇಂಥ ಲೆಜೆಂಡರಿ ಪ್ರಶ್ನೆಗಂತೂ ಹೇಗೆ ಉತ್ತರ ಕೊಟ್ಟರೂ ತಪ್ಪು ಅನ್ನುತ್ತಿದ್ದರು.

"ಒಂಬತ್ತು " ಅಂದರೆ?

"ಹೇ ಮಳ್ಳಿ, ಒಂದು ಹಾರಿ ಹೋದ್ರೆ ಎಲ್ಲಾ ಹಾರಿ ಹೋಗ್ತು," ಅಂತಿದ್ದರು. 'ಓಹೋ ಹೌದಾ' ಅಂತ ತಿಳಿದು ಅದನ್ನು ನೆನಪಿಟ್ಟುಕೊಂಡಿರುತ್ತಿದ್ದೆ. ಮತ್ತೆ ಸಿಕ್ಕಿದಾಗ ಅವರೇ ಇದೇ ಪ್ರಶ್ನೆ ಕೇಳಿದಾಗ ಇದೇ ಉತ್ತರ ಹೇಳಿದರೆ?

"ಹೇ ಮಳ್ಳಿ, ಒಂಬತ್ತು ಅಲ್ದಾ? ಹತ್ತರಲ್ಲಿ ಒಂದು ಕಳೆದರೆ ಎಷ್ಟೇ?" ಅಂತ ಕನ್ಫ್ಯೂಸ್ ಮಾಡುತ್ತಿದ್ದರು!

ಮಗ್ಗಿ ಕೇಳುವುದಕ್ಕಂತೂ ಮಿತಿಯೇ ಇರಲಿಲ್ಲ. ಅದರಲ್ಲೂ ಹದಿಮೂರು, ಹದಿನೇಳು ಮತ್ತು ಹತ್ತೊಂಬತ್ತರ ಮಗ್ಗಿ ಮಕ್ಕಳ ಜಗತ್ತಿನ ಪ್ರಾಣ ತೆಗೆಯುತ್ತಿದ್ದರೆ

ದೊಡ್ಡವರಿಗೆ ಅವೆಲ್ಲ ಹಾಟ್ ಫೇವರಿಟ್ ಬೇರೆ! ನನ್ನ ಲೆಕ್ಕದ ಅಲರ್ಜಿಯ ಉರಿಗೆ ಇವರೆಲ್ಲ ಕೊಟ್ಟ ಕೊಡುಗೆಯೂ ಇರುವುದನ್ನು ನೆನೆಯದೆ ಇರಬಹುದೆ?

ನಾನು ಮತ್ತು ನನ್ನ ಜಿಗ್ರಿ ಗೆಳತಿ ನಮ್ಮ ಮನೆಯ ಪಾಗಾರದ ಮೇಲೆ ಕುಳಿತು ಯಾವ್ಯಾವುದೋ ಸಾಹಸದ ಪ್ಲಾನ್ ಮಾಡುವ ಹೊತ್ತಿಗೆ ಅದೋ ಅಲ್ಲಿ ರಸ್ತೆಯ ಆ ಕೊನೆಯಲ್ಲಿ ಜೋಳಿಗೆ ಹಾಕಿಕೊಂಡು, ಪ್ಯಾಂಟ್ ಶರ್ಟ್ ಧರಿಸಿದ ಹಿರಿಯ ವ್ಯಕ್ತಿಯೊಬ್ಬರ ಪ್ರವೇಶ "ತೈ ತ್ತ ತೈ ತ್ತ ತೈ ತ್ತ .." ಅಂತ. ಅಲ್ಲಿಗೆ ನನ್ನ ಪುಟ್ಟ ಬದುಕಿನಲ್ಲಿ ಒಬ್ಬ ದಿಗಿಲುಕೋರನ ಪ್ರವೇಶವಾಗುತ್ತಿತ್ತು.

"ಅಯ್ಯೋ.. ಭಾಗೀ .ಅಡಗುವಾ ಬಾರೇ" ಎನ್ನುತ್ತ ಗಾಬರಿಯಲ್ಲೇ ಪಿಸುಗುಟ್ಟುತ್ತಿದ್ದೆ. ಮರುಕ್ಷಣ ಇಬ್ಬರೂ ಹುಶ್ ಅನ್ನುವಷ್ಟರಲ್ಲಿ ಪಾಗಾರದ ಮೇಲಿನ ಕಾಗೆ ಹಾರಿ ಮಾಯವಾದ ಹಾಗೆ ಇಬ್ಬರೂ ಥಟ್ ಅಂತ ಅಲ್ಲೇ ಕೆಳಗೆ ಅಡಗಿ ಕುಳಿತುಬಿಡುತ್ತಿದ್ದೆವು. ಆದರೂ ನಮ್ಮ ಇರುವಿಕೆಯ ಮೂಗುಗಾಳಿ ತೆಗೆದುಕೊಂಡವರ ಹಾಗೆ ಅವರು ಬಂದು ಬಂದು ಗೇಟು ಹೊಕ್ಕಿ "ಹೋಯ್ ಎಲ್ಲಿದ್ದೆಯೇ ತಂಗಿ? ಹೋಯ್ .ಭಟ್ರೇ ಕರೀರಿ ಮಗಳನ್ನ" ಅಂದು ಕೂಗು ಹಾಕಿದರೆ ನಾನು

"ಹರ ಮುನಿಯಲ್ ನರ ಕಾಯ್ವನೆ?

ಗುರು ಕರೆಯಲ್ ಶಿಷ್ಯ ಬಾರದಿರುವನೆ?

ಬಾಯಿ ಲೆಕ್ಕಗಳ ಮಳೆಯ ದುರ್ವಿಧಿ ಸುರಿಯೆ

ಮರ್ಯಾದೆ ಮೂರ್ಕಾಸಾಗುವುದ

ತಡೆಯಬಹುದೆ?"

ಎಂದು ಸಾಲುಗಳ ರೀಮಿಕ್ಸ್ ಮಾಡುತ್ತ, ನನ್ನ ವಿಧಿಯನ್ನು ನಾನೇ ಹಳಿದುಕೊಳ್ಳುತ್ತಿದ್ದೆ.

"ಅಕಟಕಟಾ

ಎಲೆಲೆ ಮಗ್ಗಿಯೇ ನೀ ಮ್ಯಾಗಿಯಾಗಬಾರದಿತ್ತೆ?

ಫಳಗುಡುವ ನುಣುಪು ಮೈ ಹೊಂದಿ

ಗಂಟಲೊಳು ಇಳಿಯಬಹುದಿತ್ತೆ!"

ಎಂದು ರಾಗವಾಗಿ ಮನಸ್ಸಲ್ಲೇ ಅಳುತ್ತ ಪೆಚ್ಚುಮೂತಿ ಮಬ್ಬಮ್ಮನ ಹಾಗೆ ಅವರ ಮುಂದೆ ನಿಲ್ಲುತ್ತಿದ್ದೆ.

ಆ ಸಾಹೇಬರು ಶಿಕ್ಷಣ ಇಲಾಖೆಯಲ್ಲಿ ಇನ್ಸ್ಪೆಕ್ಟರ್ ಆಗಿ ನಿವೃತ್ತರಾದ ಭಾರೀ ಕುಳ. ಮಕ್ಕಳು ಎಂದರೆ ಪರೀಕ್ಷೆ ತೆಗೆದುಕೊಳ್ಳಲಿಕ್ಕೆಯೇ ಹುಟ್ಟಿದ್ದು ಎಂಬ ಮಾತಿನ ಪ್ರಚಾರಕ್ಕಾಗಿಯೇ ಬದುಕಿದ ಪಂಡಿತೋತ್ತಮ. ನನ್ನಂಥ ಹುಲು ಮಕ್ಕಳು ಎಂದರೆ ಅವರು ಅಲೆಕ್ಸಾಡರ್, ಹಿಟ್ಲರ್ ಎಲ್ಲ ಆಗಿಬಿಡುತ್ತಿದ್ದರು.

ತಮ್ಮ ಕಮಾಂಡಿಂಗ್ ಧ್ವನಿಯಲ್ಲಿ "ತಂಗಿ, ಹದಿನೇಳ ಒಂಬತ್ತಲೇ ಎಷ್ಟು ಹೇಳು ನೋಡುವಾ" ಎಂದರೆ

"ನನ್ನೆದೆಯ ವೀಣೆ ತನ್ನಂತೆ ತಾನೆ ಹರಿದು ಚೂರಾಗಿ ಢಮ್ ಢಮ್ ಢಮ್ ಢಮ್ ಎನ್ನುತ್ತಿತ್ತು.

ನನ್ನ ಗಣಿತ ಪ್ರೇಮ ಹಾಗೂ ಅದರಲ್ಲಿನ ಉಜ್ವಲ ಪಾಂಡಿತ್ಯವನ್ನು ಜಗಜ್ಜಾಹೀರು ಮಾಡಲೇ ಇವರು ಅವತಾರವೆತ್ತಿದವರು ಎಂದು ಆಗ ಅನಿಸಿಬಿಡುತ್ತಿತ್ತು.

ಹದಿನೇಳ ಒಂದಲೆ ಹದಿನೇಳು .ಅಂತ ಮನಸ್ಸಿನಲ್ಲೇ ರಾಗವಾಗಿ ಹೇಳಿಕೊಂಡು ಇನ್ನೇನು ಹದಿನೇಳ ಎಂಟಲೆಗೆ ಬರಬೇಕು, ಅಷ್ಟರಲ್ಲಿ

"ಅರೇ ಎಷ್ಟೊತ್ತೆ? ಇನ್ನೂ ಬರ್ಲಿಲ್ಲಾ?" ಎಂದುಬಿಡುತ್ತಿದ್ದರು.

ಥೋ ಬಂದ ಮಗ್ಗಿಯೂ ಅಲ್ಲೇ ಸರ್ವನಾಶ ಆಗಿಬಿಡುತ್ತಿತ್ತು!

"ತಂಗಿ, ಭಾರತದ ಕ್ರೀಡಾ ಮಂತ್ರಿ ಎಲ್ಲಿಯವರು?"

"ಭಾರತದ ಜನಸಂಖ್ಯೆಯ ಎಷ್ಟು % ನಮ್ಮ ರಾಜ್ಯದಲ್ಲಿದೆ?"

"ಚಿಕ್ಕುಗೆ ಇಂಗ್ಲಿಷ್ನಲ್ಲಿ ಏನು ಹೇಳ್ತಾರೆ?"

ಅಂತ ಕ್ವಿಜ್ ಹಾಕಿ ವಿಜಯ ಗರ್ವದಿಂದ ಹುಬ್ಬು ಹಾರಿಸುತ್ತ ಕಿರುನಗು ಬೀರಿ ಕೂತು ಬಿಡುತ್ತಿದ್ದರು. ಆಗ ನಾನು ಉತ್ತರ ಗೊತ್ತಿದ್ದರೆ ಬಚಾವು. ಇಲ್ಲದಿದ್ದರೆ ಇಡೀ ಜಗತ್ತಿನಲ್ಲಿರುವ ಚೂರಿಗಳನ್ನೆಲ್ಲ ತಂದು ಒಮ್ಮೆಲೇ ಇರಿದ ಹಾಗೆ ಆಗುತ್ತಿತ್ತು.

ಅಂತೂ ಏನೋ ಉತ್ತರ ಕೊಟ್ಟು ಸುಧಾರಿಸಿಕೊಳ್ಳುವ ಮೊದಲೇ

"ತಂಗಿ, ಕರ್ನಲ್ ಸ್ಪೆಲ್ಲಿಂಗ್ ಹೇಳು ನೋಡ್ವಾ!"

(ನಾನು : ಅವನಿಗೆ ಗೊತ್ತಿರ್ತದೆ ನಮಗೆಲ್ಲ ಎಂತಕ್ಕೆ?)

"ಕರಣ ಎಂದರೇನು?"

(ನಾನು : ಅವ ಆಚೆಮನೆ ಕಿರಣನ ಅಣ್ಣ) ಎಂದು ಅವರು ಕೇಳುವಾಗ ಉತ್ತರವನ್ನು ಮನಸ್ಸಲ್ಲೇ ಹೇಳಿಕೊಳ್ಳುವ ಅಧಿಕ ಪ್ರಸಂಗ ಮಾಡಿದರೂ ಬಾಯಿ ತೆಗೆಯಲು ಧೈರ್ಯವಾಗುತ್ತಿರಲಿಲ್ಲ. ಕೊನೆಗೆ ಸರಿಯುತ್ತರ ಕೊಡುವ ಮೊದಲೇ

"ಅರೇ .ಎಂತಕ್ಕೆ ನೀ ಇನ್ನೂ ಹೇಳಲಿಲ್ಲ?"

ಎಂದು ಉತ್ಸಾಹಕ್ಕೆ ಫಟ್ಟಂತ ಭರ್ಜಿ ಚುಚ್ಚುತ್ತಿದ್ದರು.

"ಎನಗಿಂತ ದೀನರಿಲ್ಲ, ಕ್ಷುಲ್ಲಕರಿಲ್ಲ, ಎಲ್ಲ ಬಲ್ಲವನೇ ನಿನಗೆನ್ನ ಶರಣು" ನಾನು ಎಂದು ಹಾಡಿಕೊಳ್ಳಬೇಕಿತ್ತು ಅಷ್ಟೇ!

ಆದರೂ ಅವರಿಗೆ ಮಕ್ಕಳ ಮೇಲಿನ ಪ್ರೀತಿ ಮಾತ್ರ ದೊಡ್ಡದು. ಉತ್ತರ ಹೇಳಲಿ, ಬಿಡಲಿ; ಪೆನ್ನು, ಪೆನ್ಸಿಲ್, ರಬ್ಬರು, ಪುಟ್ಟ ಶಬ್ದಕೋಶದಂತಹ ಅಮೂಲ್ಯ ಉಡುಗೊರೆಗಳನ್ನು ಉದಾರವಾಗಿ ಕೊಟ್ಟು ಒಂದು ಕ್ಷಣದಲ್ಲಿ ಮನಸ್ಸು ಪ್ರಫುಲ್ಲಿತಗೊಳ್ಳುವ ಹಾಗೆ ಮಾಡುತ್ತಿದ್ದರು. ಆದರೂ ಇನ್ನೊಮ್ಮೆ ಅವರನ್ನು ಕಂಡಾಗ ಮಾತ್ರ ಪ್ರಶ್ನಾಸುರನ ಮಳೆಯ ಭಯಕ್ಕೆ ಮತ್ತೆ ಅಡಗಿಕೊಳ್ಳಬೇಕು ಅನಿಸುತ್ತಿತ್ತು!

ಆಗ ಬಾಯಿಲೆಕ್ಕ ಅಂದರೆ ಸಿಕ್ಕಾಪಟ್ಟೆ ಭೀತಿಯಿದ್ದರೂ ಪೆನ್ನು ಪೇಪರು ಇಲ್ಲದೆ ಕ್ಷಣದಲ್ಲೇ ಮನಸ್ಸಿನಲ್ಲಿ ಕೂಡಿ, ಕಳೆದು, ಗುಣಿಸಿ, ಭಾಗಿಸುವ ಧೈರ್ಯ, ನೈಪುಣ್ಯ ಎರಡೂ ಇದ್ದವು. ಬರೆದು ಲೆಕ್ಕ ಮಾಡಲು ಬಿಡದ ಅಂತಹ ಸವಾಲುಗಳು ಮುಂದಿನ ಬದುಕಿಗೆ ನಮ್ಮನ್ನು ಸಜ್ಜು ಮಾಡುತ್ತವೆ ಎಂಬುದು ಗೊತ್ತಿಲ್ಲದೇ ಬರೀ ಗಾಬರಿಬೀಳುತ್ತಿದ್ದೆ.

ಬಾಯಿಲೆಕ್ಕವೆಂಬ ಭೂತ ನನ್ನನ್ನು ಕಾಡದ ದಿನವೇ ಇಲ್ಲ. ಬಾಲ್ಯದಲ್ಲಿ "ಜೀನಾ ಹರಾಮ್" ಮಾಡಿದವರು ಯಾರೆಂದರೆ ಅಂಥ ಲೆಕ್ಕ ಹಾಕಿದವರು ಮತ್ತು ಹಾಕಿ ಬೆಕ್ಕಿನ ಹಾಗೆ ಚೆಲ್ಲಾಟ ಮಾಡುವವರು! ಕೈಗೆ ಸಿಕ್ಕ ಮಕ್ಕಳು ಮಾತ್ರ ಇಲಿಯ ಹಾಗೆ ಬಿಲ ಸೇರಲು ಕೈಕಾಲು ಬಡಿದುಕೊಂಡು ಒದ್ದಾಡುತ್ತಿದ್ದರು.

ಲೆಕ್ಕವೆಂದರೆ ಬಿಡದೆ ಬಿಕ್ಕುವೆನಯ್ಯ

ಬೇರೀಜು ವಜಾಬಾಕಿಗಳೆ ಭೂತಗಳಯ್ಯ

ಬೆಂಬಿಡದೆ ಕಾಡಲು ದಾರಿ ಎಲ್ಲಿಹುದಯ್ಯ?

ಗಣಿತವೆಂಬೊ ತಗಣೆ ಕಚ್ಚಿರಲು

ನೀನಲ್ಲದೆ ಕಾವರಾರೋ ಎನ್ನ

ಅಂತರಾಧೀಶ!'

ಎಂದು ನನಗೆ ನಾನೇ ವಚನ ಹಾಡಿಕೊಂಡು ಅಳುತ್ತ ನನ್ನ ಬೆನ್ನು ಹತ್ತಿದ ಲೆಕ್ಕದ ಭೂತದ ಕಾಟವನ್ನು ನಿಮ್ಮಲ್ಲಿ ಅರುಹಿದ್ದೇನೆ ನಿಮ್ಮ ಸುತ್ತ ಮಕ್ಕಳಿದ್ದಾರಾ ನೋಡಿ ಮತ್ತೆ. ಶುರುವಾಗಲಿ ಬಾಯಿಲೆಕ್ಕ! ■



# ......ಅವಿಭಾಜ್ಯ ಅಂಗ

✍ ಎಚ್. ಗೋಪಾಲಕೃಷ್ಣ

ಬೆಂಗಳೂರಿನ ಎಲ್ಲರೂ ವರ್ಷದಲ್ಲಿ ಮೂರು ತಿಂಗಳು ಉಣ್ಣೆ ಶಾಲು ಉಣ್ಣೆ ಪೇಟ ಉಣ್ಣೆ ಇಜಾರ...ಮೊದಲಾದವುಗಳಿಂದ ಸಾಲಂಕೃತರಾಗಿ ಆಯ್ಯಯ್ಯಪ್ಪೋ ಚಳಿ ಚಳಿ ಚಳಿ ಅಂತ ಒದ್ದಾಡ್ತಾ ಇರಬೇಕಾದರೆ ನನಗೆ ಇದ್ಯಾಕೆ ಹಿಂಗಾಡ್ತಾರೆ ಇವರು ಅನಿಸೋದು. ಇದಕ್ಕೆ ಕಾರಣ ಗೊತ್ತಾ....

ಬೆಂಗಳೂರಿನಲ್ಲೇ ಹುಟ್ಟಿದ್ದು ನಾನು. ಇಲ್ಲೇ ಒಂದನೇ ಕ್ಲಾಸಿಂದ ಡಿಗ್ರೀ ತನಕ ಓದಿದ್ದು. ಆ ಕಾಲದಲ್ಲಿ ಎಲ್ಕೆಜಿ ಯುಕೇಜಿ ಇರಲಿಲ್ಲ ಅಂತ ಸೀದಾ ಒಂದನೇ ಕ್ಲಾಸು ಸೇರಿದ್ದು. ಇಂಗ್ಲಿಷ್ ಎ ಬೀ ಸೀ ಡಿ ಕಲಿತದ್ದೇ ಐದನೇ ಕ್ಲಾಸಿನಿಂದಾ. ಅದಕ್ಕೇ ಇಂಗ್ಲೀಷು ಅಂದರೆ ನನಗೆ ಎಣ್ಣೆ ಸೀಗೆಕಾಯಿ, ವಿರೋಧ ಪಕ್ಷದ ನಾಯಕ ಮತ್ತು ಮುಖ್ಯ ಮಂತ್ರಿ ಸಂಬಂಧ. ಆರನೇ ಕ್ಲಾಸಿನಲ್ಲಿ ಕ್ರಿಕೆಟ್ ಆಡಬೇಕಾದರೆ ಇಂಗ್ಲಿಷ್ ಸ್ಕೂಲಿನಲ್ಲಿ ಓದುತ್ತಿದ್ದ ಒಬ್ಬ ನನ್ನ ಜತೆ ಆಡ್ತಿದ್ದ. ಬ್ಯಾಟ್ ಅಡಿ ನಂಬರು ಬರೆದು ಅದನ್ನ ಆಯ್ಕೆ ಮಾಡಿಕೊಂಡು ಅದರ ಪ್ರಕಾರ ಬ್ಯಾಟಿಂಗ್ ಮಾಡೋದು ಗೊತ್ತು ತಾನೇ.. ಇದು ಆ ಕಾಲದ ಕ್ರಿಕೆಟ್ಟು.

ಬ್ಯಾಟ್ ಅಡಿಯಿಂದ ನಂಬರುಗಳು ಆಯ್ದು ಕೊಂಡೇ ವಾ. ಯಾರ ಯಾರ ನಂಬರು ಯಾವುದು ಅಂತ ತಿಳಿದುಕೊಳ್ಳಕ್ಕೆ ಇಂಗ್ಲಿಷ್ ಹುಡುಗನಿಗೆ ಹೌ ಇಸ್ ಯುವರ್ ನಂಬರು ಅಂದೆ. ಅವನು ಕಿಸಕ್ ಅಂತ ನಾಲ್ಕೈದು ಬಾರಿ ಮತ್ತೆ ಮತ್ತೆ ನಕ್ಕ, ಯೂ ಶುಡ್ ಅಸ್ಕ್ ವಾಟ್ ಈಸ್ ಯೂವರ್ ನಂಬರ್, ನಾಟ್ ಹೌ ಇಸ್ ಯುವರ್ ನಂಬರ್ ಅಂದ! ಇದು ಅವತ್ತಿಂದ ನನ್ನ ಮೆದುಳಿನ ಆಳದಲ್ಲಿ ಕೂತು ಬಿಟ್ಟಿದೆ.

ಅವತ್ತೇ ಇನ್ಮೇಲೆ ಇಂಗ್ಲಿಷ್ ನಲ್ಲಿ ಮಾತು ಆಡಲೇ ಬಾರದು ಅಂತ ಪ್ರತಿಜ್ಞೆ ಮಾಡಿಬಿಟ್ಟೆ. ಇಲ್ಲಿವರೆಗೂ ಆ ಭೀಷ್ಮ ಪ್ರತಿಜ್ಞೆ ಪಾಲಿಸಿಕೊಂಡು, ಪೋಷಿಸಿಕೊಂಡು ಬಂದಿದ್ದೀನಿ.

ಅದು ಹೇಗೋ ಡಿಗ್ರೀ ಆಯ್ತಾ.. ಆ ಕಾಲದಲ್ಲಿ ಡಿಗ್ರೀ ಮುಗಿಸಿದೊರು ಕೆಲಸ ಪಲಸ ಹುಡುಕಿಕೊಂಡು ಅಮೆರಿಕಾ, ಜರ್ಮನಿ, ಆಸ್ಟ್ರೇಲಿಯಾ, ಆಫ್ರಿಕಾ ಅಂತ ಹೋಗೋರು. ಥರ್ಡ್ ಕ್ಲಾಸ್ ಪಾಸಾದವರು ಇಲ್ಲೇ ಮೊಳೆ ಹೊಡ್ಕೊಂಡು ಕೂತು ದೇಶ ಅಂದರೆ ನಮಗೆ ಪ್ರೀತಿ ಹೆಚ್ಚು ಅಂತ ಬುರುಡೆ ಹೊಡೀತಾ ಇದ್ದೆವು.

ಚೆನ್ನಾಗಿ ನಂಬರು ತಗೊಂಡ ವರು ದೊಡ್ಡ ದೊಡ್ಡ ಕೆಲಸಕ್ಕೆ, ಫಾರಿನ್ ಗೆ ಹೋದರೆ ನಾನು ಇಲ್ಲೇ ಸಿಕ್ಕಿದ ಮೊದಲನೇ ಕೆಲಸನ ದೆವ್ವದ ಹಾಗೆ ಹಿಡಿದು ಕೊಂಡೆನಾ, ಕೊನೇ ತನಕ ಅಲ್ಲೇ ಇದ್ದೂ ಬಿಟ್ನಾ...

ಕೆಲಸಕ್ಕೆ ಸೇರಿದ ಮೇಲೆ ಒಂದೇ ಒಂದು ದಿನ ಚಳಿ ಅಂತ ಸ್ವೆಟರ್ ಹಾಕ್ಲಿಲ್ಲ ಮತ್ತು ತಲೆಗೆ ಚಳಿ ಪೇಟ ರುಮಾಲು ಕಟ್ಟಲಿಲ್ಲ. ಎಲ್ಲರೂ ಚಳಿ ಅಂತ ಒದ್ದಾ ಡ ಬೇಕಾದರೆ ನನಗೇಕೆ ಚಳಿಯಾಗಲಿಲ್ಲ ಅಂತ ತಲೆ ಕೆಡಿಸಿಕೊಂಡವನೇ ಅಲ್ಲ ನಾನು....

ಕೆಲಸಕ್ಕೆ ಫರ್ಸ್ಟ್ ಶಿಫ್ಟು ಹೋಗ್ತಾ ಇದ್ದೆನಾ ..?

ಐದೂವರೆಗೆ ಮನೆ ಬಿಡಬೇಕು ಅನ್ನೋ ಹಾಗಿದ್ರೆ ನಾಕುವರೆಗೆ ಏಳು, ದಡ

ಬಡ ನೀರು ಸುರಿದುಕೋ, ಪ್ಯಾಂಟು ಶರಟು ನೇತು ಹಾಕಿಕೊಂಡು ಕಾಫಿ ಬಸಿದುಕೊಂಡು ಕೈಯಲ್ಲಿ ಶೂಸ್ ಅದರೊಳಗೆ ಸಾಕ್ಸು ಇಟ್ಟುಕೊಂಡು ಬಸ್ ಸ್ಟಾಪ್‌ಗೆ ಓಡು, ಅಲ್ಲಿ ಸಮಯ ಇದ್ದರೆ ಶೂ ಹಾಕು, ಇಲ್ಲ ಅಂದರೆ ಬಸ್ಸಿನೊಳಗೆ ಹಾಕ್ಕೋ...

ಹೀಗೆ ಬೆಳಿಗ್ಗೆ ಎದ್ದು ಓಡ್ತಾ ಇದ್ನಾ ಒಂದೇ ಒಂದಿನ ಚಳಿ ಅನಿಸಲಿಲ್ಲ. ಯಾಕೆ ಸಾರ್ ಮೈ ಹೀಗೆ ಬಿಟ್ಕೊಂಡು ಬರ್ತೀರಿ ಅಂತ ನನ್ನ ಕೊಲಿಗ್ಸು ಕೇಳೋರು. ಅವರೋ ಪೂರ್ತಿ ಉಣ್ಣೆ ಬಟ್ಟೆಲಿ ನಖ ಶಿಖಾಂತ ಹುದುಗಿ ಹೋಗಿರೋರು. ನನ್ನ ಕಂಡರೆ ಅದೇನೋ ವ್ಯಾಕುಲತೆ... ಬಿಸಿ ನೀರು ಹೊಯ್ಕೊಂಡ್ ಬಂದೆ ಇವರೇ, ಚಳಿ ಗೊತ್ತಾಗ್ತಿಲ್ಲ ಅಂತ ರೆಡಿ ಉತ್ತರ ಸುಮಾರು ವರ್ಷ ಕೊಟ್ಟುಕೊಂಡು ಬಂದೆ. ಇನ್ನ ರಾತ್ರಿ ಹನ್ನೆರಡಕ್ಕೆ ಸೆಕೆಂಡ್ ಶಿಫ್ಟ್ ಮುಗಿಸಿ ಮನೆಗೆ ಬಂದರೂ ಅದೇ ಅಂಗಿ ಅದೇ ಪ್ಯಾಂಟು, ನೋ ಸ್ವೆಟರ್.

ನಮಗೆ ಯೂನಿಫಾರ್ಮ್ ಅಂತ ಕೊಟ್ರಲ್ಲ, ಅದೇ ತರಹ ಯೂನಿಫಾರ್ಮ್ ಅನ್ನು ನಮ್ಮ ಉತ್ತರ ಕಡೆ ಅವರಿಗೂ ಕೊಟ್ರು. ಅಲ್ಲಿರೋ ಜನ ಚಳಿ ಜಾಸ್ತಿ ನಮಗೆ ಸ್ವೆಟರ್ ಸಹ ಬೇಕು ಅಂತ ಸ್ಟ್ರೈಕ್ ಮಾಡಿದರಲ್ಲ.. ಆಗ ಅವರಿಗೆ ಸ್ವೆಟರ್ ಕೊಡೋದು ಅಂತ ಆಯ್ತು. ಇಲ್ಲಿ ದಕ್ಷಿಣ ಭಾರತದ ನಾವು ನಮಗೂ ಸ್ವೆಟರ್ ಕೊಡಿ ಅಂತ ವರಾತ ಹಚ್ಚಿದೇವಾ.. ಒಂದೂವರೆ ವರ್ಷ ಅಳೆದೂ ಸುರಿದು ಒಂದು ವರ್ಷದ ಯೂನಿಫಾರ್ಮ್ ಬದಲಿಗೆ ಸ್ವೆಟರ್ ಅಂತ ಒಪ್ಪಂದ ಆಗಿ ಎಲ್ಲರಿಗೂ ಸ್ವೆಟರ್ ಕೊಟ್ರು ನೆನಪಿದೆ ತಾನೇ..?

ಆಗ ನನ್ನ ಸೈಜಿನ ಸ್ವೆಟರ್ ಸಿಗಲೇ ಇಲ್ಲಾಪ್ಪ... ಕೊನೆಗೆ ನನಗೆ ಸ್ವೆಟರ್ ಕಾಸು ಕೊಟ್ಟು ಕೈ ತೊಳಕೊಂಡರು... ಇಡೀ ಫ್ಯಾಕ್ಟರಿಲೀ ನಾನೊಬ್ಬನೇ ಸ್ವೆಟರಿಗೆ ಬದಲು ಕಾಸು ತಗೊಂಡಿದ್ದು ಮತ್ತು ಅದನ್ನು ಇಡೀ ಪ್ರಪಂಚಕ್ಕೆ ಡಂಗೂರ ಇಲ್ಲದೇ ಪ್ರಚಾರ ಮಾಡಿದೋನು...

ಶರಟಿನ ಮೇಲೆ ನೋಟು ಅಂಟಿಸಿ ಕೊಂಡು ಬಾ ಅಂತ ಸ್ನೇಹಿತರು ತಮಾಷೆ ಮಾಡೋರು. ಮಕ್ಕಳು ಅವರಿಗೆ ದುಡ್ಡು ಸಿಕ್ಕಿಲ್ಲ ಹೊಟ್ಟೆ ಉರಿದು ಕೊಳ್ಳುತ್ವೆ, ಉರ್ಕೊಳ್ಳಿ ಅಂತ ನಾನೂ ಖುಷಿ ಪಡ್ತಾ ಇದ್ನ...

ಹೀಗೆ ನಡೀತಾ ನನ್ನ ಸರ್ವಿಸು.... ರಿಟೈರ್ ಆಗೋಕ್ಕೆ ಮೊದಲು ಸ್ವೆಟರ್ ತೊಡಲೇ ಬೇಕಾದ ಸಂದರ್ಭ ಹುಟ್ಟಿ ಬಿಡ್ತು. ಅದು ಹೇಗೆ ಅಂದರೆ.... ಒಂದು ಸಲ ಕೆಮ್ಮು ನೆಗಡಿ ಅಂತ ಡಾಕ್ಟರ ಹತ್ರ ಹೋದೆ. ಆಗತಾನೇ ಡಾಕ್ಟರು ಪರೀಕ್ಷೆ ಮುಗಿಸಿ ಹೊಸದಾಗಿ ನಮ್ಮ ಏರಿಯಾಕ್ಕೆ ಬಂದು ಕ್ಲಿನಿಕ್ ತೆಗೆದಿದ್ದರು ಅವರು ನನ್ನ ಕೈ ಹಿಡಿದು ನೋಡಿದರೂ, ಥರ್ಮಾಮೀಟರ್ ಬಾಯಲ್ಲಿಟ್ಟರು. ಎದೆ ಹತ್ರ ಬಲ ಕಿವಿ ಇಟ್ಟರು, ತಲೆ ಆಡಿಸಿ ಅಲ್ಲೇ ಎಡ ಕಿವಿನೂ ಇಟ್ಟರು. ಇದ್ದಕ್ಕಿದ್ದ ಹಾಗೇ ನಡುಗೊಕ್ಕೆ ಶುರು ಮಾಡಿದರು.

ಸಾರ್ ಸಾರ್ ಸಾರ್ ಏನಾಯ್ತು ಅಂತ ಅವರ ಕೈ ಹಿಡಕೊಂಡು ನಾನೂ ಪೇಚಾಡಿದೆನಾ..

ರೀ ಏನ್ರೀ ಇಷ್ಟು ಲೋ ಆಗಿದೆ ನಿಮ್ಮ ಟೆಂಪರೇಚರ್... ಅಂತ ಹೇಳ್ತಾ ಆಚೆ ಕೂತಿದ್ದ ನಮ್ಮ ಬಾಸ್ ನ ಕರೆದರು. ಬಾಸು ನಾನು ಡಾಕ್ಟರ ಹತ್ರ ಹೋಗ್ತೀನಿ ಅಂತ ಹೇಳಿ ಎಲ್ಲಾದರೂ ಅಲೆಯೋದಕ್ಕೆ ಹೋಗಿ ಬಿಡುತ್ತೆ ಇದು ಅಂತ ನನ್ನ ಜತೇನೆ

**ನಗೆ ಸುಗ್ಗಿ**


ಈಚೆಗೆ ಅಂದರೆ ಜನವರಿ ಇಪ್ಪತ್ತೆಂಟರಂದು ಒಂದು ವ್ಯಂಗ್ಯ ಚಿತ್ರಗಳ ಪ್ರದರ್ಶನ ನಡೆಯಿತು. ನಾಡಿನ ಪರಿಚಿತ ವ್ಯಂಗ್ಯ ಚಿತ್ರಕಾರರಾದ ಸರ್ವಶ್ರೀ ನಂಜುಂಡಸ್ವಾಮಿ, ರಘುಪತಿ ಶೃಂಗೇರಿ ನಾಗನಾಥ್ ಗೌರಿಪುರ ಹಾಗೂ ಎಂ.ಎನ್ ದತ್ತಾತ್ರಿ ಇವರುಗಳ ಕೃತಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಉದ್ಘಾಟನೆಗೆ ನನ್ನ ಜೊತೆ ಶ್ರೀಯುತ ಚಂದ್ರನಾಥ ಆಚಾರ್ಯ, ಶ್ರೀಮತಿ ಭುವನೇಶ್ವರಿ ಹಾಗೂ ಎಂ.ಎನ್. ಸುಬ್ರಮಣ್ಯ ಉಪಸ್ಥಿತರಿದ್ದರು. ಕಾರ್ಯಕ್ರಮ ಬಹು ಸೊಗಸಾಗಿ ನೆರವೇರಿತು. ಅಂದು ಪ್ರದರ್ಶನಗೊಂಡ ವ್ಯಂಗ್ಯ ಚಿತ್ರಗಳಲ್ಲಿ ಹಲವನ್ನು ಇಲ್ಲಿ ಅಚ್ಚಿಸಿದ್ದೇವೆ. ನೋಡಿ ಆನಂದಿಸಿ. –ಶಿವಕುಮಾರ್

ನಿಮ್ಮೆಜಮಾನ್ರಿಗೆ **ಸೋಶಿಯಲ್ ಡಿಸ್ಟೆನ್ಸ್** ಅಂದ್ರೆ ಏನು? ಅಂತ ವಸಿ ಹೇಳ್ಕೊಡಿ ಅಮ್ಮಾವ್ರೇ ...!




**ತೀರಾ ಹಿಂದುಳಿದ ಗ್ರಾಮ ಸಾರ್.**
**ರಸ್ತೆ, ವಿದ್ಯುತ್ ಸಂಪರ್ಕ ಹಾಗಿರಲಿ, ಮೂಲಭೂತ ಸೌಕರ್ಯಗಳಾದ ಮೊಬೈಲ್ ನೆಟ್ ವರ್ಕ್, ಇಂಟರ್ನೆಟ್ ಸಂಪರ್ಕ ಕೂಡ ಇಲ್ಲ ಸಾರ್...**






| | |
|---|---|
| ತೆಪ್ಪಗೆ ಮನೆಯಲ್ಲಿದ್ರೆ ಒಳ್ಳೇದು: ರೌಡಿಗಳಿಗೆ ವಾರ್ನಿಂಗ್ ಕೊಟ್ಟ ಸಿಸಿಬಿ ಪೊಲೀಸ್ | ಸುದ್ದಿ |



ಕಾವಲಿಗೆ ಬಂದಿತ್ತು. ಬಾಸು ಒಳಗಡೆ ಬಂತು.

ಏನಮ್ಮ ನಿಮ್ಮ ಗಂಡನಿಗೆ ಇಷ್ಟು ಕಡಿಮೆ ಆಗಿದೆ ಟೆಂಪರೇಚರ್.... ನೋಡಿಕೊಳ್ಳೋದು ಬೇಡ್ವಾ ಅಂತ ರೇಗಿದರು. ಪಕ್ಕದ ಬಟ್ಟೆ ಅಂಗಡಿಗೆ ಅವರೇ ಓಡಿದರು. ನಮ್ಮ ಬಾಸು ಡಾಕ್ಟರಿಗೆ ಶಾಪ ಹಾಕ್ತಾ ಕಣ್ಣು ಕೆಂಪಗೆ ಮಾಡಿಕೊಂಡು ಉರೀತಾ ಕೂತಿತ್ತು.

ಡಾಕ್ಟರು ಕೈಯಲ್ಲಿ ದೊಡ್ಡ ಪಾಕೆಟ್ ಹಿಡಕೊಂಡು ಬಂದೋರು ಮೊದಲು ಸ್ವೆಟರ್ ಆಚೆ ತೆಗೆದರು, ನನಗೆ ಹಾಕಿದರು, ಕಾಲು ಉಣ್ಣೆ ಪ್ಯಾಂಟ್ ಒಳಗೆ ತೂರಿಸಿದರು. ಬೆಚ್ಚಗೆ ಮನೆಗೆ ಕರ್ಕೊಂಡು ಹೋಗಿ. ಪ್ರಾಬ್ಲಂ ಹೆಚ್ಚಾದರೆ ನರ್ಸಿಂಗ್ ಹೋಂಗೆ ಸೇರ್ಸಿ ಅಂತ ಬಿಲ್ ಕೈಗಿತ್ತರು... ನಾನೇ ಹೀಗೆ ತಂದಿದ್ದರೆ ನಮ್ಮ ಬಾಸು ಯಾರನ್ನ ಕೇಳಿ ತಂದೆ ಈ ಕಚಡಾನ ಅಂತ ರೇಗಿ ಪಾಕೆಟ್ ಮುಖಕ್ಕೆ ಎಸೆದು ಹೋಗಿ ಇದನ್ನ ವಾಪಸ್ ಕೊಟ್ಟು ದುಡ್ಡು ಇಸ್ಕೊಂಡ್ ಬಾ ಅಂತ ಕಳಿಸಿರೊಳು. ತೆಪ್ಪಗೆ ದೂಸ್ರಾ ಮಾತೇ ಆಡದೆ ತೆಪ್ಪಗೆ ಪರ್ಸಿನಿಂದ ದುಡ್ಡು ತೆಗೆದುಕೊಟ್ಟಳು. ಅವತ್ತು ಮೊಟ್ಟ ಮೊದಲ ಬಾರಿಗೆ ನನಗೆ ನಾನೂ ಡಾಕ್ಟರು ಆಗಲೇಬೇಕಿತ್ತು ಅಂತ ಅನಿಸಿಬಿಡ್ತು...

ನನ್ನಾಕೆಗೆ ಅವತ್ತಿಂದ ನನ್ನನ್ನ ಈ ಉಣ್ಣೆ ಕೋಟೆ ಒಳಗೆ ಮುಚ್ಚಿ ಮುಚ್ಚಿ ಕಾಪಾಡುವ ಕೆಲಸ ಅಂಟಿತು ಮತ್ತು ಅದನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರ್ತಾ ಇದ್ದಾಳೆ. ಅಂಗೈಯಲ್ಲಿ ಇಟ್ಟು ಸಾಕಿದರು ಅಂತ ಹೇಳ್ತಾರಲ್ಲ ಹಾಗೆ.

ಅವತ್ತಿಂದ ನನಗೆ ಸ್ವೆಟರ್ ಮೈಗೆ ಅಂಟಿ ನನ್ನ ದೇಹದ ಒಂದು ಅವಿಭಾಜ್ಯ ಅಂಗ ಆಯಿತು.

ಈಗಲೂ ಸಹ ಹೇಗೆ ಸ್ವೆಟರ್ ಮೈಗೆ ಅಂಟಿರುತ್ತೆ ಅಂದರೆ ಈ ಚಿನ ವರ್ಷಗಳಲ್ಲಿ ಸ್ವೆಟರ್ ಹೊರತು ನನ್ನನ್ನು ಕಲ್ಪಿಸೋದು ಸಹ ಯಾರಿಗೂ ಸಾಧ್ಯ ಇಲ್ಲ. ಬೆಳಿಗ್ಗೆ ಪಕ್ಕದ ಕೆರೆ ಏರಿ ಮೇಲೆ ವಾಕಿಂಗ್ ಹೋಗ್ತೀರಾ, ಒಬ್ಬ ಧಡೂತಿ ಆಸಾಮಿ ಬುಸ್ ಬುಸ್ ಅಂತ ಮೈ ಎಲ್ಲಾ ಉಸಿರು ಬಿಡುತ್ತಾ ಓಡಿದ ಹಾಗೆ ನಡಿತಿರುತ್ತೆ ನಿಮ್ಮ ಮುಂದೆ. ಆ ಆಸಾಮಿ ನಾನೇ. ಆಗ ನನ್ನ ಮೇಲೆ ಸ್ವೆಟರ್ ಇರ್ತದೆ.

ಹನ್ನೊಂದಕ್ಕೆ ಒಂದು ಕಿಲೋಮೀಟರು ದೂರ ಇರೋ ಕಾಪಿ ಹೊಟೇಲಿನಲ್ಲಿ ನಿಮ್ಮ ಮುಂದೆ ಒಬ್ಬ ಧಡಿಯ ಕಾಫಿ ತಗೊಂಡು ಅಡ್ಡಡ್ಡ ನಡೀತಾ ಕೂತು ಕೊಳ್ಳಲುಸರಿಯಾದ ಕುರ್ಚಿ ಹುಡುಕ್ತಾ ಇದ್ದಾನೆ ನೋಡಿ, ಅದು ನಾನೇ.. ಆಗ ನನ್ನ ಮೇಲೆ ಸ್ವೆಟರ್ ಇರ್ತದೆ.

ಹನ್ನೆರಡಕ್ಕೆ ಮೆಡಿಕಲ್ ಶಾಪ್‌ನಲ್ಲಿ ಬೀ ಪೀ ಮಾತ್ರೆ ತಗೊಳ್ಳೋಕ್ಕೆ ಬರ್ತೀರಾ, ಅಲ್ಲಿ ನಿಮ್ಮ ಹಿಂದೆ ನಾಲ್ಕನೇ ಅವನು ಅಥವಾ ಮುಂದೆ ಕ್ಯೂ ನಲ್ಲಿ ಮೂರು ಜನ ಸೇರಿ ಒಬ್ಬ ಆಗಿರೋ ಒಬ್ಬ ಎರಡನೇ ಅವನು ಇರ್ತಾನೆ ನೋಡಿ, ಅವನು ನಾನು ಡಯಾಬಿಟಿಸ್ ಮಾತ್ರೆ ತಗೋತಾ ಇರ್ತಿನ, ಆಗ ನನ್ನ ಮೇಲೆ ಸ್ವೆಟರ್ ಇರ್ತದೆ.

ಸಂಜೆ ಐದಕ್ಕೆ ಮೊಮ್ಮಗುನ ಕರೆದುಕೊಂಡು ಬೋಂಡಾ ತಿನ್ನೋಕೆ ಅಂತ ದೂರದ ಪೆಟ್ಟಿಗೆ ಅಂಗಡಿಗೆ ಬರ್ತೀರಾ, ಗುಟ್ಟಾಗಿ ಒಂದು ಆರು ಬೋಂಡಾ ತಿಂದು ಮನೆ ಸೇರ್ಕೊ ಪ್ಲಾನ್ ತಾನೇ ನಿಮ್ಮದು.. ನಿಮಗಿಂತ ಮೊದಲೇ ಬಂದು ಹತ್ತು ರೂಪಾಯಿಗೆ ಬೋಂಡಾ ಕಟ್ಟಿಸಿಕೊಂಡು ಗುಟ್ಟಾಗಿ ಅಲ್ಲೇ ಕಟ್ಟೆ ಮೇಲೆ ಗೋಡೆ ಕಡೆ

ಮುಖ ಮಾಡಿ ನಿಮ್ಮ ಕಡೆ ಬೆನ್ನು ತೋರಿಸಿ ಒಬ್ಬ ಕೂತಿದ್ದಾನೆ, ತಾನೇ. ಅಲ್ಲಿ ಗೋಡೆಗೆ ಮುಖ ಮಾಡಿ ಕೂತು ಬೋಂಡಾ ತಿಂತಾ ಇರೋನು ಯಾರು ಅಂತೀರಿ.. ಅದು ನಾನೇ, ಆಗ ನನ್ನ ಮೇಲೆ ಸ್ವೆಟರ್ ಇರ್ತದೆ.

ರಾತ್ರಿ ಒಂಬತ್ತೂವರೆ ಗಂಟೆಗೆ ಪೆಟ್ಟಿಗೆ ಹೋಟಲಲ್ಲಿ ಮನೆಗೆ ಗೋಬಿ ಮಂಚೂರಿ ಪಾರ್ಸಲ್ ಕಟ್ಟಿಸಿಕೊಳ್ಳಲು ಕ್ಯೂನಲ್ಲಿ ನಿಂತಿದ್ದೀರಿ. ನಿಮ್ಮ ಹಿಂದೆ ಕ್ಯೂನಲ್ಲಿ ಹೆಬ್ಬಾವು ಉಸಿರು ಬಿಡೋ ಶಬ್ದ ಕೇಳುತ್ತೆ. ಅದ್ಯಾರಪ್ಪಾ ಅಂತ ಆಶ್ಚರ್ಯದಿಂದ ನೀವು ಹಿಂದೆ ತಿರುಗಿ ನೋಡ್ತೀರಿ. ಅದು ನಾನೇ ಇವರೇ. ಆದಮೇಲೆ ಆರನೇವನು ನಾನು, ನಾನೂ ಕೂಡ ಅದಕ್ಕೇ ಬಂದಿದೀನಿ, ಆಗ ನನ್ನ ಮೇಲೆ ಸ್ವೆಟರ್ ಇರ್ತದೆ....

ಮಧ್ಯ ರಾತ್ರಿ ನಮ್ಮನೆ ಮುಂದಿನ ರಸ್ತೇಲಿ ನೀವು ಮಗನ ಜತೆ ಗಾಡಿಲಿ ಹೋಗ್ತಾ ಇದೀರಾ ಸೆಕೆಂಡ್ ಶೋ ಮುಗಿಸಿ ಅಥವಾ ಗಂಟೆ ಮೊದಲು ನಿಮ್ಮಾಕೆ ಜತೆ ಜಗಳ ಆಡಿಕೊಂಡು ಮನೆಯಿಂದ ಆಚೆ ಹೋದ ಸೊಸೆಯನ್ನು ಹುಡುಕಿಕೊಂಡು ಅಥವಾ ಸರಿ ರಾತ್ರಿ ನಿಮ್ಮನೆ ಹಾಲ್‌ಗೆ ಕಲ್ಲು ಎಸೆದ ಹುಡುಗ ಯಾರು ಅಂತ ಹುಡುಕಿಕೊಂಡು ಧಾವಂತದಲ್ಲಿ ಹೋಗ್ತಾ ಇದ್ದೀರಿ. ಅಕಸ್ಮಾತ್ ನಮ್ಮನೆ ಕಡೆ ನೋಡ್ತೀರಾ, ನನ್ನ ರೂಮು ಕಾಣುತ್ತಾ, ಕಿಟಕಿನಲ್ಲಿ ಹಾಗೇ ಕಣ್ಣು ಹಾಯಿಸ್ತಿರಾ.... ಸ್ವೆಟರ್ ಇರ್ತದೆ, ನನ್ಮೇಲೆ ...

ಹೀಗೆ ನನಗೆ ಸ್ವೆಟರು ನನ್ನ ದೇಹದ ಒಂದು ಅವಿಭಾಜ್ಯ ಅಂಗ ಆಗಿ ಬಿಟ್ಟಿದೆ ಇವರೇ.... ■

ನೆನ್ನೆ  ನಾನು ಗುರುಗಳ ಹತ್ರ ಕೇಳಿದೆ....

"ಗುರುಗಳೇ... ನನ್ನ ವೈವಾಹಿಕ ಜೀವನ ಹೇಗಿರುತ್ತೆ? ಗ್ರಹಗಳ ಸಂಚಾರ ಹೇಗಿರುತ್ತೆ?"

ಗುರುಗಳು ನನ್ನ ಕಡೆ ಕರುಣೆಯಿಂದ ನೋಡಿ ಹೇಳಿದರು. "ಗ್ರಹ ಸಂಚಾರ ಹಾಗಿರಲಿ, ಸಂಸಾರದಲ್ಲಿ ರಾಶಿಗಳು ಹೇಗಿರುತ್ತವೆ ಹೇಳ್ತೀನಿ ಕೇಳು" ಅಂದ್ರು.

ನಾನು ಮನದಲ್ಲಿ ಕಾಮನ ಬಿಲ್ಲನ್ನು ಮೂಡಿಸಿಕೊಂಡು ಅವರತ್ತ ನೋಡಿದೆ

ಶಿಷ್ಯ .....

ನಿನ್ನ ಜೀವನದಲ್ಲಿ ಕನ್ಯಾ ಪ್ರವೇಶ ಆದ ದಿನವೇ ವೃಷಭದ ತರಹ ಇರೋ ನೀನು ಮೇಷ ದ ತರಹ ಆಗಿಬಿಡ್ತೀಯ..

ಅವಳೇನೇ ತಪ್ಪು ಮಾಡಿದರೂ ಅದು ನಿನ್ನಿಂದಲೇ ಘಟಿಸಿದ ತಪ್ಪು ಎಂದು ವಿನೀತನಾಗಿ ಧನುಸ್ ತರಹ ಬಾಗಿ ಹೇಳು.

ಇಲ್ಲವಾದರೆ, ಅವಳ ಮುಖ ಕುಂಭದ ರೀತಿ ಊದಿ ಸಿಂಹದ ರೀತಿ ವರ್ತಿಸಬಹುದು.

ಅವಳನ್ನು ಸಮಾಧಾನ ಪಡಿಸಲು ಶಾಪಿಂಗ್ ಮಾಡಿಸಿದ ಬಿಲ್ ವೃಶ್ಚಿಕದ ರೀತಿ ಕುಟುಕಬಹುದು!

ಏನೇ ಮಾತನಾಡಿದರೂ ತುಲಾದಂತೆ ತೂಕವಾಗಿ ಮಾತನಾಡು.

ಕಟಕದಂತೆ ತಪ್ಪಿಸಿಕೊಳ್ಳಲು ಓಡಾಡಿದರೆ.. ಮಕರದ ರೀತಿಯಲ್ಲಿ ಹಿಡಿದುಕೊಳ್ಳುತ್ತಾಳೆ.

"ಸಾಕು ಗುರುಗಳೇ" ಎಂದೆ. ನನ್ನ ಮನಸಿನಲ್ಲಿದ್ದ ಕಾಮನ ಬಿಲ್ಲು ಮಾಯವಾಗಿ ಕಾರ್ಮೋಡ ಆವರಿಸಿತ್ತು.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ಇದು ರಿಮೋಟ್ ಕಂಟ್ರೋಲ್ ವೈವಾಹಿಕ ಜೀವನದ ಕಾಲ. ಗಂಡ ಎಲ್ಲೋ ಕೆಲಸದಲ್ಲಿ. ಹೆಂಡತಿ ಮತ್ತೆಲ್ಲೋ. ರಾಮ ಮತ್ತು ಸೀತೆ ಆ ಕಾಲದಲ್ಲೇ ಇಂತಹ ಬದುಕನ್ನು ಜೀವಿಸಿದ್ದರು. ಸೀತೆ ಒಬ್ಬ ಸಿಂಗಲ್ ಪೇರೆಂಟ್ ಆಗಿ ಕಾಣುತ್ತಾಳೆ.
- ಅಮೆರಿಕದ ಮೆನು ಬಡಿಸುವ ಹೋಟೆಲ್ಲಿಗೆ 'ಅಮೆರಿಖಾನ' ಎಂದು ಹೆಸರಿಡಬಹುದೆ?
- 'ಬೊಜ್ಜು ಕರಗಿಸುವುದು ಹೇಗೆ?' ಎಂಬ ಪುಸ್ತಕ ಓದಿದ ಮಾತ್ರಕ್ಕೆ ಬೊಜ್ಜು ಕರಗದು.
- ನಿಮ್ಮ ಮೊಬೈಲ್ ಫೋನಾಚೆ ಇರುವುದೇ ನಿಜವಾದ ಪ್ರಪಂಚ.
- ಎ ಬುಕ್ ರೆಡ್ ಬೈ 1000 ಡಿಫರೆಂಟ್ ಪೀಪಲ್ ಈಸ್ 1000 ಡಿಫರೆಂಟ್ ಬುಕ್ಸ್.
- ಎಲ್ಲ ಸಮಸ್ಯೆಗಳಿಗೂ ನಮ್ಮ ಬಳಿ ಪರಿಹಾರ ಇರುತ್ತವೆ – ಸಮಸ್ಯೆ ನಮ್ಮದಲ್ಲದಾಗ.
- ಕೆಲವೊಮ್ಮೆ ತಾಯಿ ತನ್ನ ಮಕ್ಕಳಿಗೆ ಮಾಡಬಹುದಾದ ಅತಿ ದೊಡ್ಡ ಸಹಾಯವೆಂದರೆ ಇನ್ನೊಂದು ಮಗುವಿಗೆ ಜನ್ಮ ಕೊಡದಿರುವುದು.
- ವಿ ಡೋಂಟ್ ನೊ ವಾಟ್ ವಿ ಡೋಂಟ್ ನೊ.
- ಧ್ಯಾನ ಎಂಬುದು ವರ್ಕ್ ಫ್ರಂ ಓಂ.
- ನಿಮಗೆ ದಕ್ಕುತ್ತಿರುವ ಬೆಳೆ ಸರಿಯಾಗಿಲ್ಲ ಎಂದು ನಿಮಗನಿಸಿದರೆ ನೀವು ಬಿತ್ತುತ್ತಿರುವುದನ್ನು ಬದಲಾಯಿಸಬೇಕಾಗುತ್ತದೆ.
- ಉಪದೇಶ ಹರಳೆಣ್ಣೆಯಂತೆ. ಕೊಡುವುದು ಸುಲಭ. ಸೇವನೆ ಕಷ್ಟ.
- ಲೈಫ್ ಸ್ಮೈಲ್ಸ್ ಅಟ್ ಯು ವೆನ್ ಯು ಆರ್ ಹ್ಯಾಪಿ. ಬಟ್ ಲೈಫ್ ಸೆಲ್ಯೂಟ್ಸ್ ಯು ವೆನ್ ಯು ಮೇಕ್ ಅದರ್ಸ್ ಹ್ಯಾಪಿ.
- ಜನಸಂದಣಿಯಲ್ಲಿ ಸೇರಿಕೊಳ್ಳುವುದು ಸುಲಭ. ಆದರೆ ಅಲ್ಲಿ ಒಂಟಿಯಾಗಿ ನಿಲ್ಲುವುದು ಪ್ರಯಾಸಕರ.
- ನಿಮ್ಮ ಕಷ್ಟ ನಿಮಗೆ ಮಾತ್ರ ಗೊತ್ತು. ಬೇರೆಯವರು ಫಲಿತಾಂಶವನ್ನು ಮಾತ್ರ ಗಮನಿಸುತ್ತಾರೆ.
- ವಾಟ್ ಯು ಹ್ಯಾವ್ ಮೆನಿ ಕೆನ್ ಹ್ಯಾವ್. ಬಟ್ ವಾಟ್ ಯು ಆರ್ ನೊ ಒನ್ ಕೆನ್ ಬಿ.
- ತುಂಬಿದ ಜೇಬು ನೂರು ಚಟ ಕಲಿಸುತ್ತದೆ. ಖಾಲಿ ಜೇಬು ಸಾವಿರ ಪಾಠ ಕಲಿಸುತ್ತೆ.
- ಕೆಲವೊಮ್ಮೆ ಏನೂ ಹೇಳದಿರುವುದೇ ಎಲ್ಲವನ್ನೂ ಹೇಳಿರುತ್ತದೆ.

■

# ಫ್ಯಾಮಿಲಿ ಪ್ರಾಬ್ಲಂ; ಫ್ಯೂಚರ್ ಪ್ಲಾನ್ಸ್

ಇ. ಆರ್. ರಾಮಚಂದ್ರನ್

ಜಿರತೆ ಫ್ಯಾಮಿಲಿ ಟೈಮ್.

ಅಮ್ಮ ಜಿರತೆ ಅಪ್ಪನ್ನ ತರಾಟೆಗೆ ತೊಗೋಳ್ತಾ ಇತ್ತು. ಮರಿಗಳು ಅಲ್ಲೇ ಆಡ್ಕೊಳ್ತಾ ಇದ್ವು.

'ಮಕ್ಕಳೆದುರ್ಗೆ ಕೊಚ್ಕೊಂಡಿದ್ದೂ ಕೊಚ್ಕೊಂಡಿದ್ದೇ! "ನಿಮಗೆ ಕೆ ಎರ್ ಎಸ್ ಡ್ಯಾಮ್ ಮೇಲೆ ಸುತ್ತಾಡಿಸ್ತೀನಿ, ಬೃಂದಾವನ್ ಗಾರ್ಡನ್ಸ್ ತೋರಿಸ್ತೀನಿ" ಅಂತ. ಈಗ ಬಂದು 2 ವಾರ ಆಗಿದೆ. ಒಂದು ನರಪಿಳ್ಳೆ ಇಲ್ಲ. ಡ್ಯಾಮ್ ಕ್ಲೋಸ್ ಮಾಡೀದಾರೆ. ಮಕ್ಕಳು ತಿಂದು ಎಷ್ಟು ದಿವಸ ಆಯ್ತೊ? ಹಸಿದು ಕಂಗಾಲಾಗಿವೆ. ಡ್ಯಾಮ್ ಇಟ್'.

'ಕೋಪಿಸ್ಕೋಬೇಡ ಡಿಯರ್.. ಎಲ್ಲಾ ಕ್ಲೋಸ್ ಮಾಡಿದಾರೆ.... ಏನಾದ್ರೂ ಹೊಡಕೊಂಡು ಬರೋಣ ಅಂದ್ರೆ ಬೀದಿಲಿ ನಾಯಿ ಕೂಡ ಸಿಗ್ತಿಲ್ಲ'.

'ನನ್ನ ಡಿಯರ್ ಅಂತ ಕರೀಬೇಡ.. ಏನಾದ್ರೂ ಮಾಡು ನಾನ್–ವೆಜ್ ಇಲ್ದಿದ್ದರೆ ವೆಜ್ಜೇ ಆಗ್ಲಿ..ಹೊಟ್ಟೆಗೆ ಏನಾದ್ರೂ ಅವಕ್ಕೆ ಹಾಕೋಣ'.

'ಮುಂಚೆ ಇಪ್ಪತ್ತು ನಾಲ್ಕುಘಂಟೇನೂ ಇಲ್ಲಿ ಹಂದಿಗಳು ಬೀದ್ಬೀದೀಲಿ ಹೇರಳವಾಗಿ ಗುಂಪು ಗುಂಪಾಗಿ ಸಿಗೋದು. ಅವುಗಳೂ ಬೀದೀಲಿ ಕಾಣಿಸ್ತಿಲ್ಲ'.

'ಅವನ್ನೆಲ್ಲಾ ಬೇರೆ ಕಡೆ ಓಡ್ಸಿದ್ಮೇಲೆ ಮೈಸೂರು ಬೆಸ್ಟ್ ಸಿಟಿ ಅಫ್ ಇಂಡಿಯಾ ಆಗಿದ್ದು'.

'ಇಲ್ಲಿ ಸಿಎಫ್ ಟಿಆರ್ ಐ ಅಂತ ಒಂದು ಇನ್‌ಸ್ಟಿಟ್ಯೂಟ್ ಇದೆ. ಊಟ–ತಿಂಡಿ ರಿಸರ್ಚ್ ಲ್ಯಾಬು..'

'ಸರಿ..ಅಲ್ಲಿಂದ ತಿನ್ನಕ್ಕೆ ಏನಾದ್ರೂ ಸಿಗ್ಬೇಕೂ ಅಂದ್ರೆ 5 ವರ್ಷ ಆಗುತ್ತೆ..ಜೊತೆಗೆ ಅವ್ರು ಮಾಡೋದು ತೊಕ್ಕು, ಮಾವಿನಕಾಯಿ ಮಿಡಿ, ಅದು ಜಾಡೀಲಿ ಹಾಕಿ ಕೊಡ್ತಾರೆ... ಪಿಂಗಾಣಿ ಮಕ್ಳಿಗೆ ಡೇಂಜರ್ ನಮ್ ಮಕ್ಳಿಗೆ ಉಪ್ಪಿನ ಕಾಯಿ ಎಲ್ಲಾ ಅಗಲ್ಲ.. ಸ್ಟೊಮಕ್ ಬೇಗ ಅಪ್ಸೆಟ್ ಆಗುತ್ತೆ. ಚಿಕ್ಕದಕ್ಕೆ ನಾಲಿಗೆ ಸುಟ್ಟೋಗುತ್ತೆ..'

'ಇಲ್ಲಿ ಇನ್ನೊಂದು ಲ್ಯಾಬ್ ಇದೆ. ಅದು ಡಿ ಎಫ್ ಆರ್ ಎಲ್ . ಡಿಫೆನ್ಸ್ ಲ್ಯಾಬು'.

'ಬೇಡಪ್ಪಾ ಬೇಡ.. ಅವ್ರು ಗ್ರೆನೇಡು, ಬುಲೆಟ್ಸ್, ಏಕೆ 47 ಅದೆಲ್ಲಾ ಊಟ ತಿಂಡಿ ಮದ್ಯೆ ಇಟ್ಟಿರ್ತಾರೆ.. ಅವ್ರ ಸಹವಾಸನೇ ಬೇಡ.. ಜೊತೆಗೆ ಅವ್ರು ರೊಟ್ಟಿ, ಬಿಸ್ಕೆಟ್ಟು, ಹಾಲು ಅದೆಲ್ಲಾ 5 ವರ್ಷ ಇರೋ ಹಾಗೆ ಮಾಡ್ತಾರೆ.. ನಮಗೆ ಸ್ಟೋರ್ ಮಾಡಕ್ಕೆ ಆಗಲ್ಲ..'

'ಜೊತೆಗೆ ನಾವು ಮೂವಿಂಗ್ ಜವಾನ್ಸ್ ತರಾ ಎತ್ಕೊಂಡು ಹೋಗಕ್ಕೆ ಆಗಲ್ಲ. ನಮ್ ಮಕ್ಳಿಗೂ ಬ್ಯಾಕ ಪ್ಯಾಕ್ ಅದೆಲ್ಲಾ ಬೇಡ..'

'ಮನುಷ್ಯರ ಮಕ್ಳು ಟ್ಯೂಷನ್ ಹೋಗೋ ಹುಡುಗ್ರ ಹಾಗೆ ಕಾಣಿಸ್ತಾರೆ ಇವಾಗ್ಲೇ.. ಬೇಡ ನಿಮ್ ದಮ್ಮಯ್ಯ..'

'ಸರಿ'.

'ನಿನ್ನೆ ನೀನು ಹೊಸ ಜಾಗಕ್ಕೆ ಹೋಗಿದ್ಯಲ್ಲ.. ಏನಾಯ್ತು'?

'ಅದು ಮೈಸೂರು ಆಕಾಶವಾಣಿ. ನನ್ನ ನೋಡ್ಬಿಟ್ಟು ಒಬ್ಬ –ಅನೌಂಸರ್ ಇರ್ಬೇಕು ಕಿಟಾರಂತ ಕೂಗ್ಬಿಟ್ಟು ನ್ಯೂಸ್ ರೂಮ್ಗೆ ಓಡಿ ಬಾಗಿಲು ಹಾಕೊಂಬಿಟ್ಟ. ನನಗೆ ದಿಗಿಲಾಯಿತು. ಅವನು ಮೈಸೂರ್ನವರ್ನೆಲ್ಲಾ ಕರೆದು ಅಲರ್ಟ ಮಾಡ್ತಾನೇ.. ಎಲ್ಲಿ ನೀವಿರೋ ಕಡೆ ಫಾರೆಸ್ಟ ಡಿಪಾರ್ಟ್ಮೆಂಟು ನವರು ಬಂದು ಹಿಡೀತಾರೋಂತ.. ಹಾಗಾಗಲಿಲ್ಲ ಸದ್ಯ! ನಾನು ಬೆಳಿಗ್ಗೆ ಅವನನ್ನೇ ನೋಡ್ತ ಅವನ ಎದುರಿಗೆ ಬಾಯಿ ಚಪ್ಪರಿಸಿಕೊಂಡೆ! ಅದನ್ನು ಅವನು ಮರ್ತಿರಲ್ಲ. ಕನ್ಸಲ್ಲೂ ಬರ್ತಿರತ್ತೆ ಅವನಿಗೆ. ಅವನು ಆಫೀಸಿನಿಂದ ಹೋಗುವಾಗ ನಾನು ಎಲ್ಲಿ ಅವನ್ನ ತಿಂದು ಬಿಡ್ತಿನೋ ಅನ್ನೊ ಹದರ್ಕೆ ಇರುತ್ತೆ. ಯಾರ ಹತ್ರನೂ ಆಸಾಮಿ ಬಾಯಿ ಬಿಟ್ಟಿಲ್ಲ.'

'ಇವುಗಳಿಗೆ ಬೇಗ ಊಟಕ್ಕೆ ವ್ಯವಸ್ಥೆ ಮಾಡ್ಬೇಕು....ಇಲ್ಲಿ ಲಲಿತ ಮಹಲ್ ಹೊಟೆಲ್ ಇದೆಯಲ್ಲಾ ಅಲ್ಲಿ ಏನೂ ಸಿಗಲ್ವಾ? 5 ತಾರಾ ಹೊಟೆಲ್ ಅಂತ ಜಂಭ ಕೊಚ್ಕೊಂಡ್ತಾರಲ್ಲಾ.. ನಾಳೆ ಹೋಗ್ಬರೋಣ್ವಾ?'

'ಅಲ್ಲಿ ಮ್ಯಾನೇಜ್ಮೆಂಟು ಗವರ್ನಮೆಂಟನ್ದು ಈಗ ಪ್ರೈವೆಟ್ ಕೊಟ್ಟಿದಾರಂತೆ.. ಏನಿದ್ರೂ ಬೆಲೆ ಬಹಳ ದುಬಾರಿ'.

'ನಾವು ಏನು ದುಡ್ಡು ಕೊಡ್ತಿದೀವಾ ಏನು? ಒಂದಿಬ್ರನ್ನ ಕಚ್ಕೊಂಡು ಬರ್ಬೇಕು ಅಷ್ಟೆ'.

'ಅಲ್ಲಿ ಹೋಗೋವ್ರೇ ಕಡಿಮೆ.. ನಾವು ಅಲ್ಲಿ ಹೋದ್ರೆ ಸೆಚ್ಯೂರಿಟಿ ರಿಸ್ಕು.. ನನಗೆ ಒಂದು ಐಡಿಯ ಬಂತು..'

'ನಾನು ಸಿಂಹ ಸೋದರ ಮಾವ, ಹುಲಿ ದೊಡ್ಡಪ್ಪ ಮಾತು ಕೇಳಿ ಒದ್ದಾಡ್ತಾ ಇದೀನಿ.. ಅವರ ಐಡಿಯಾನ ನಮ್ಮಪ್ಪ ಕಿವಿ ಮೇಲೆ ಹಾಕೊಳ್ದೆ ಇದ್ದಿದ್ರೆ ಚೆನ್ನಾಗಿರ್ತಿತ್ತು.. ಅದ್ರಿಂದಾನೇ ನಾನು ನಿನ್ನ ಕಟ್ಕೊಂಡು ಮರಿಗಳ್ ಜೊತೆ ಸಾಯ್ತಿದೀನಿ'.

'ನೀನು ಹಳೆ ಕಥೆ ಪುರಾಣ ತೆಗೀಬೇಡ ಸದ್ಯ. ಮುಂದಿನ ವಾರ ಇಲ್ಲಿ 50 ಸಾವಿರ ಜನರನ್ನ ಕರೆಸಿ ರೇಸ್ ಗ್ರೌಂಡ್ಸ್ನಲ್ಲಿ ಯೋಗ ಮಾಡ್ತಾರೆ..ಅದನ್ನು ಅನೌನ್ಸ್ ಮಾಡಿದಾರೆ. ಅಲ್ಲಿ ಫಾರಿನರ್ಸ್ ಮತ್ತು ಲೋಕಲ್ ಬಹಳ ಜನ ಬರ್ತಾರೆ. ನಮಗೆ ಊಟ ಸಿಕ್ಕೇ ಸಿಗುತ್ತೆ.'

'ನನಗೆ ಒಣಗಿದ ಹುಲ್ಲಿಂದ ಯೊಗ ಮ್ಯಾಟ್ ಮಾಡೋದು ಬರುತ್ತೆ. ನಾನು ಮರ ಹತ್ತಿ ಹೊತ್ತು ಕಳಿಯಕ್ಕೆ ಎಲೆ ಮತ್ತು ನಾರಿಂದ ದೊಡ್ಡ ಎಲೆ ಹೊಸೀ ತಾ ಇದೆ. ನಾನು 4 ಕಾಮೋಫ್ಲೇಜ್ ಹೊಲೀತೀನಿ. ಅದನ್ನು ಹಾಕಿಕೊಂಡು ಅಲ್ಲಿ ವೈಟ್ ಮಾಡೋಣ.'

'ಸರಿ. ಮಕ್ಳಿಗೂ ಕಲಿಸು. ಹಲ್ಲುಗಳನ್ನು ಒಳಗಡೆ ಏಳ್ಕೋ ಬೇಕು. ನಮ್ಮ ಹೆಜ್ಜೆ ನೋಡಿ ನಾವು ಯಾರೂಂತ ಬೇಗ ಕಂಡು ಹಿಡೀತಾರೆ.. ಹಾಗೆ 4 ಜೊತೆ ಎಲೇಲಿ ಸ್ಲಿಪ್ಪರ್ಸ್ ಹೊಲಿ.. ಮೂಗಿನಿಂದ ಉಸಿರಾಡೋದು ಪ್ರಾಕ್ಟಿಸ್ ಮಾಡಿಸೋಣ ಅವಕ್ಕೆ'.

'ನೀನೇ ಯೋಗ ಟೀಚರ್ ತರ ಆಡ್ತಿದೀಯ! ಇದೆಲ್ಲಾ ಮಾಡ್ತೀನಿ. ನೀನು ಆವತ್ತು ಒಬ್ಬನೇ ಹೋಗಿ ಜನವರಿ 1 ಬೆಳಿಗ್ಗೆ ಯೋಗ ನರಸಿಂಹ ಟೆಂಪಲ್ಗೆ ಹೋಗಿ

4 ಲಾಡು ತಿಂದು ಬಂದು ಮೈಲಿ ಸರಿಯಾಗಿಲ್ಲಾಂತ ಮಲಗಿದ್ಯೆಲ್ಲಾ... ಆಗ ನಾನು ಅಲ್ಲೇ 4 ಗೊನೆ ಬಾಳೆಹಣ್ಣು ಹೊಡಕೊಂಡು ಬಂದೆ. ಮಕ್ಕಳಿಗೆ ಅದನ್ನೇ ಕೊಡ್ತೀನಿ. ಬಾಳೆಹಣ್ಣು, ತೆಂಗಿನಕಾಯಿ ತಿಂದು ಅವುಗಳ ಹಲ್ಲು ಸಾಫ್ಟ್ ಆಗಿ ಎಲ್ಲಿ ಬಿದ್ದು ಹೋಗುತ್ತೊ ಅಂತ ನನ್ಗೆ ಹೆದರ್ಕೆ. ಇಲ್ಲಿಂದ ಹೋದ ಮೇಲೆ ಮಕ್ಕಳ ಹಲ್ಲು ಡೆನ್ಟಿಸ್ಟ್ ನರಿಯಣ್ಣನಿಗೆ ತೋರಿಸಬೇಕು.....ನಮ್ಮ ಯೋಗ ಪ್ಲಾನ್ ಫೈಲ್ ಆದ್ರೆ ಏನ್ ಮಾಡೋಣ?'

'ಇಲ್ಲಿ ಕುಕ್ಕನಹಳ್ಳಿದು ಒಂದು ಕೆರೆ ಇದೆ. ಅಲ್ಲಿ ಸೀನಿಯರ್ ಚಿಟಿಝುನ್ಸ್ ವಾಕಿಂಗ್ ಗೆ ಬೆಳಿಗ್ಗೆ ಸಂಜೆ ಬರ್ತಾರೆ. ಒಬ್ಬೊಬ್ರೇ, ಇಬ್ಬಿಬ್ರು ಸಿಕ್ತಾರೆ. ಬಹಳ ರಷ್ ಇರಲ್ಲ.'

'ನಮ್ಮ ಮಕ್ಳಿಗೆ ಒಳ್ಳೆ ಪೌಷ್ಟಿಕ ಆಹಾರ ಬೇಕು.. ಬರೀ ಬೋನ್ಸ್ ಅಲ್ಲಿ ಏನು ಸಿಗುತ್ತೆ? ಅವ್ರಿಗೆ ಒಳ್ಳೇ ಮಾಂಸ, ಟಿಶ್ಯೂಸ್ ಮಸಲ್ಸ್ ಬೇಕು. ಇಲ್ಲದಿದ್ದರೆ ಅವುಗಳು ಚಿರತೆ ಹೊದ್ದಿಕೆ ಹಾಕಿದ ಮೇಕೆ ಆಗ್ತಾರೆ. ಫರ್ಜಿಸಿದ್ರೆ ಮೇಕೆ ಕೂಗಿದಹಾಗೆ 'ಮೆ ಮೆ ಮೆ' ಅಂತ ಕೇಳಸುತ್ತೆ. ನಾನು ಹೇಳೋದು ನಿನಗೆ ಅರ್ಥ ಆಗ್ತಾ ಇದೆಯಾ?'

'ಅರ್ಥ ಆಯತು ಮಹರಾಯಿತಿ! ಇಲ್ಲಿ ಚಾಮುಂಡಿ ಬೆಟ್ಟದ್ಲಿ ಏನಾದ್ರೂ ಕನ್ಸ್ಟ್ರಕ್ಷನ್ ನಡೀತಾನೇ ಇರುತ್ತೆ. ದುಡ್ಡಿನ ಸ್ಕೀಮು ಅಂತ ಜನ ಕರಿತಾರೆ. ಇಲ್ಲಿ ಭಕ್ತಾದಿಗಳು ಬರ್ತಾನೇ ಇರ್ತಾರೆ. ದಿನಾ ಫ್ರೀ ಊಟ ಸಿಗುತ್ತೆ. ನಾವೂ ಆ ಊಟ ಹೊಡೀಬಹುದು. ಜೊತೆಗೆ ಟೂರಿಸ್ಟ್ಗಳು/ಗವರ್ನಮೆಂಟು ಸ್ಟಾಫ್ ಇಡೀ ವರ್ಷ ಕಲೆಕ್ಷನ್ಗೆ ಬಂದೇ ಬರ್ತಾರೆ ಲಾಡ್ಜಲ್ಲಿ ನೈಟ್ ಸ್ಟೇ ಇರುತ್ತೆ. ನಾವು ಸರಿಯಾಗಿ ಪ್ಲಾನ್ ಮಾಡಿದ್ರೆ ವೆಜ್–ನಾನ್ವೆಜ್ ಕಾಂಬಿನೇಷನ್ ಊಟ ಸಿಗೋ ಹಾಗೆ ಮಾಡ್ಕೋಬೋದು.'

'ಆಗ್಍ಲಿ. ಅಲ್ಲಿಗೇ ಹೋಗೋಣ. ಚಾಮುಂಡಿ ಬೆಟ್ಟ ಅಂದ್ರೆ ನಿನ್ನ ತಮ್ಮನ್ನ ಜ್ಞಾಪಕ ಬರುತ್ತೆ. ಅಲ್ಲೆ ಅಲ್ವೆ ಒಂದು ಸರ್ತಿ ಸಿಕ್ಹಾಕಿಕೊಂಡು ಅಲ್ಲಿ ಗೇಟಿನ ಸಲಾಕೆ ತಿವಿದು ಮೈ ಕೈ ಎಲ್ಲಾ ಹರ್ಕ್ಕೊಂಡು ಬಂದು ಮನೆ ಸೇರಿದ್ದು? ನಾನೇ 3 ತಿಂಗಳು ಸೊಪ್ಪು ತಿಕ್ಕಿ ಆರೈಕೆ ಮಾಡಿದ್ದು...

'ಅದನ್ನ ಜ್ಞಾಪಿಸಬೇಡ..ಅವ್ನು ಬದುಕಿದ್ದೆ ಹೆಚ್ಚು'.

'ನಿನ್ನ ಈ ಪ್ಲಾನ್ ಫೈಲ್ ಆದ್ರೆ ನಾನು ಮಕ್ಕಳನ್ನ ಕರ್ಕೊಂಡು ಮನೆಗೆ ಹೋಗ್ತಿನಿ. ನೀನು ನಿನ್ನ ಸೋದರ ಮಾವ ಸಿಂಹ, ದೊಡ್ಡಪ್ಪ ಹುಲಿ ಹತ್ರ ಹೋಗಿ ಗೋಳು ಹೇಳ್ಕೊ. ಬೇರೆ ಹುಡುಗೀನ ಅವ್ರು ಕೊಡುಸ್ತಾರೆ,'

'ಹಾಗೆ ಏನು ಆಗಲ್ಲ. ಚಾಮುಂಡಿ ಮೇಲೆ ಒಂದು ಪ್ಯಾಲೆಸ್ ಕಟ್ಟಿ ಅದನ್ನ ಹಾಗೇ ಇಟ್ಟಿದ್ರು. ರಾಜೇಂದ್ರ ವಿಲಾಸ್ ಪ್ಯಾಲೆಸ್ ಅಂತ. ಅದನ್ನ ರೆನೊವೇಟ್ ಮಾಡಿ ಹೋಟೆಲ್ ಮಾಡ್ತಿದಾರೆ. ನನ್ಗೆ ನಾವು ಅದರಲ್ಲಿ ಇರ್ಬೇಕೂಂತ ಆಸೆ. ಫಸ್ಟ್ ಊಟ ರೆಗ್ಯುಲರ್ ಆಗಿ ವ್ಯವಸ್ಥೆ ಮಾಡ್ಕೋಬೇಕು. ಅದನ್ನ ಮೊದಲು ನೋಡ್ತೀನಿ.'

'ಬರೀ ಕನಸ್ ಕಾಣ್ಬೇಡ. ಅದು ನಡಿಯೋ ಹಾಗೆ ಮಾಡು. ಮಾಡೋಣ.'

■

# ಸೋಮು ಅತ್ತೆಯ ಓಲಾಡಮ್ಮಾ ಓಲಾಡು

**ಬೇಲೂರು ರಾಮಮೂರ್ತಿ**

ಇವತ್ತು ಆಫೀಸಿನಲ್ಲಿ ಆಡಿಟ್ ನಡೀತಾ ಇದೆ. ಸುಮ್ಮಸುಮ್ಮನೆ ನನಗೆ ಫೋನ್ ಮಾಡಬೇಡ ಅಂತ ಸೋಮು ಸೋಮಿಗೆ ಎಚ್ಚರಿಸಿ ಹೋಗಿದ್ದ. ಆದರೂ ಹನ್ನೊಂದು ಗಂಟೆಗೆ ಸೋಮಿ ಅಳುತ್ತಾ ಫೋನ್ ಮಾಡಿ ರೀ ನಮ್ಮಮ್ಮ ಹೇಗೆ ಹೇಗೋ ಆಡ್ತಿದಾಳೆ ಬೇಗ ಬನ್ರೀ ಅಂದಳು. ಲೇ ಹೇಗೆ ಹೇಗೋ ಆಡೋದು ನಿಮ್ಮ ವಂಶಕ್ಕೆ ಅಂಟಿದ್ದು ಅದರಲ್ಲೇನೇ ವಿಶೇಷ ಸುಮ್ನೆ ಫೋನ್ ಇಡು ಅಂದ. ಸೋಮಿ ಅಳುತ್ತಾ ಇಲ್ಲಾರೀ ಅಮ್ಮಾ ಅವಳ ಲೈಫಲ್ಲಿ ಯಾವತ್ತೂ ಹೀಗೆ ಆಡಿದೋಳಲ್ಲ. ನನಗ್ಯಾಕೋ ಭಯ ಆಗ್ತಿದೆ ಅಂದಳು. ಲೇ ನಿನಗೆ ಅರ್ಥ ಆಗಲ್ವೇನೇ ಇಲ್ಲಿ ಆಡಿಟ್ ನಡೀತಾ ಇದೆ. ನಾನು ಆಫೀಸ್ ಬಿಟ್ಟು ಕದಲೋ ಹಾಗೇ ಇಲ್ಲ ಸುಮ್ನೆ ಫೋನ್ ಇಡು. ತೀರಾ ಸಮಸ್ಯೆ ಆದರೆ ಅಲ್ಲೇ ಯಾರಾದರೂ ಡಾಕ್ಟರ ಹತ್ರ ಕರ್‍ಕೊಂಡು ಹೋಗು ಅಂದು ಸೋಮು ಫೋನ್ ಕುಕ್ಕಿದ. ಸ್ವಲ್ಪ ಹೊತ್ತಾದ ಮೇಲೆ ಸೋಮುಗೆ ಅತ್ತೆ ನೆನಸಿಕೊಂಡು ಅಯ್ಯೋ ಅನಿಸಿತು. ಪಾಪ ಅತ್ತೆ ಒಳ್ಳೆಯವರು ಚಿನ್ನದಂಥಾ ಸೋಮಿನ ಹೆತ್ತು ಬೆಳಸಿ ನನಗೆ ಕೊಟ್ಟಿದ್ದಾರೆ. ಅವರಿಗೆ ನಾನು ಮಗನ ಸಮಾನ. ಹೋಗಿ ನೋಡೋದು ವಾಸಿ ಅನಿಸಿ ಬಾಸ್ ಛೇಂಬರಿಗೆ ನುಗ್ಗಿದ. ಸೋಮು ಮಾತಾಡೋ ಮೊದಲೇ ಬಾಸ್ ನಿಮ್ಮ ಅತ್ತೆ ಹೇಗೆ ಹೇಗೋ ಆಡ್ತಿದಾರೆ ಅದಕ್ಕೆ ಅವರನ್ನು ನೋಡೋಕೆ ನೀವು ಮನೆಗೆ ಹೋಗಬೇಕು ಅಲ್ವಾ ಅಂತ ಕೇಳಿದರು. ಸೋಮು ಅಚ್ಚರಿ ಹೊಂದಿದ. ಬಾಸ್ ಮತ್ತೆ ನಿಮ್ಮ ಕೆಲಸದ ಮೇಲಿನ ಬದ್ಧತೆ ನನಗೆ ಇಷ್ಟ ಆಗಿದೆ. ಬೆಳಗ್ಗೆ ನಿಮ್ಮ ಹೆಂಡತಿ ಫೋನ್ ಮಾಡಿದಾಗಲೇ ನೀವು ಅವರಿಗೆ ಕೂಗಾಡ್ತಾ ಇದ್ದದ್ದನ್ನು ನಾನು ಗಮನಿಸಿದೆ. ಆದರೂ ನೀಮ್ಮ ಕೆಲಸ ಮುಂದುವರಿಸಿದಿರಿ. ಈಗ ಮನೆಗೆ ಹೋಗಿ, ಪರವಾಗಿಲ್ಲ ಅನಿಸಿದರೆ ಬನ್ನಿ ಇಲ್ಲದಿದ್ದರೆ ನಾಳೆ ಬನ್ನಿ ಪರವಾಗಿಲ್ಲ ಅಂದು ಮನೆಗೆ ಕಳಿಸಿದರು. ಸೋಮು ಸ್ಕೂಟರ್ ಸ್ಟಾರ್ಟ್ ಮಾಡಿ ಮನೆಗೆ ಬಂದ. ಬಾಗಿಲು ಹಾಕಿತ್ತು. ಕಾಲಿಂಗ್ ಬೆಲ್ ಮಾಡಿದೊಡನೆ ಸೋಮಿ ಬಂದು ಬಾಗಿಲು ತೆಗೆದು ಗಂಡನನ್ನು ಕಂಡು ಸಂತೋಷಪಟ್ಟು ರೀ ಬನ್ನಿ ಅಮ್ಮ ನೋಡಿ ಹೇಗಾಡ್ತಿದಾಳೆ ಅಂದು ಕೋಣೆಗೆ ಕರೆದುಕೊಂಡು ಹೋದಳು. ಅಲ್ಲಿ ಅತ್ತೆ ಮಲಗಿದ್ದರು. ಸೋಮುನ ನೋಡಿ ಬಾರೋ ಬಾರೋ ಸುಕುಮಾರ ಬಾರೋ ನನ್ನ ಬಂಗಾರ ಅಂದು ಎದ್ದು ಸೋಮು ಭುಜ ಹಿಡಿದು ಕುಣಿಸಿದರು. ಏನಪ್ಪಾ ಎಲ್ಲಿ ಹೋಗಿದ್ದೆ. ಸ್ಕೂಲಿಗಾ, ಈಗ ಸ್ಕೂಲು ಬಿಡ್ತಾ ಈಗ ಊಟ ಮಾಡಿ ಮಲ್ಕೋ ಎದ್ದ ಮೇಲೆ ನಾನೇ ಹೋಂ ವರ್ಕು ಹೇಳಿಕೊಡ್ತೀನಿ ಅಂದರು. ಅವರ ಮಾತು ಸ್ವಷ್ಟವಾಗಿರಲಿಲ್ಲ. ಬಹಳ ತೊದಲುತ್ತಿತ್ತು. ಜೊತೆಗೆ ಶರೀರವೂ ಜೋಲಾಡುತ್ತಿತ್ತು. ಸೋಮಿ ಬೆಳಗಿಂದ ಏನಾಯ್ತೇ ಅಂತ ಕೇಳಿದ. ಸೋಮಿ ಅಳುತ್ತಲೇ ಏನೂ ಇಲ್ಲಾರೀ ಎಲ್ಲಾ ಮಾಮೂಲಿ. ಸ್ನಾನ ಮಾಡಿದರು, ದೇವರ ಪೂಜೆ ಮಾಡಿದರು, ತಿಂಡಿ ತಿಂದರು, ಪೇಪರ್ ಓದಿದರು. ನಾನು ಪಕ್ಕದ ರೋಡಿನಲ್ಲಿರೊ ಟೈಲರಿಂಗ್ ಅಂಗಡಿಗೆ ಹೋಗಿ ಬರ್ತೀನಿ ಅಂತ ಅರ್ಧ ಗಂಟೆ ಹೋಗಿ ಬಂದೆ ರೀ. ನಾನು ವಾಪಸ್ ಬಂದಾಗಲೇ ಅವರು ಹೀಗಾಡೋಕೆ ಷುರು ಮಾಡಿದರು. ಏನೇನೋ ಮಾತಾಡ್ತಾರೆ ಎಲ್ಲಾ ತೊದಲು ತೊದಲು ರೀ ಬೇಗ ಡಾಕ್ಟರಿಗೆ ಫೋನ್ ಮಾಡ್ರೀ. ನಾನು ಶ್ರೀಧರ್ ಡಾಕ್ಟರಿಗೆ ಫೋನ್ ಮಾಡಿದರೆ ಅವರು ಊರಲ್ಲಿಲ್ಲವಂತೆ. ನಿಮ್ಮ ಫ್ರೆಂಡು ಇದಾರಲ್ಲ ಪ್ರಸಾದು ಡಾಕ್ಟರು ಅವರಿಗೆ ಫೋನ್ ಮಾಡ್ರೀ ಅಂದಳು. ಸೋಮು ಮೊಬೈಲ್ ತೆಗೆದಾಗ ಅತ್ತೆ ಅಡ್ಡ ಬಂದು ಏನಪ್ಪಾ ಫೋನ್ ಮಾಡ್ತಿದೀಯ. ಯಾರಿಗೆ ನಿನ್ನ ಗರ್ಲ್ ಫ್ರೆಂಡಿಗಾ, ಅವಳು ಈ

ಊರಲ್ಲೇ ಇದಾಳೋ ಇಲ್ಲಾ ಬೇರೆ ಊರಲ್ಲಿ ಇದಾಳೋ ಅಂದು ಮಗಳ ಕಡೆ ತಿರುಗಿ ಸೋಮಿ ಯಾಕೋ ಬಾಯಿ ಒಗಚು ಒಗಚಾಗಿದೆ ಒಂದಿಷ್ಟು ಖಾರ ಖಾರವಾಗಿ ಏನಾದರೂ ಕೊಡೆ ಅಂದರು. ಈ ಅತ್ತೆಗೆ ಇದ್ಯಾವ ಸೀಮೆ ದೆವ್ವ ಬಂದು ಬಡ್ಕೊಂಡ್ತಲ್ಲ ಅಂತ ಸೋಮು ಸುಸ್ತಾಗಿ ಸೋಫಾದಲ್ಲಿ ಕುಕ್ಕರಿಸಿದ. ಅತ್ತೆ ಪುಟ್ಟ ಹುಡುಗಿಯಾಗಿ ಮನೆಯೆಲ್ಲಾ ಕುಣಿಯುತ್ತಾ ನೆಗೆಯುತ್ತಾ ಓಡಾಡುವಾಗ ಸೋಮಿ ಜೋರಾಗಿ ಅತ್ತಳು. ನಮ್ಮಮ್ಮನಿಗೆ ಏನಾಗಿದೆ ಯಾವ ದೆವ್ವ ಮೆಟ್ಕೊಂಡಿದೆ ಅಯ್ಯೋ ದೇವರೇ ಅಂತ ಹೋಗಿ ಅಮ್ಮನನ್ನು ಹಿಡಿದು ಅಮ್ಮ ನಿನಗೇನಾಗಿದೆ ಯಾಕಮ್ಮಾ ಹೀಗೆಲ್ಲಾ ಆಡಿ ನನ್ನ ಹೊಟ್ಟೆ ಉರಿಸ್ತಾ ಇದೀಯ ಅಂದಳು. ಅತ್ತೆ ಎದ್ದು ಓಡಿ ಬಂದು ಸೋಮು ಹತ್ತಿರ ನಿಂತು ಅವನ ಷರಟು ಹಿಡಿದು ಇದನ್ನು ನೀನು ಒಪ್ತೀಯೇನಪ್ಪಾ ನಾನು ನಿನ್ನ ಹೆಂಡ್ತಿ ಹೊಟ್ಟೆ ಉರಿಸ್ತಾ ಇದೀನಾ ಅಂತ ಜೋರಾಗಿ ನಕ್ಕರು. ಇರಬೇಕು ಇರಬೇಕು ಎಳೆಯಾ ಮಗುವಿನ ತರಹ, ಬೆಳಿಬೇಕು ಬೆಳಿಬೇಕು ತೆಂಗಿನ ಮರದಾ ತರಹ ಅಂತ ಬಾಯಿಗೆ ಬಂದ ಹಾಗೆ ಹಾಡು ಗುನುಗಿದರು. ಸೋಮು ಹತ್ತಿರ ಬಂದು ಮುಖಕ್ಕೆ ಮುಖ ಕೊಟ್ಟು ನನ್ನ ಪ್ರಶ್ನೆಗೆ ಉತ್ತರ ಕೊಡು ಅಂದರು. ಸೋಮು ದೂರ ಸರಿದ. ಸೋಮಿ ಹತ್ತಿರ ಹೋಗಿ ಲೇ ಸೋಮಿ ಇದೇನೇ ನಿಮ್ಮಮ್ಮನ ಬಾಯಿಂದ ಚರಂಡಿ ವಾಸನೆ ಬರ್‍ತಿದೆ. ಕುಡಿದೋರು ಮಾತಾಡೋ ಹಾಗೆ ಆಡ್ತಿದಾರಲ್ಲೇ ಎಲ್ಲಾದ್ರೂ ಹೋಗಿ ಒಂದಿಷ್ಟು ಹಾಕ್ಕೊಂಡು ಬಂದಿದಾರಾ ಅಂತ ಕೇಳಿದ. ನೀವು ಹಾಗೆಲ್ಲಾ ಮಾತಾಡಿದರೆ ನಾನು ನಿಮಗೊಂದೆರಡು ಹಾಕ್ತೀನಿ ನೋಡಿ ಅವರು ಬೆಳಗ್ಗೆಯಿಂದ ಮನೆ ಬಿಟ್ಟೇ ಎಲ್ಲೂ ಹೋಗಿಲ್ಲ. ಇನ್ನು ಹಾಕ್ಕೊಂಡು ಹರೋದು ಏನ್ರೀ. ಹಾಗೆಲ್ಲಾ ಹಾಕ್ಕೊಂಡು ಬರೋದು ನಿಮ್ಮ ವಂಶದಲ್ಲೂ ಇಲ್ಲ ನಮ್ಮ ವಂಶದಲ್ಲೂ ಇಲ್ಲ ಅನ್ನೋದು ನಿಮಗೂ ಗೊತ್ತು ಅಂದು ಅಮ್ಮನ ಹತ್ತಿರ ಹೋಗಿ ಅವರ ಬಾಯಿ ವಾಸನೆ ನೋಡಿ ನಂತರ ಸೋಮು ಹತ್ತಿರ ಬಂದು ರೀ ನೀವು ಹೇಳ್ತಿರೋದು ನಿಜಾರೀ, ಅಮ್ಮನ ಬಾಯಿಂದ ಏನೋ ಕೆಟ್ಟ ವಾಸನೆ ಬರ್‍ತಿದೆ. ಅಲ್ಲಾ ಯಾವತ್ತೂ ಹೀಗಾಗಿಲ್ಲ. ನಾನು ಇವತ್ತು ದೋಸೆ ಮಾಡಿದ್ದೆ ಅಮ್ಮ ಚಟ್ನಿ ಹಾಕ್ಕೊಂಡು ಮೂರು ದೋಸೆ ತಿಂದಳು ಅಷ್ಟೆ. ಇನ್ನೇನೂ ತಿಂದಿಲ್ಲ. ನಾನೂ ಅದೇ ದೋಸೆನೇ ತಿಂದಿದೀನಿ. ಆದರೆ ನಾನು ಸರಿಯಾಗಿದೀನಲ್ಲ ಅಂದಳು. ಇವರಿಬ್ಬರೂ ನನ್ನ ಬಗ್ಗೆ ಮಾತಾಡ್ತಿದಾರೆ ಅಂತಾನೇ ತಿಳಿದಯವಳಂತೆ ಸೋಮಿ ಅತ್ತೆ ತನ್ನ ಪಾಡಿಗೆ ತಾನು ಏನೋ ಮಾತಾಡ್ಕೊತಾ ಇದ್ದರು. ಬಾಗಿಲು ತೆಗೆದುಕೊಂಡು ಯಾರೋ ಬಂದ ಹಾಗಾಯ್ತು, ಡಾಕ್ಟರು ಬಂದಿರಬಹುದು ಅಂತ ಸೋಮಿ ನೋಡಿದರೆ ಬಂದಿದ್ದು ಪಕ್ಕದ ಮನೆ ಪಂಕಜಮ್ಮ. ಏನು ಅಂತ ಸೋಮಿ ವಿಚಾರಿಸೋ ಮುಂಚೆಯೇ ಸೋಮಿ ಅಮ್ಮ ಅವರ ಬಳಿ ಹೋಗಿ ಬನ್ನಿ ಬನ್ನಿ ಪಂಕಜಮ್ಮಾ ಏನು ಸಮಾಚಾರ. ಯಾರ ಮನೆ ಉದ್ಧಾರ ಮಾಡೋಕೆ ಬಂದಿದೀರ ಇಲ್ಲ ಯಾರ ಮನೆ ಹಾಳು ಮಾಡೋಕೆ ಬಂದಿದೀರ. ನಿಮ್ಮ ಯಜಮಾನರು ಅದ್ಯಾರೋ ಹೆಂಗಸಿನ ಹಿಂದೆ ಹೋಗೋದು ಬಿಟ್ರಾ ಇನ್ನೂ ಇಲ್ವಾ ಅಂತ ಮಾತಾಡೋಕೆ ಷುರು ಮಾಡಿದಾಗ ಪಂಕಜಮ್ಮ ಮುಖ ಸಿಂಡರಿಸಿ ಇದೇನ್ರೀ ಸೋಮಿ ನಿಮ್ಮಮ್ಮ ಹೀಗೆ ಮಾತಾಡ್ತಾ ಇದಾರೆ. ಏನಾದರೂ ಬೆಳಗ್ಗೆ ಬೆಳಗ್ಗೆನೇ ಹೆಂಡ ಕುಡಿದಿದಾರಾ ಅಂತ ಸಿಟ್ಟಿನಿಂದ ಕೇಳಿದರು. ಯಾರೇ ಹೆಂಡ ಕುಡ್ತಿರೋದು ನೀನು ತಂದ್ಕೊಟ್ಯೋ ಇಲ್ಲಾ ನಿನ್ನ ಗಂಡ ತಂದ್ಕೊಟ್ನೋ ಅಂತ ಪಂಕಜಮ್ಮನ ಹೆದರಿಸೋಕೆ ನೋಡಿದಾಗ ಪಂಕಜಮ್ಮ ಓಡಿ ಹೋದರು. ಸೋಮಿ ತಲೆ ತಲೆ ಚಚ್ಚಿಕೊಂಡು ಮೂಲೆ ಸೇರಿದಳು. ಸೋಮುಗೆ ಸಾಕಾಗಿ ಹೋಯ್ತು. ಈ ನಡುವೆ ಆಫೀಸಿಂದ ಫೋನ್ ಬರ್‍ತಾ ಆ ಫೈಲು ಎಲ್ಲಿದೆ, ಆ ಅಕೌಂಟ್ ಡೀಟೈಲ್ಸ್ ಏನು ಅಂತೆಲ್ಲ ಕೇಳೋಕೆ ಷುರು ಮಾಡಿದಾಗ ಅವನೂ

ತಲೆ ತಲೆ ಚಚ್ಚಿಕೊಂಡು ಬಾಯಿಗೆ ಒಂದಿಷ್ಟು ತಣ್ಣಗೆ ನೀರು ಸುರ್ಕೊಳ್ಳೋಣ ಅಂತ ಫ್ರಿಜ್ ಬಾಗಿಲು ತೆಗೆದ. ನೀರಿನ ಬಾಟಲು ಕೈಗೆ ತಗೊಳುವಾಗ ಅವನ ದೃಷ್ಟಿ ಇನ್ನೊಂದು ಕಡೆ ಹೋಯಿತು. ಒಡನೆಯೇ ಸೋಮಿಯನ್ನು ಕೂಗಿದ. ಅವಳು ಗಾಬರಿಯಿಂದ ಬಂದಳು. ಲೇ ಸೋಮಿ ಈ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿ ಹನ್ನೆರಡು ಚಾಕೋಲೇಟ್ ಇತ್ತಲ್ಲ ಈಗ ಬರೀ ಎರಡು ಇದೆ. ಯಾರೇ ತಿಂದ್ರು ಅಂತ ಕೇಳಿದ. ಅಯ್ಯೋ ನನಗೇನ್ರೀ ಗೊತ್ತು. ನೆನ್ನೆ ಫಾರಿನ್ನಿಂದ ನಿಮ್ಮ ಫ್ರೆಂಡು ಕೊಟ್ಟಿದ್ದು ಅಂತ ನೀವೇ ಚಾಕೋಲೇಟ್ ಒಳಗೆ ಇಟ್ರಿ. ನಾನು ಆಮೇಲೆ ಆ ಕಡೆ ನೋಡೇ ಇಲ್ಲ ಅಂದಳು. ನಿಮ್ಮಮ್ಮನ ಓಲಾಡಮ್ಮನ ಆಟಕ್ಕೆ ಕಾರಣ ಈಗ ನನಗೆ ಗೊತ್ತಾಯ್ತು ಅಂದ. ಅದೇನ್ರೀ ಅಂತ ಕೇಳಿದಳು. ಲೇ ಸೋಮಿ ಈ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿದ್ದ ಹನ್ನೆರಡು ಚಾಕೋಲೇಟ್‌ಗಳ ಪೈಕಿ ಹತ್ತು ಚಾಕೋಲೇಟ್‌ಗಳನ್ನು ನಿಮ್ಮಮ್ಮ ತಿಂದಿದಾರೆ ಅದಕ್ಕೇ ಹಾಗಾಡ್ತಾ ಇದಾರೆ ಅಂದ. ಏನು ಮಾತಾಡ್ತಾ ಇದೀರರೀ ನೀವು. ಚಾಕೊಲೇಟ್ ತಿಂದ್ರೆ ಯಾರಾದ್ರೂ ಹೀಗೆ ಆಡ್ತಾರೇನ್ರೀ ಅಂತ ಕೇಳಿದಳು. ಸೋಮು ತಲೆ ಚಚ್ಚಿಕೊಂಡು ಲೇ ಸೋಮಿ ಇದು ಅಂತಿಂಥಾ ಚಾಕೊಲೇಟ್ ಅಲ್ಲಾ ಕಣೇ ಇದರಲ್ಲಿ ಬ್ರಾಂಡಿ ಬೆರೆತಿರುತ್ತೆ ಕಣೆ. ಅದೊಂಥರಾ ಚಾಕೊಲೇಟು. ಅದಕ್ಕೇ ಕೊಡುವಾಗ ನೋಡಿ ನೋಡಿ ಕೊಡ್ತಾರೆ. ರಂಗಣ್ಣ ಫಾರಿನ್ನಿನಿಂದ ಬರುವಾಗ ಈ ಚಾಕೊಲೇಟುಗಳನ್ನು ತಂದಿದ್ದ. ಇದನ್ನು ನನಗೆ ಕೊಡುವಾಗ ಸೋಮು ಹುಷಾರು. ನನಗೆ ಗೊತ್ತು ಇದನ್ನು ನೀವು ತಿನ್ನೋಲ್ಲ ಅಂತ. ನಿಮ್ಮ ಫ್ರೆಂಡ್ಸ್‌ಗೆ ಯಾರಿಗಾದರೂ ಕೊಡಿ ಅಂತ ಕೊಟ್ಟಿದ್ರು. ನಾನು ಅದನ್ನು ರಾಜುಗೆ ಕೊಡೋಣ ಅಂತ ಇಲ್ಲಿಟ್ಟಿದ್ದೆ. ನಿಮ್ಮಮ್ಮ ಬ್ರಾಂಡಿ ಬೆರೆತಿರುವ ಚಾಕೊಲೇಟ್ ತಿಂದು ಹೀಗಾಡ್ತಾ ಇದಾರೆ ಕಣೆ ಅಂದ. ಸೋಮಿ ಅಮ್ಮನ ಹತ್ತಿರ ಹೋಗಿ ಅಮ್ಮಾ ನೀನು ಫ್ರಿಜ್‌ನಲ್ಲಿದ್ದ ಚಾಕೊಲೇಟ್ ತಿಂದ್ಯಾ ಅಂತ ಕೇಳಿದಳು. ಅಮ್ಮ ಕಣ್ಣರಳಿಸಿ ನಿನಗೆ ಹೇಗೆ ಗೊತ್ತಾಯ್ತೇ. ಅದೆಂಥಾ ಚಾಕೊಲೇಟು ಅಂತೀಯ ಅದನ್ನು ನಾನು ಈ ಜನ್ಮದಲ್ಲಿ ತಿಂದಿರಲಿಲ್ಲ. ಅದೆಂಥಾ ರುಚಿ ಅಂತೀಯ. ತಿಂದ ತಕ್ಷಣ ಮೈ ರೋಮಾಂಚನ ಆಯಿತು. ಒಂದು ತಿಂದೆ ಎರಡು ತಿಂದೆ ತಿನ್ತಾನೇ ಇದ್ದೆ. ನಿನ್ನ ಗಂಡನಿಗೆ ಹೇಳಿ ಇನ್ನೊಂದಿಷ್ಟು ಚಾಕೋಲೇಟ್ ತರಿಸಿ ಇಡೆ ಅಂದು ತೊದಲಿ ತೂರಾಡಿ ಕುರ್ಚಿಗೆ ಒರಗಿದರು. ಸೋಮಿ ಮುಂದೇನ್ರೀ ಅಂತ ಸೋಮು ಕಡೆ ನೋಡಿದಳು. ಏನಾದರೂ ಮಾಡಿ ನಿಮ್ಮಮ್ಮನ್ನ ಹಿತ್ತಲಲ್ಲಿರೋ ಬಟ್ಟೆ ಒಗೆಯೋ ಕಲ್ಲಿನ ಹತ್ತಿರ ಕರ್ಕೊಂಡು ಬಾ. ಒಂದು ಐದಾರು ಬಕೀಟು ತಣ್ಣೀರು ರಪರಪ ಅಂತ ತಲೆ ಮೇಲೆ ಸುರಿದರೆ ಎಲ್ಲಾ ಸರಿಹೋಗುತ್ತೆ ಅಂದ. ಅಮ್ಮಾ ಚಾಕೊಲೇಟ್ ಕೊಡ್ತೀನಿ ಬಾ ಅಂತ ಅಮ್ಮನನ್ನು ಹಿತ್ತಲಿಗೆ ಕರೆದುಕೊಂಡು ಹೋದೊಡನೇ ಸೋಮು ಹತ್ತಾರು ಬಕೀಟು ತಣ್ಣೀರನ್ನು ಅವರ ತಲೆ ಮೇಲೆ ಸುರಿದ. ಸೋಮಿ ಅಮ್ಮಾ ಅಯ್ಯೋ ಅಯ್ಯೋ ಅಂತ ಪರದಾಡಿದರು. ನಂತರ ಸೋಮಿ ಅಮ್ಮನನ್ನು ಒಳಗೆ ಕರೆದುಕೊಂಡು ಬಂದು ಬಟ್ಟೆ ಬದಲಿಸೋ ಹೊತ್ತಿಗೆ ಅಮ್ಮನಿಗೆ ನಿದ್ದೆನೇ ಬಂದಿತ್ತು. ಹಾಗೇ ಮಂಚದಲ್ಲಿ ಉರುಳಿಸಿ ಜೋರಾಗಿ ಫ್ಯಾನ್ ಹಾಕಿ ಆಚೆ ಬಂದು ಅಲ್ಲಾರೀ ಅಮ್ಮನಿಗೆ ಇಷ್ಟೊಂದು ಮತ್ತು ಬರಿಸೋ ಚಾಕೋಲೇಟಲ್ಲಿ ಅದೆಂಥಾದ್ದಿದೆ ಅಂತ ಸೋಮಿ ಒಂದು ಚಾಕೋಲೇಟ್ ಬಾಯಿಗೆ ಹಾಕ್ಕೊಳ್ಳೋಕೆ ಹೋದಾಗ ಸೋಮು ಅದನ್ನು ಕಿತ್ತು ಎಸೆದು ನಿಮ್ಮಮ್ಮನ ರಾಧ್ಧಾಂತವೇ ಸಾಕು ಇನ್ನು ನೀನೂ ಷುರು ಮಾಡಬೇಡ ಅಂದು ಉಳಿದಿದ್ದ ಇನ್ನೊಂದು ಚಾಕೋಲೇಟನ್ನು ಆಚೆ ಬಿಸಾಕಿದ.

■

# ಅಜ್ಜನಿಗಾಗಿ ಟ್ರೇನ್ ನಿಲ್ಲಿಸಿಯೇ ಬಿಟ್ವಿ

**✍ ಸಂಗಮೇಶ್ ಮೆನಸಿನಕಾಯಿ**

ಸ್ಟಾಪ್ ಇಲ್ಲದ ಟ್ರೇನ್ ನಿಲ್ಲಿಸಿ, ಅಜ್ಜನ್ನ ಇಳಿಸಿದೆವು! ಪತ್ರಕರ್ತರ ಸಮ್ಮೇಳನ ಮುಗಿಸಿ ವಿಜಯಪುರ ರೈಲ್ವೆ ನಿಲ್ದಾಣಕ್ಕೆ ಬಂದು ಸೊಲಾಪುರ–ಗದಗ ಡೆಮು ಎಕ್ಸಪ್ರೆಸ್ ಹತ್ತಿದೆ. ಅದೇ ಟ್ರೇನ್‌ಗೆ ಬಾಗಲಕೋಟೆಯಲ್ಲಿ ನನ್ನ ಬಾಲ್ಯದ ಸಹಪಾಠಿ ಡಾ॥ ರವಿಕುಮಾರ ಕರಿಯಪ್ಪನವರ ಹತ್ತುವವನಿದ್ದ. ಟ್ರೇನ್ ಕಡ್ಲಿಮಟ್ಟಿ ದಾಟಿದ ನಂತರ ಸುಮ್ಮನೆ ಬಾಗಿಲ ಕಡೆ ಬಂದೆ. ಒಬ್ಬ ಅಜ್ಜ ನನ್ನ ಹಿಂದೆ ಬಂದು, "ಸಾಹೇಬರ ಈ ಗಾಡಿ ಗುಳೇದಗುಡ್ಡಕ್ಕ ನಿಲ್ಲತ್ತೇನ್ರಿ?" ಅಂದ. ನಾನು ಕೂಡಲೇ ಮೊಬೈಲ್ ತೆಗೆದು NTES ಆಪ್‌ನಲ್ಲಿ ಚೆಕ್ ಮಾಡಿ, "ನಿಲ್ಲುತ್ತಾಳ್ರಿ ಅಜ್ಜಾರ" ಅಂದೆ. ಅದಕ್ಕ ಅಜ್ಜ ಹೇಳಿದ, "ಇಲ್ರಿ ಸಾಹೇಬರ ಗುಳೇದಗುಡ್ಡ ಸ್ಟೇಶನ್ನ್ಯಾಗ ಅದೇನೋ ಕೆಲಸ ನಡದೈತಿ, ಟ್ರೇನ್ ಅಲ್ಲಿ ನಿಲ್ಲಂಗಿಲ್ಲ ಅಂತ ಹೇಳಿ, ಬದಾಮಿಗೆ ಟಿಕೆಟ್ ಕೊಟ್ಟಾರ್ರಿ" ಅಜ್ಜ ಆತಂಕದಿಂದ ಹೇಳಿದ. ಅತನ ಟಿಕೆಟ್ ನೋಡಿದೆ–'ಲಚ್ಯಾಣ ಟು ಬದಾಮಿ' ಇತ್ತು. ಅಷ್ಟರಲ್ಲಿ ಟ್ರೇನ್ ಮುಗಳಳ್ಳಿ ದಾಟಿ, ಬಾಗಲಕೋಟೆಗೆ ಬಂತು.

ಕೆಲವು ಪ್ರಯಾಣಿಕರು ಇಳಿಯಲು ಬಾಗಿಲ ಕಡೆ ಬಂದರು. ಅವರು ನೋಡಲು ನಿತ್ಯ ಅದೇ ರೈಲಿಗೆ ಓಡಾಡುವ ಮತ್ತು ಅದೇ ಭಾಗದ ಪ್ರಯಾಣಿಕರಂತೆ ಕಂಡರು. ಅವರಿಗೆ ಕೇಳಿದರೆ, "ಗುಳೇದಗುಡ್ಡಕ್ಕ ಎಲ್ಲ ಟ್ರೇನ್ ನಿಲ್ತಾವ್ರಿ. ದೊಡ್ಡ ಸ್ಟೇಶನ್ ಅದು. ನಮಗ ಪಕ್ಕಾ ಗೊತ್ತೈತಿ. ಈ ಟ್ರೇನೂ ಅಲ್ಲಿ ನಿಲ್ಲತೈತಿ" ಅಂದರು. ಆದರೆ ಒಬ್ಬ ಪ್ರಯಾಣಿಕ ಮಾತ್ರ, "ನಾವು ಬೆಳಿಗ್ಗೆ ಅತ್ತಾಗಿಂದ ಟ್ರೇನ್‌ನ್ಯಾಗ ಬಂದಿವ್ರಿ. ಅದು ಗುಳೇದಗುಡ್ಡದಾಗ ನಿಂದರಲಿಲ್ಲ ನೋಡ್ರಿ" ಅಂದರು. "ಅದು ಪ್ಯಾಸೆಂಜರೋ ಎಕ್ಸಪ್ರೆಸ್ಸೋ?" ಅಂತ ಕೇಳಿದಾಗ ಅವರು, "ಅದೇನೂ ಗೊತ್ತಿಲ್ರಿ, ನಾವು ಬದಾಮಿಯಿಂದ ಹತ್ತಿದಿವಿ. ಅದು ಸ್ಟಾಪ್ ಮಾಡಲಿಲ್ರಿ" ಅಂದರು.

ಎಷ್ಟೋ ಸಲ ರೈಲ್ವೆ ಇಲಾಖೆ ಇಂಥ ಬದಲಾವಣೆಗಳ ಬಗ್ಗೆ ಪತ್ರಿಕಾ ಪ್ರಕಟಣೆ ಜಾರಿ ಮಾಡಿ ಸುಮ್ಮನೆ ಕುಳಿತುಬಿಡತ್ತೆ. ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ, ರೈಲಿನ ಎಲ್ಲ ಪ್ರಯಾಣಿಕರಿಗೆ ತಲುಪುವುದೇ ಇಲ್ಲ. ಅಜ್ಜನ ದುಗುಡ ಮುಂದುವರಿಯಿತು. ಅದು ಗುಳೇದಗುಡ್ಡಕ್ಕೆ ನಿಲ್ಲುವುದಿಲ್ಲ ಅಂತಾದರೆ ಬಾಗಲಕೋಟೆಗೇ ಇಳಿದು ಬಸ್ಸಿಗೆ ಹೋಗಬೇಕು ಅಂತ ಆತನ ಯೋಚನೆ. ಆದರೆ ಬಾಗಲಕೋಟೆಯ ಬದಲು ಬದಾಮಿಗೇ ಇಳಿದು ವಾಪಸ್ ಬರೋದು ಒಳ್ಳೆಯದು ಅಂತ ಅಲ್ಲಿನ ಕೆಲವು ಪ್ರಯಾಣಿಕರ ಸಲಹೆ."ಅಜ್ಜಾರ, ಅಲ್ಲಿ ಬಾಗಲಕೋಟ್ಯಾಗ ಯಾರಾದರೂ ರೈಲ್ವೆ ಸ್ಟಾಫ್ ಸಿಕ್ಕರ ಕೇಳೂಣು ತಡೀರಿ" ಅಂತ ಹೇಳಿದೆ. ಅಜ್ಜನ ವಯಸ್ಸು 70 ದಾಟಿರಬೇಕು. ಮಧ್ಯಾಹ್ನ ಒಂದು ಗಂಟೆಗೇ ಲಚ್ಯಾಣದಲ್ಲಿ ಈ ಟ್ರೇನ್ ಹತ್ತಿದ್ದ. ಬದಾಮಿಯಿಂದ ಗುಳೇದಗುಡ್ಡಕ್ಕೆ ಬಂದರೆ ಅಲ್ಲಿಂದ ಮುಂದೆ ತಾನು ಹೋಗಬೇಕಾಗಿರುವ ಕಾಜಿ ಬೂದಿಹಾಳ ಗ್ರಾಮಕ್ಕೆ ಕತ್ತಲಾದ ನಂತರ ಯಾವುದೇ ವಾಹನ ಸಿಗಲ್ಲ ಅನ್ನೋದು ಆತನ ಚಿಂತೆಯಾಗಿತ್ತು.

ಬಾಗಲಕೋಟೆಯಲ್ಲಿ ವಾಕಿಟಾಕಿ ಹಿಡಿದು ತಿರುಗುತ್ತಿದ್ದ ಸ್ಟೇಶನ್ ಮಾಸ್ಟರ್‌ಗೆ ಈ ಬಗ್ಗೆ ಕೇಳಿದಾಗ ಅವರು ಗುಳೇದಗುಡ್ಡದಲ್ಲಿ ಈಗಾಗಲೇ 15 ದಿನಗಳಿಂದ ಯಾವುದೇ ಟ್ರೇನ್ ನಿಲ್ಲುತ್ತಿಲ್ಲ; ಆದರೆ ಅಲ್ಲಿ ಕೆಲವು ಸಿಬ್ಬಂದಿ ಹತ್ತುವವರಿರುತ್ತಾರೆ, ಅವರ ಸಲುವಾಗಿ ಈ ಟ್ರೇನ್ ಅಲ್ಲಿ ನಿಧಾನವಾಗಿ ಚಲಿಸುತ್ತದೆ; ಅಲ್ಲಿನ ಕಾರ್ಮಿಕರು

ಹತ್ತಿದ ತಕ್ಷಣ ಟ್ರೇನಿನ ವೇಗ ಹೆಚ್ಚುತ್ತದೆ ಅಂತ ಮಾಹಿತಿ ಕೊಟ್ಟರು.

"ಹಾಗಾದರೆ ಈ ಅಜ್ಜನ ಸಲುವಾಗಿ ಒಂದು ಕ್ಷಣ ಪೂರ್ತಿ ನಿಲ್ಲಿಸಲು ಗುಳೇದಗುಡ್ಡ ಸ್ಟೇಶನ್ ಮಾಸ್ಟರ್‌ಗೆ ಒಂಚೂರು ಹೇಳ್ರಿ ಪ್ಲೀಸ್" ಅಂದೆ. "ಅಲ್ಲಿ ಟ್ರೇನು ನಿಂತರೂ ನಿಮಗೆ ಇಳಿಯೋಕೆ ಪ್ಲ್ಯಾಟ್‌ಫಾರ್ಮ್ ಇಲ್ಲ. ಟ್ರೇನ್ ಮಧ್ಯದ ಹಳಿ ಮೇಲೆ ಹೋಗುವುದರಿಂದ ವಯಸ್ಸಿನವರಿಗೇ ಇಳಿಯೋದು ಕಷ್ಟ; ಇನ್ನು ಈ ಮುತ್ಯಾಗ ಸಾಧ್ಯನ ಆಗೂದಿಲ್ಲ, ಸುಮ್ಮನೆ ಬದಾಮಿಗೆ ಹೋಗಿ ವಾಪಸ್ ಬಸ್ ಅಥವಾ ಟಂಟಂನಲ್ಲಿ ಬರೋದು ಒಳ್ಳೆಯದು" ಅಂದರು ಮಾಸ್ಟರ್.

ಅಜ್ಜ ದೈನೇಸಿ ಬಿಟ್ಟ. "ಇಲ್ರಿ ಸಾಹೇಬರ ನನಗ ಮತ್ತ ಕಾಜಿ ಬೂದಿಹಾಳಕ್ಕ ಯಾವೂ ಗಾಡಿ ಸಿಗೂದಿಲ್ರಿ" ಅಂದ. ಆತನ ಮನೆಯವರ ಮೊಬಲ್ ನಂಬರ್ ಇದ್ದರೆ ಈ ಅಜ್ಜನನ್ನು ಬಾಗಲಕೋಟೆ ಅಥವಾ ಬದಾಮಿ ಎರಡರಲ್ಲಿ ಯಾವ ಊರಿಗೆ ಇಳಿಸಿದರೆ ಒಳ್ಳೆಯದು ಎಂಬುದನ್ನು ಕೇಳೋಣ ಅಂದುಕೊಂಡೆ. ಅಜ್ಜನ ಬಳಿ ಮೊಬೈಲ್ ಇಲ್ಲ, ಅಷ್ಟೇ ಅಲ್ಲ, ಯಾವುದೇ ಬಂಧುಗಳ ಸಂಪರ್ಕ ವಿವರಗಳೂ ಆತನ ಬಳಿ ಇಲ್ಲ. ಈ ಎಲ್ಲ ಚರ್ಚೆಯನ್ನು ಗಮನಿಸುತ್ತಿದ್ದ ಅಲ್ಲಿನ ಮೂವರು ಯುವಕರು, "ಸರ ಟ್ರೇನ್ ಒಂಚೂರು ನಿಂತರ ಸಾಕು, ನಾವು ಮುತ್ಯಾನ್ನ ಸುರಕ್ಷಿತವಾಗಿ ಇಳಿಸ್ತೀವಿ ತೊಗೊರಿ.." ಅಂತ ಧೈರ್ಯ ಕೊಟ್ಟರು. ಈ ಡೆಮು ಎಕ್ಸ್‌ಪ್ರೆಸ್‌ನ ಬಾಗಿಲು ಬೇರೆ ಊರಗಲ. ಟ್ರೇನ್ ಪ್ಲ್ಯಾಟ್ಫಾರ್ಮ್ ಬಳಿ ಇದ್ದಾಗಲೂ ಹತ್ತೋದು ಇಳಿಯೋದು ಒಂಚೂರು ಕಷ್ಟವೇ. ಗುಳೇದಗುಡ್ಡ ಸ್ಟೇಶನ್ ಮಾಸ್ಟರ್‌ಗೆ ಟ್ರೇನ್ ಪೂರ್ತಿ ಹಾಲ್ಟ್ ಮಾಡಿಸುವಂತೆ ಈ ಬಾಗಲಕೋಟೆ ಸ್ಟೇಶನ್ ಮಾಸ್ಟರ್‌ಗೆ ಮತ್ತೊಮ್ಮೆ ವಿನಂತಿಸಿದೆ. ಅವರು, "ಟ್ರೈ ಮಾಡ್ತೀನಿ, ಗ್ಯಾರಂಟಿ ಹೇಳಲ್ಲ" ಅಂದರು.

ಟ್ರೇನ್ ಗುಳೇದಗುಡ್ಡದಲ್ಲಿ ನಿಂತರೆ ಅಜ್ಜನನ್ನು ಇಳಿಸೋದು, ಇಲ್ಲದಿದ್ದರೆ ಬದಾಮಿಗೆ ಇಳಿಸೋದು ಎಂಬ ನಿರ್ಧಾರ ಮಾಡಿದೆವು. ಈ ಗುಳೇದಗುಡ್ಡ ರೋಡ್ ರೈಲ್ವೆ ಸ್ಟೇಶನ್ ಬಗ್ಗೆ ಗೊತ್ತಿಲ್ಲದವರಿಗೆ ಹೇಳಲೇಬೇಕು. ಯಾವುದೇ ಊರಿನ ರೈಲ್ವೆ ಸ್ಟೇಶನ್ ಜೊತೆ 'ರೋಡ್' ಎಂಬ ಶಬ್ದ ಇದ್ದರೆ ಆ ಊರು ಅಲ್ಲಿಲ್ಲ; ಆ ಊರಿಗೆ ಹೋಗುವ ರಸ್ತೆ ಮಾತ್ರ ಅಲ್ಲಿದೆ ಅಂತ ಅರ್ಥ. ಗುಳೇದಗುಡ್ಡ ರೋಡ್ ನಿಲ್ದಾಣದ ಬಳಿ ಇರುವ ಊರಿನ ಹೆಸರು ಕಟಗೇರಿ. ಹಾಗಾದರೆ ರೈಲು ನಿಲ್ದಾಣದ ಹೆಸರು ಕಟಗೇರಿ ಎಂದಿರಬೇಕಿತ್ತಲ್ಲ? ಕೆಲವೊಮ್ಮೆ ಎರಡು–ಊರಿನ ಹದ್ದಿನಲ್ಲಿ ಬರುವ ಜಮೀನಿನಲ್ಲಿ ರೈಲು ನಿಲ್ದಾಣ ನಿರ್ಮಾಣವಾದಾಗ, ತಮ್ಮೂರಿನ ಹೆಸರು ಇಡಬೇಕೆಂದು ಆ 2–3 ಗ್ರಾಮಗಳ ಜನ ತಗಾದೆ ತೆಗೆದರೆ, ಆ ಎಲ್ಲ ಊರುಗಳ ಹೆಸರುಗಳನ್ನು ಬಿಟ್ಟು, ಹತ್ತಿರದ ಪ್ರವಾಸಿ ಸ್ಥಳ ಅಥವಾ ದೊಡ್ಡ ಊರಿನ ಹೆಸರು ಇಟ್ಟು 'ರೋಡ್' ಹಚ್ಚಿ ಬಿಡುತ್ತದೆ ರೈಲ್ವೆ ಇಲಾಖೆ. ಅಂತೆಯೇ 'ಬಸವನ ಬಾಗೇವಾಡಿ ರೋಡ್' ಎಂಬ ರೈಲು ನಿಲ್ದಾಣ ತೆಲಗಿ ಗ್ರಾಮದಲ್ಲಿದೆ; 'ಕೂಡಲ ಸಂಗಮ ರೋಡ್' ರೈಲು ನಿಲ್ದಾಣ ರಾಂಪೂರ ಬಳಿ ಇದೆ! 'ಗೋಕಾಕ್ ರೋಡ್'ದೂ ಇದೇ ಕತೆ. ಟ್ರೇನ್ ಗುಳೇದಗುಡ್ಡ ರೋಡ್ ರೈಲು ನಿಲ್ದಾಣ ಪ್ರವೇಶಿಸುತ್ತಿದ್ದಂತೆ ವೇಗ ತಗ್ಗಿಸಿತು. ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಹತ್ತಿಕೊಳ್ಳುತ್ತಿದ್ದಂತೆ ವೇಗ ಹೆಚ್ಚಿಸಿತು! ನಾನು ದೂರದಿಂದಲೇ ಪ್ಲ್ಯಾಟ್‌ಫಾರ್ಮ್ ಮೇಲೆ ನಿಂತಿದ್ದ ಸ್ಟೇಶನ್ ಮಾಸ್ಟರ್‌ಗೆ 'ಒಂದ್ ನಿಮಿಷ ನಿಲ್ಲಿಸಿ' ಎಂಬಂತೆ ಕೈ ಮಾಡಿದೆ. ಅವನು 'ಇಲ್ಲ' ಎಂಬಂತೆ ಸಂಜ್ಞೆ ಮಾಡಿದ. ಕೂಡಲೇ ಅಜ್ಜನನ್ನು ತೋರಿಸಿ, "ಇವರ ಸಲುವಾಗಿ ಪ್ಲೀಸ್" ಎಂಬಂತೆ ಗೋಗರೆದೆ. ಅವನು ವಾಕಿಟಾಕಿಯಲ್ಲಿ ಚಾಲಕನಿಗೆ ಮಾತನಾಡಿ, "ಓಕೆ ಓಕೆ ವೇಟ್

ವೇಟ್" ಎಂಬಂತೆ ನಮ್ಮ ಕಡೆ ಕೈ ಮಾಡಿದ.

ನಮ್ಮ ಹುಡುಗರಿಗೆ ಹೇಳಿದೆ–"ಟ್ರೇನ್ ನಿಲ್ಲುತ್ತೆ; ಅಜ್ಜನನ್ನು ಹುಷಾರಾಗಿ ಇಳಿಸುವ ಜವಾಬ್ದಾರಿ ನಿಮ್ಮದು" ಅಂದೆ. ಅವರು, "ಅದರ ಚಿಂತಿ ಬಿಡ್ರಿ ಸರ" ಅಂತ ರೆಡಿ ಆದರು. ನಿಲ್ಲುತ್ತಿದ್ದಂತೆ ತಾವು ಮೊದಲು ಕೆಳಗಿಳಿದು ನಿಂತರು. ನಾನು ಮತ್ತು ರವಿ ಮೇಲಿನಿಂದ ಅಜ್ಜನನ್ನು ಮಗುವಿನಂತೆ ಇಳಿಸಿದೆವು. ಕೆಳಗಿನ ಹುಡುಗರು, ಅಜ್ಜನನ್ನು ಇಳಿಸಿಕೊಂಡು, ಒಂದು ಸುರಕ್ಷಿತ ಜಾಗದಲ್ಲಿ ನಿಲ್ಲಿಸಿ, ಮತ್ತೆ ಟ್ರೇನ್ ಹತ್ತಿದರು. ಇಷ್ಟು ನಿಂತದ್ದೇ ತಡ. ಸುಮಾರಿ 20–30 ಇತರ ಪ್ರಯಾಣಿಕರು ಬೇರೆ ಬೇರೆ ಬೋಗಿಗಳಿಂದ ಇಳಿದರು! ಅಂದರೆ ಅವರೆಲ್ಲ ಬದಾಮಿಗೆ ಹೋಗಿ ವಾಪಸ್ ಬೇರೆ ವಾಹನಗಳಲ್ಲಿ ಬರುವವರಿದ್ದರು!ಆದರೆ ಅಜ್ಜನಿಗೆ ಅಲ್ಲಿಂದ ಸ್ಟೇಶನ್ ಹೊರಕ್ಕೆ ಹೋಗಲು ದಾರಿಯೇ ಇರಲಿಲ್ಲ. ನಾವು "ಆ ಕಡೆಯಿಂದ ಹೋಗಜ್ಜ, ಈ ಕಡೆಯಿಂದ ಹೋಗಜ್ಜ.." ಎಂದು ಹೇಳುತ್ತಿರುವಾಗಲೇ, "ಅಜ್ಜನ ಚಿಂತಿ ಇನ್ನ ನಮಗ ಬಿಡ್ರಿ" ಅಂದರು ಅಲ್ಲಿನ ಸ್ಟೇಶನ್ ಮಾಸ್ಟರ್ ಮತ್ತು ಪಾಯಿಂಟ್ಸ್‌ಮನ್. ಅಜ್ಜ ತಲೆ ಎತ್ತರದಲ್ಲಿ ರೈಲಿನ ಬಾಗಿಲಲ್ಲಿ ನಿಂತಿದ್ದ ನಮ್ಮ ಕಡೆ ಕೈ ಜೋಡಿಸಿ, "ನಿಮಗ ಪುಣ್ಯ ಬರಲಿರಿಯಪ್ಪಾ." ಅಂತ ಕೈ ಮುಗಿದಾಗ, "ನಿಮ್ಮ ಮೊಮ್ಮಕ್ಕಳ ವಯಸ್ಸಿನವರು ನಾವು, ನಮಗ ಕೈ ಮುಗಿಬಾರದರಿ ಅಜ್ಜಾರ" ಎನ್ನುತ್ತ ನಾವೂ ಕೈಮುಗಿದು, "ಹೋಗಿ ಬರ್ರಿ" ಎನ್ನುತ್ತಿದ್ದಂತೆ ನಮ್ಮ ಟ್ರೇನ್ ವೇಗ ಹೆಚ್ಚಿಸಿಕೊಂಡಿತು! ಏನೊ ಒಂಥರಾ ನಿರಾಳತೆ.

ಯುದ್ಧದಂಥ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಸಾರ್ಥಕ ಭಾವ. ಇದನ್ನೆಲ್ಲ ಗಮನಿಸಿದ ಒಬ್ಬ ಬುರ್ಖಾಧಾರಿ ಮಹಿಳಾ ಪ್ಯಾಸೆಂಜರ್, ಬಹುಶಃ ತುಮಕೂರು ಕಡೆಯವರು ಇರಬೇಕು–ದೊಡ್ಡ ದನಿಯಲ್ಲಿ ಹೇಳಿದರು– "ಸರ್ ನಮ್ಮ ಮನಸ್ಸು ಪೊಸಿಟಿವ್ ಆಗಿದ್ದರೆ ಎಷ್ಟೇ ಕಷ್ಟದ ಕೆಲಸವೂ ಸುಲಭವಾಗುತ್ತೆ ಅನ್ನೋದನ್ನ ಪ್ರೂವ್ ಮಾಡಿಬಿಟ್ಟಿರಿ ನೀವೆಲ್ಲ ಸೇರಿಕೊಂಡು! ಆ ತಾತನ ಬಗ್ಗೆ ಆವಾಗಿನಿಂದಲೂ ನೀವು ಚಡಪಡಿಸುತ್ತಿರೋದನ್ನ ನೋಡಿದ್ದೆ. ಈ ರೈಲ್ವೆಯವರು ಮಾಡೋ ಎಡವಟ್ಟಿಗೆ ಪ್ರಯಾಣಿಕರು ತೊಂದರೆ ಅನುಭವಿಸಬೇಕು. ಪಾಪ, ಆ ತಾತಯ್ಯ ಇವತ್ತು ಯಾವ ಬೀದಿಯಲ್ಲಿ ರಾತ್ರಿ ಕಳೆಯಬೇಕಾಗುತ್ತಿತ್ತೋ ಏನೊ! ನೀವೆಲ್ಲರೂ ಅವನು ಸುಲಭವಾಗಿ ಮನೆ ಸೇರುವಂತೆ ಮಾಡಿದಿರಿ" ಅಂತ ಘಂಟಾಘೋಷವಾಗಿ ಹೊಗಳಿದರು. ಅಷ್ಟರಲ್ಲಿ ಅಲ್ಲಿದ್ದ ಮತ್ತೊಬ್ಬ ಪ್ರಯಾಣಿಕ, "ಹೇ ಇವೆಲ್ಲ ರಿಸ್ಕಿ ಕೆಲಸರಿ ಮೇಡಂ. ಹಂಗ ಇಳಿಯುವಾಗ ಆ ಮುದುಕಗ ಏನಾದರೂ ಆಗಿದ್ದರ ಇವರೆಲ್ಲರೂ ಪೊಲೀಸ್ ಸ್ಟೇಶನ್‌ಗೆ ಹೋಗಬೇಕಾಗತಿತ್ತರಿ.." ಅಂದ. ಆ ಮೇಡಂ ತಿರುಗೇಟು ಕೊಟ್ಟೇ ಬಿಟ್ಟರು– "ಸರ್ ನೀವು ಫುಲ್ ನೆಗೆಟಿವ್ ಇದ್ದೀರಿ. ನೀವು ಸುಮ್ಮನಿದ್ದು ಬಿಡಿ. ಮಾತಾಡಲೇ ಬೇಡಿ. ಆ ತಾತನ್ನ ಸುರಕ್ಷಿತವಾಗಿ ಇಳಿಸೋಕೆ ಇವರೆಲ್ಲ ಬಾಗಲಕೊಟೆಯಲ್ಲಿಯೇ ಪ್ಲಾನ್ ಮಾಡಿದ್ದು ನಿಮಗೆ ಕಾಣಲಿಲ್ಲ. ಆ ಪ್ಲ್ಯಾನನ್ನ ಕರೆಕ್ಟಾಗಿ ಎಕ್ಸಿಕ್ಯೂಟ್ ಮಾಡಿದ್ದೂ ನಿಮಗೆ ಕಾಣಲಿಲ್ಲ. ಯಾರಾದರೂ ಒಳ್ಳೆಯ ಕೆಲಸ ಮಾಡಿದಾಗ ನಾವು ಎಟ್‌ಲೀಸ್ಟ್ ಎರಡು ಒಳ್ಳೆಯ ಮಾತು ಹೇಳೊಣ". ಆ ಪ್ರಯಾಣಿಕ ಸೈಲೆಂಟ್ ಆಗಿಬಿಟ್ಟ! ಆ ಅಜ್ಜನ ಧನ್ಯತಾಭಾವದ ಮುಖ ನನ್ನ ಮನದಲ್ಲಿ ಇನ್ನೂ ಅಚ್ಚೊತ್ತಿದೆ. ನಮ್ಮ ಕಾರ್ಯಾಚರಣೆಯ ಕೆಲವು ಭಾಗದ ವಿಡಿಯೊ–ಫೋಟೊಗಳು ಮಾತ್ರ ಇಲ್ಲಿವೆ.

■

# ವಿಧಾನಸಭಾ ಕಲಾಪದಲ್ಲಿ ಕೋತಿಗಳ ಹಾವಳಿ

**ಡಾ. ಕೆ. ಆರ್. ಸಂಧ್ಯಾರೆಡ್ಡಿ**

1950ರ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದ ವಿಧಾನ ಸಭಾ ಕಲಾಪದಲ್ಲಿ, ರೈತರಿಗೆ ಕೋತಿಗಳು ಹಾಗೂ ಮೇಕೆಗಳಿಂದ ಆಗುತ್ತಿರುವ ತೊಂದರೆಗಳನ್ನು ಕುರಿತಂತೆ ಶ್ರೀ ಎಂ. ವಿ. ಕೃಷ್ಣಪ್ಪನವರು ಒಂದು ನಿರ್ಣಯವನ್ನು ಮಂಡಿಸಿದರು. ಆ ಕುರಿತಂತೆ ನಡೆದ ಚರ್ಚೆಗಳ ಒಂದು ಪ್ರಸಂಗ ಇಲ್ಲಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ) ಸ್ವಾಮಿ ನನ್ನ ನಿರ್ಣಯ ಈ ರೀತಿಯಾಗಿದೆ. ರೈತರಿಗೆ ಕೋತಿಗಳು ಹಾಗೂ ಮೇಕೆಗಳಿಂದ ಆಗುತ್ತಿರುವ ಹಾವಳಿಯನ್ನು ತಪ್ಪಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕು.

ಈ ವಿಷಯವು ಲಾಘವವಾಗಿ ಪರಿಗಣಿಸತಕ್ಕದ್ದಲ್ಲ. ಕೆಲವರಿಗೆ ಇದು ಹಾಸ್ಯಾಸ್ಪದವಾಗಿ ಕಾಣಬಹುದು. ಆದಾಗ್ಯೂ ದೇಶದ ಈಗಿನ ಪರಿಸ್ಥಿತಿಯಲ್ಲಿ ಮತ್ತು ಆಹಾರದ ಸಮಸ್ಯೆ ಇಷ್ಟು ಬಿಗಡಾಯಿಸಿಕೊಂಡಿರುವ ಸನ್ನಿವೇಶದಲ್ಲಿ ಕೆಲವು ಮಾನ್ಯ ಸದಸ್ಯರು ಇದನ್ನು ಹಾಸ್ಯಾಸ್ಪದವಾಗಿ ಟೀಕೆ ಮಾಡುತ್ತಾರೆಂದು ತಿಳಿದಿದ್ದಾಗ್ಯೂ ಅಂಥಾ ಭಾರವನ್ನೆಲ್ಲಾ ನಾನು ನನ್ನ ತಲೆಯ ಮೇಲೆ ಹೊತ್ತುಕೊಂಡು ಈ ನಿರ್ಣಯವನ್ನು ಈಗ ಸಭೆಯ ಮುಂದಿಡಲು ನಿಂತಿದ್ದೇನೆ. ಈ ಕಪಿಗಳಿಂದ ರೈತರುಗಳಿಗೆ ಆಗುತ್ತಿರುವ ಕಿರುಕುಳ ಮತ್ತು ತೊಂದರೆಗಳು ಅಷ್ಟಿಷ್ಟೆಂದು ವರ್ಣಿಸುವುದಕ್ಕೇ ಸಾಧ್ಯವಿಲ್ಲ. ಇದು ಅಂಥಾ ವಿಷಯ. ಆದರೆ ಈ ಕೋತಿಗಳ ವಿಚಾರವಾಗಿ ನಮ್ಮ ಹಿಂದುಗಳಲ್ಲಿ ಒಂದು ಗೌರವ ಮನೋಭಾವನೆ ಹಿಂದಿನಿಂದಲೂ ಬೆಳೆದು ಕೊಂಡು ಬಂದಿರುವುದರಿಂದ ಇವುಗಳನ್ನು ಕೊಲ್ಲಲು ಅನೇಕರು ಹಿಂದೆಗೆಯುತ್ತಿದ್ದಾರೆ. ಈ ಒಂದು ಧರ್ಮಸಂಕಟಕ್ಕೆ ಸಿಕ್ಕಿ ಇವುಗಳ ಹಾವಳಿಯನ್ನು ತಪ್ಪಿಸಿಕೊಳ್ಳಲು ಇವುಗಳನ್ನು ಹಿಡಿದು ಬೇರೆ ಕಡೆಗೆ ಸಾಗಿಸತಕ್ಕ ಕಾರ್ಯ ಒಂದನ್ನೇ ಈಗ ಮಾಡುತ್ತಿದ್ದಾರೆ. ಕೆಲವರು ಈ ಕಪಿಗಳನ್ನು, ವಾನರರು, ಆಂಜನೇಯನ ಕುಲಕ್ಕೆ ಸೇರಿದವುಗಳು ಎಂದು ಗೌರವಿಸುತ್ತಾರೆ. ಹಾಗೆ ಜನರು ಇವುಗಳನ್ನು ಗೌರವಿಸ ಬೇಕಾಗಿದ್ದುದು ಈ ರೀತಿ ತೊಂದರೆಗಳನ್ನುಂಟು ಮಾಡುವಾಗಲಲ್ಲ. ಅವು ಜನರ ಗೋಜಿಗೆ ಬಾರದೆ ವನಗಳಲ್ಲೇ ಇದ್ದುಕೊಂಡಿದ್ದರೆ ಹಾಗೆ ಗೌರವಿಸಬಹುದಾಗಿತ್ತು. ಅಷ್ಟೇ ಅಲ್ಲದೆ ಅವು ಆಂಜನೇಯನ ಕುಲಕ್ಕೆ ಸೇರಿದವುಗಳಾಗಿದ್ದರೆ ಆ ಆಂಜನೇಯನಂತೆ ಬ್ರಹ್ಮಚಾರಿಗಳಾಗಿದ್ದುಕೊಂಡು, ಸಂತಾನಾಭಿವೃದ್ಧಿ ಇಲ್ಲದೆ ಇದ್ದಿದ್ದರೆ ನಾವೂ ಇವುಗಳಿಗೆ ಕೊಂಚ ಗೌರವವನ್ನು ಕೊಡಬಹುದಾಗಿತ್ತು, ಆದರೆ ಈಗ ಇವು ಊರಿನೊಳಕ್ಕೆ ನುಗ್ಗಿ ಜನರಿಗೆ ನಾನಾ ರೀತಿಯಲ್ಲಿ ತೊಂದರೆಯನ್ನು ಕೊಡಲು ಪ್ರಾರಂಭಿಸಿವೆ,

ರಾಜಮಂತ್ರ ಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ):– ಊರಿನಲ್ಲಿ ಅವುಗಳಂತೆ ಇರತಕ್ಕ ಕೆಲವು ಜನಗಳೂ ಇದ್ದಾರೆ. ಅಂಥವರನ್ನು ಹುಡುಕಿಕೊಂಡು ಅವು ಊರಿನೊಳಗೆ ಬರುತ್ತವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು:– ನಮ್ಮ ಮುಳುಬಾಗಿಲು ತಾಲ್ಲೂಕಿನಲ್ಲೇ ಸುಮಾರು 15,000 ಕೋತಿಗಳು ಇರುತ್ತವೆಂದು ಗೊತ್ತಾಗಿದೆ. ಅಂದಮೇಲೆ ಅಲ್ಲಿರತಕ್ಕ ರೈತರ ಗತಿ ಏನಾಗಿರಬಹುದು! ಪೂರ್ವದಲ್ಲಿ ಒಂದು ಗಾದೆ ಹೇಳುತ್ತಿದ್ದರು. ಏನೆಂದರೆ "ಮಂಗನನ್ನು ನಾಶಮಾಡಿದರೆ ಮನೆ ನಾಶವಾಗುತ್ತದೆ" ಎಂದು. ಆದರೆ ಈಗ

ಅದು ತಲೆ ಕೆಳಗಾಗಿದೆ. ಈಗ ಮಂಗನನ್ನು ನಾಶಮಾಡದಿದ್ದರೆ ಮನೆ ನಾಶವಾಗತಕ್ಕ ಪರಿಸ್ಥಿತಿ ಒದಗಿದೆ. ಸ್ವರಾಜ್ಯ ಬಂದ ಮೇಲಂತೂ ಈ ಕೋತಿಗಳು ಜನರಿಗೆ ಹೆದರುವುದೇ ಇಲ್ಲ. ಜನರ ಮೇಲೇ ಬೀಳುವುದಕ್ಕೆ ಬರುತ್ತಿವೆ.

ಕೋತಿಗಳ ಹಾವಳಿಯಿಂದ ಹುಣಿಸೇ ಬೆಳೆಯೆಲ್ಲಾ ನಾಶವಾದ್ದರಿಂದಲೇ ದಿನದಿನಕ್ಕೂ ಈ ಹುಣಿಸೆ ಹಣ್ಣಿನ ಧಾರಣೆ ಹೀಗೆ ಏರಲಾರಂಭಿಸಿತು. ಇದೇ ರೀತಿ ಇತ್ತೀಚೆಗೆ ಮಾವು, ತೆಂಗು, ಹಾಗೂ ಕಾಫಿ ಬೆಳೆಗೂ ಸಹ ಇವುಗಳಿಂದ ಹಾವಳಿಯಾಗುತ್ತಿದೆಯೆಂದು ಕೇಳುತ್ತಿದ್ದೇನೆ.

ಜನರು ತಮ್ಮ ಹಿತಕ್ಕಾಗಿ, ತಮ್ಮ ಕ್ಷೇಮಕ್ಕಾಗಿ, ತಮ್ಮ ಸುಖಕ್ಕಾಗಿ ಅನೇಕ ಪ್ರಾಣಿಗಳನ್ನು ಹತ್ಯೆ ಮಾಡುತ್ತಿದ್ದಾರೆ. ಈಗ ಎಲ್ಲರ ಮನೆಯಲ್ಲೂ ತಿಗಣೆ ಇರತಕ್ಕ ವಿಚಾರ ಗೊತ್ತಿರತಕ್ಕದ್ದೇ ಆಗಿದೆ. ಆದರೆ ಯಾರು ಆ ತಿಗಣೆಗಳನ್ನು ಕೊಲ್ಲದೆ ಈಗ ಪೂಜೆ ಮಾಡುತ್ತಿದ್ದಾರೆ? ಯಾರೂ ಹಾಗೆ ಮಾಡುತ್ತಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಅವುಗಳ ನಾಶಕ್ಕಾಗಿ ಡಿ.ಡಿ.ಟಿ. ಇತ್ಯಾದಿಗಳನ್ನು ಪ್ರಯೋಗಮಾಡುತ್ತಾರೆ. ಹೀಗೆ ನಾನಾ ರೀತಿಯಲ್ಲಿ ನಾನಾ ಪ್ರಾಣಿಗಳನ್ನು ಜನರು ತಮ್ಮ ಸುಖಕ್ಕಾಗಿ ಕೊಲ್ಲುತ್ತಿದ್ದಾರೆ. ಇದೇ ರೀತಿ ಈ ಕೋತಿಗಳನ್ನು ಕೂಡ ಕೊಂದುಹಾಕಬಹುದೆಂದು ಕಾಂಗ್ರೆಸ್ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಬಹುದು.

ಆದರೆ ಆಗ ಜನರು ನಾನಾ ರೀತಿಯಲ್ಲಿ ಅಪಪ್ರಚಾರ ಮಾಡಲು ಅವಕಾಶವಾಗಬಹುದು. "ಮಳೆ ಏಕಪ್ಪಾ ಹೋಯಿತು?" ಎಂದರೆ ಕಾಂಗ್ರೆಸ್ ಸರ್ಕಾರದವರು ಕೋತಿಗಳನ್ನು ಕೊಂದುಹಾಕಲು ಆಜ್ಞೆ ಮಾಡಿಬಿಟ್ಟರು, ಅದರಿಂದ ಮಳೆ ನಿಂತುಹೋಯಿತು ಎಂದು, ಮತ್ತೆ ಕೆಲವರು ಏತಕ್ಕಪ್ಪಾ "ಕನ್ನಂಬಾಡಿ ಕೆರೆ ಬತ್ತಿತು" ಎಂದರೆ ಕಾಂಗ್ರೆಸ್ ಸರ್ಕಾರ ಕೋತಿಗಳನ್ನು ಕೊಂದುಹಾಕಬಹುದೆಂದು ಹುಕುಂ ಮಾಡಿಬಿಟ್ಟಿತು. ಆದುದರಿಂದ ಕೆರೆ ಬತ್ತಿಹೋಯಿತು ಎಂದು, ಇನ್ನೂ ಕೆಲವರು ಏತಕ್ಕಪ್ಪಾ "ರೂಪಾಯಿಗೊಂದು ಸೇರು ಅಕ್ಕಿ ಆದದ್ದು" ಎಂದರೆ ಅದಕ್ಕೂ ಇದೇ ಜವಾಬನ್ನು ಹೇಳುತ್ತಾ ಈ ಸರ್ಕಾರವನ್ನು ನಿಂದಿಸಬಹುದು. ಆದಾಗ್ಯೂ ಇದನ್ನು ಅಷ್ಟು ಲಘುವಾಗಿ ನೋಡುವುದಕ್ಕಾಗುವುದಿಲ್ಲ. ಇವುಗಳಿಂದ ವರ್ಷಕ್ಕೆ ಶೇಕಡಾ 15–20ರಷ್ಟು ಬೆಳೆ ನಾಶವಾಗುತ್ತಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು:– ಅದನ್ನು ತಪ್ಪಿಸಲು ನೀವೇನು ಹೇಳುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪನವರು:– ಆಫ್ರಿಕ, ಅಂಡಮಾನ್ ಇತ್ಯಾದಿ ದೂರವಾಗಿರತಕ್ಕ ದೀಪಾಂತರಗಳಿಗೆ ಇವುಗಳನ್ನೆಲ್ಲಾ ಸಾಗಿಸುವುದು ಒಂದು ಮಾರ್ಗ. ಅಂಡಮಾನ್ ದ್ವೀಪದಲ್ಲಿರತಕ್ಕವರನ್ನೆಲ್ಲಾ ಇಲ್ಲಿಗೆ ಕರೆಸಿಕೊಂಡರೂ ಚಿಂತೆಯಿಲ್ಲ, ಆ ದ್ವೀಪವನ್ನೆಲ್ಲಾ ಈ ಕೋತಿಗಳಿಗಾಗಿಯೇ ಮೀಸಲಾಗಿಡುವುದು ಬಹಳ ಉತ್ತಮವಾದುದೆಂದು ಹೇಳುತ್ತೇನೆ.

ಕೋತಿಗಳ ಹಾವಳಿ ಪರಿಹಾರಕ್ಕೆ ನಾನೊಂದು ಸಲಹೆಯನ್ನು ಕೊಡುತ್ತೇನೆ. ಅದು ಹಾಸ್ಯಾಸ್ಪದವಾಗಿ ಕಾಣಬಹುದು. ಆದರೂ ಚಿಂತೆಯಿಲ್ಲ, ಚಿಕ್ಕ ವಯಸ್ಸಿನವನು ಏನೋ ಹೇಳುತ್ತಾನೆಂದು ಉದಾಸೀನ ಮಾಡಬಾರದು. ಬಸವಣ್ಣನಿಗೆ ಬೀಜ ಒಡೆಯುತ್ತೇವೆ. ಅದೇ ರೀತಿಯಲ್ಲಿ ಗಂಡುಕಪಿಗಳಲ್ಲಿ ಸಲಗ ಅಥವಾ ತಿಮ್ಮಣ್ಣ ಎಂದು ಹೇಳತಕ್ಕವುಗಳಿಗೆ ಬೀಜ ಒಡೆದರೆ ಬೇಕಾದಷ್ಟು ಕಪಿಗಳ ಸಂಖ್ಯೆ ಕಡಮೆಯಾಗುತ್ತದೆ. ಕೊಲ್ಲುವುದಕ್ಕಿಂತ ಮತ್ತು ದೂರ ಸಾಗಿಸುವುದಕ್ಕಿಂತ ನನ್ನ

ಸಲಹೆಯು ಸೂಕ್ತವಾಗಿ ಕಾಣುತ್ತದೆ.

ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಮುಸ್ಲಿಂ) ಈ ನಿರ್ಣಯವನ್ನು ವಿರೋಧಿಸಬೇಕಾಗಿದೆ, ಕೋತಿಗಳ ಮತ್ತು ಮೇಕೆಗಳ ಹಾವಳಿ ಜಾಸ್ತಿಯಾಗಿದೆ, ಅದನ್ನು ನಿವಾರಣೆ ಮಾಡಬೇಕೆಂದು ಮಾನ್ಯ ಸೂಚಕರು ಹೇಳಿದರು. ತತ್ವ ದೃಷ್ಟಿಯಿಂದ ಹೇಳುವುದಾದರೆ ಪ್ರಪಂಚದಲ್ಲಿ ಮನುಷ್ಯನಿಗೆ ಜೀವಿಸುವುದಕ್ಕೆ ಎಷ್ಟು ಹಕ್ಕಿದೆಯೋ ಪ್ರಾಣಿಗಳಿಗೂ ಕೂಡ ಜೀವಿಸುವುದಕ್ಕೆ ಅಷ್ಟೇ ಹಕ್ಕಿದೆ.

ಶ್ರೀ ಎಚ್. ಸಿ. ದಾಸಪ್ಪನವರು:– ಬಕ್ರಗಳಿಗೂ ಹಕ್ಕಿದೆ!!

ಜನಾಬ್ ಜೆ. ಮಹಮದ್ ಇಮಾಂರವರು:– ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಮತ್ತು ಅವರ ಜಾತಿಯವರನ್ನು ಮಾತ್ರವೇ ಅಲ್ಲದೆ ದೇವರು ಎಲ್ಲರನ್ನೂ ಸೃಷ್ಟಿ ಮಾಡಿದ್ದಾನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು:– ಜಾತಿ ಎಂದರೇನು?

ಜನಾಬ್ ಜೆ. ಮಹಮದ್ ಇಮಾಂರವರು:– ಭೂಮಿಯನ್ನು ಸೃಷ್ಟಿಮಾಡುವಾಗ ಮನುಷ್ಯ, ಪ್ರಾಣಿ, ಗಿಡ, ಮರ ಮುಂತಾದವುಗಳನ್ನೆಲ್ಲಾ ದೇವರು ಸೃಷ್ಟಿಮಾಡಿ ಸಾಕುತ್ತಿರುವುದರಿಂದ ಎಲ್ಲರಿಗೂ ಭೂಮಿಯ ಮೇಲೆ ಜೀವಿಸುವುದಕ್ಕೆ ಹಕ್ಕಿದೆ. ಎಲ್ಲಾ ಪ್ರಾಣಿಗಳಿಗಿಂತಲೂ ನಾವು ಬುದ್ಧಿವಂತರೂ, ಯುಕ್ತಿವಂತರೂ ಆಗಿರುವುದರಿಂದ ಭೂತದಯೆ ಇರಬೇಕು. ಸ್ವಾರ್ಥಕ್ಕಾಗಿ ಪ್ರಾಣಿಗಳನ್ನು ನಾಶಮಾಡುವುದು ಸರಿಯೆ?

ಹೆಚ್. ಕೆ. ವೀರಣ್ಣ ಗೌಡ:– ನಾಗರಹಾವನ್ನು ಕೊಲ್ಲುವವರಿಗೆ ಪ್ರತಿಯೊಂದು ಹಾವಿಗೆ ಎಂಟು ಆಣೆಗಳಂತೆ ಮುನಿಸಿಪಾಲಿಟಿ ಕೊಡುತ್ತದೆ. ಇದು ಮಾನ್ಯ ಸದಸ್ಯರಿಗೆ ತಿಳಿದಿದೆಯೇ?

ಜನಾಬ್ ಜೆ. ಮಹಮದ್ ಇಮಾಂರವರು:– ಅದೂ ಮನುಷ್ಯರೇ ಮಾಡಿದ್ದು, ನಾಗರಹಾವಿಗೆ ಪ್ರಾಣವಿಲ್ಲವೆ? ಮೊದಲನೆಯದು ಈ ನಿರ್ಣಯದ ಪ್ರಕಾರ ಪ್ರಾಣಿಗಳನ್ನು ವಧೆ ಮಾಡಬೇಕೆನ್ನುವುದು ತತ್ವಕ್ಕೆ ವಿರೋಧ. ಮಾನ್ಯ ಮಿತ್ರರು ಹೇಳುವ ಸಲಹೆಯು ಜಾರಿಗೆ ಬರಲು ಸುಲಭಸಾಧ್ಯವಲ್ಲ. ಎಲ್ಲಾ ಕೋತಿಗಳನ್ನೂ ತಂದು ಒಂದು ಕಡೆ ಕೂಡಿ ಇಂಗ್ಲೆಂಡಿಗೆ ಕಳಿಸಿ ಅಥವಾ ಸಮುದ್ರದಲ್ಲಿ ಹಾಕಿ ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು:– ಅಂಡಮಾನಿಗೆ ಕಳುಹಿಸಬೇಕು ಎಂಬುದು ಸೂಚಕರ ಸಲಹೆ

ಜನಾಬ್ ಜೆ. ಮಹಮದ್ ಇಮಾಂರವರು:– ಹೌದು, ಸ್ವಾರ್ಥವೊಂದೇ ಇದರಲ್ಲಿರುವುದು. ನಾವು ಮಾಡಬೇಕಾದ್ದು ಹೆಚ್ಚು ಕಿರುಕುಳ ಕೊಡದಂತೆ ನೋಡಿಕೊಳ್ಳತಕ್ಕದ್ದು. ಕಪಿಗಳು ಪಟ್ಟಣದಲ್ಲಿದ್ದರೂ ಅಥವಾ ಬೆಂಗಳೂರು ಸಿಟಿಯಲ್ಲಿದ್ದರೂ ಹಳ್ಳಿಗಳಿಗೆ ಹೋಗಿ ಹಾಳು ಮಾಡಬಹುದು. ಸಾಲುಮರದಲ್ಲಿರುವ ಆಲದ ಹಣ್ಣುಗಳನ್ನು ತಿನ್ನುವುದಕ್ಕೇನು ಅಭ್ಯಂತರ. ಕಾಡುಗಳಲ್ಲಿ ಬೇರೆ ಹಣ್ಣುಗಳಿವೆ. ಅದನ್ನು ತಿಂದು ಜೀವನ ಮಾಡುತ್ತವೆ. ಹಳ್ಳಿಗಳಿಗೆ ಬಾರದ ಹಾಗೆ ನಾವು ಸರಿಯಾದ ಏರ್ಪಾಡು ಮಾಡಬೇಕು. ಫಸಲಿನ ಸುತ್ತಲೂ ಬೇಲಿ ಹಾಕಿ ಕಾವಲಿಡಬೇಕು. ಕಾವಲಿಡಿ, ಓಡಿಸಿ. ಅದು ಬಿಟ್ಟು ಇಂಗ್ಲೆಂಡಿಗೆ ಕಳಿಸಿ, ಅಂಡಮಾನಿಗೆ ಕಳಿಸಿ, ಅಥವಾ ಹೊಡೆದುಹಾಕಿ ಎಂದು ಹೇಳುವುದು ಸೂಕ್ತವಲ್ಲ. It affects many Hindu sentiments, ಪೂರ್ವದಿಂದಲೂ ಕೋತಿಗಳಿಗೆ ಗೌರವವಿದೆ. ಕೆಲವು ಕಡೆ

ಹೊಡೆದುಹಾಕಿ ಎಂದು ಹೇಳಿದರೂ ಹಾಗೆ ಮಾಡುವುದಿಲ್ಲ. ಕರಡಿ ವಿಚಾರದಲ್ಲಿ ಕೂಡ ಎಷ್ಟೋ ಗೌರವವಿದೆಯೆಂಬುದು ಶ್ಯಮಂತಕೋಪಾಖ್ಯಾನ ದಿಂದ ಕಂಡುಬರುತ್ತದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ):– ಸ್ವಾಮಿ, ಶ್ರೀ ಕೃಷ್ಣಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ನಮ್ಮ ಹಿಂದೂ ಜನರಲ್ಲಿ ಮಂಗ ರಾಮನ ಭಂಟನೆಂದು ಒಂದು ನಂಬಿಕೆಯಿದೆ. ಆದ್ದರಿಂದ ಮಂಗಗಳನ್ನು ಯಾರೂ ಕೊಲ್ಲುವುದಿಲ್ಲ. ಒಬ್ಬ ಒಳ್ಳೆಯ ಮನುಷ್ಯನಿಗೆ ಕೆಟ್ಟ ಭಂಟನಿದ್ದು ಅವನು ತಪ್ಪು ಮಾಡಿದರೆ ಅವನನ್ನು ಶಿಕ್ಷಿಸಬಾರದೆ? ಹಾಗೆಯೇ ರಾಮನ ಭಂಟ ತಪ್ಪು ಮಾಡಿದರೆ ಏಕೆ ಶಿಕ್ಷಿಸಬಾರದು? ನೇಣು ಹಾಕಬಾರದೆ? ಮಂಗಗಳನ್ನು ಕೊಲ್ಲಬಾರ ದೆಂಬುದು ಒಂದು ಮಾನಸಿಕವಾದ ಕಲ್ಪನೆ. ನಿಜವಾಗಿಯೂ ಮಂಗಗಳು ರಾಮನ ಭಂಟರಾಗಿದ್ದರೆ ಹನುಮಂತನಿದ್ದ ಹಾಗೆ ಏಕೆ ಇರಬಾರದಾಗಿತ್ತು? ಏಕೆ ಜನರಿಗೆ ತೊಂದರೆ ಕೊಡಬೇಕಾಗಿತ್ತು?

ಇವುಗಳನ್ನು ಅಂಡಮಾನ್ ದ್ವೀಪಕ್ಕೆ ಸಾಗಿಸಬೇಕೆಂದು ಕೆಲವರು ಹೇಳುತ್ತಾರೆ. ಇದು ಸಾಧ್ಯವಲ್ಲದ ಮಾತು. ನಮಗೆ ಈಗ ಸಾಮಾನುಗಳನ್ನೂ, ಆಹಾರ ಪದಾರ್ಥಗಳನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೆ ಸಾಕಾದಷ್ಟು ವ್ಯಾನುಗಳಿಲ್ಲದೆ ತೊಂದರೆಯಾಗಿರುವಾಗ ಮಂಗಗಳನ್ನೆಲ್ಲಾ ಸಾಗಿಸುವುದಕ್ಕೆ ಎಲ್ಲಿಂದ ತರಬೇಕು? ಹೀಗೆ ಸಾಗಿಸುತ್ತೇವೆಂದರೆ ಇಂಡಿಯಾ ಸರ್ಕಾರದವರೇನಾದರೂ ಸಹಾಯ ಕೊಡುತ್ತಾರೆಯೇ! ಇಲ್ಲ. ನಮ್ಮ ಮಂತ್ರಿಗಳು ಹೇಳುತ್ತಾರೆ, ವಾಲಿಯನ್ನು ರಾಮನೇ ಕೊಲ್ಲಲಿಲ್ಲವೇ ಎಂದು. ಹೀಗೆ ಕೆಟ್ಟವರನ್ನು ಕೊಂದುಹಾಕುವುದನ್ನು ನಾವೇ ನೋಡುತ್ತಿದ್ದೇವೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ಸಿವಿಲ್ ಸ್ಟೇಷನ್ ಪ್ರದೇಶ):– ವಾಲಿ ಕೆಟ್ಟ ಮನುಷ್ಯನೇನೂ ಅಲ್ಲ.

ಅಧ್ಯಕ್ಷರು.– ವಾಲಿ ಮಂಗನೆಂದು ಅವರು ಹೇಳುವುದು,

ಶ್ರೀ ಹೆಚ್.ಎಂ. ಮಲ್ಲಿಕಾರ್ಜುನಪ್ಪನವರು:– ಯಾರ ಮನೆಯಲ್ಲಾದರೂ ಕಾಯಿಲೆಯಾದರೆ ಮಂಗನನ್ನು ಕೊಂದಿದ್ದರಿಂದ ಕಾಯಿಲೆ ಬಂತೆಂದು ಹೇಳುತ್ತಾರೆ. ಇದನ್ನೆಲ್ಲಾ ನೋಡಿದರೆ ಈ ಮಂಗಗಳು ರಾಮಾಯಣ ಕಾಲದ ಮಂಗಗಳ ವಂಶಕ್ಕೆ ಸೇರಿದವೇ ಅಥವಾ ಅಲ್ಲವೆ ಎಂಬುದನ್ನು ಕಂಡುಹಿಡಿದು ಜನರಲ್ಲಿರುವ ಈ ಮಾನಸಿಕವಾದ ಒಂದು ನಂಬಿಕೆಯಲ್ಲಿ ಬದಲಾವಣೆಯನ್ನಾದರೂ ಮಾಡುವುದಾದರೆ ಸರ್ಕಾರದವರು ಇನ್ನೇನೂ ಮಾಡಬೇಕಾಗುವುದಿಲ್ಲ. ಒಟ್ಟಿನಲ್ಲಿ ಈ ಮಂಗಗಳನ್ನು ಕೊಲ್ಲಲು ಯಾರೂ ಹಿಂಜರಿಯಬಾರದು.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ) :– ಸ್ವಾಮಿ, ನನ್ನ ಸ್ನೇಹಿತರಾದ ಶ್ರೀ ಕೃಷ್ಣಪ್ಪನವರು ಸಭೆಯ ಮುಂದಿಟ್ಟಿರುವ ಈ ನಿರ್ಣಯವನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಇದೇ ರೀತಿಯ ನಿರ್ಣಯವನ್ನು 1948ನೆಯ ಇಸವಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಮುಂದೆ ನಮ್ಮ ಪಕ್ಷದವರು ಮಂಡಿಸಿದಾಗ ಶ್ರೀ ಕೃಷ್ಣಪ್ಪನವರು ವಿರೋಧಿಸಿದರು. ಕೋತಿಗಳನ್ನು ನಾಶಮಾಡಬೇಕೆಂದು ನಾವು ಹೇಳಿದಾಗ ಇದು ಹಾಸ್ಯಾಸ್ಪದವಾದ ವಿಚಾರವೆಂದು ಅವರು ಭಾವಿಸಿದರು. ಆದರೆ ಈ ದಿವಸ ಅವರೇ ಈ ನಿರ್ಣಯವನ್ನು ತಂದು ಹಳ್ಳಿಗಳಲ್ಲಿ ಕೋತಿಗಳು ರೈತನಿಗೆ ವಿಪರೀತ ನಷ್ಟಮಾಡುತ್ತಿವೆ.

ಅವುಗಳನ್ನು ಹಾಳು ಮಾಡಬೇಕೆಂದು ಹೇಳಿದ್ದಾರೆ, ಅವರಿಗೆ ಈ ಬುದ್ಧಿ ಬಂದುದಕ್ಕಾಗಿ ನಾವು ಸಂತೋಷಪಡುತ್ತೇವೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ):– ಈ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಜನಾಬ್ ಇಮಾಮ್‌ರವರು 12 ಘಂಟೆಯವರೆಗೂ ನಮ್ಮ ಜೊತೆ ಇದ್ದರು. 12.30 ಘಂಟೆ ಮೇಲೆ ಈ ಅಹಿಂಸಾ ವಾದವನ್ನು ಶುರು ಮಾಡಿದ್ದಾರೆಂದು ಕಾಣುತ್ತದೆ. ಸ್ವಾಮಿ, ಮಲೆನಾಡಿನಲ್ಲಿ ಈಚೆಗೆ ಸುಮಾರು ನೂರು ವರ್ಷದಿಂದ ನರರ ಸಂಖ್ಯೆ ಕಡಿಮೆಯಾಗುತ್ತಾ ಬಂದು ವಾನರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಕಡೆ ರೈತರು ಅವುಗಳನ್ನು ಕೊಂದುಹಾಕುತ್ತಾರೆ. ಆದರೆ ಮದ್ದು, ಗುಂಡುಗಳ ಸರಬರಾಯಿ ಸಾಲದು. ಆದ್ದರಿಂದ ಈ ಸಂದರ್ಭದಲ್ಲಿ ರೈತರಿಗೆ ಹೆಚ್ಚು ಮದ್ದು, ಗುಂಡುಗಳನ್ನು ಒದಗಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಶ್ರೀ ಕೃಷ್ಣಪ್ಪನವರು ಅವುಗಳ ಬೀಜ ಒಡೆಯಬೇಕೆಂದು ಹೇಳಿದರು. ಅದಕ್ಕೆ ಒಂದು ಇಲಾಖೆಯನ್ನು ಇಡಬೇಕಾಗುತ್ತದೆ, ಮತ್ತು ಅದಕ್ಕೆ ಡಾಕ್ಟರ್‌ಗಳೂ ಬೇರೆ. ಇವೆಲ್ಲಾ ಆಗಬೇಕಾಗುತ್ತದೆ. ಆದ್ದರಿಂದ ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೆ. ಅವುಗಳನ್ನು ನಿರ್ದಾಕ್ಷಿಣ್ಯವಾಗಿ, ನಿರ್ದಯದಿಂದ ಗುಂಡಿನಿಂದ ಹೊಡೆದು ಹಾಕಬೇಕು. ಜನಾಬ್ ಇಮಾಮ್‌ರವರೇನೋ ಧರ್ಮದ ವಿಷಯ ಹೇಳಿದರು ನಿಜ. ಧರ್ಮದಾತ್ತ ದೇವರನ್ನು ಹಿಂದೂಸ್ಥಾನದಿಂದ ಎಂದೋ ಓಡಿಸಿದ್ದೇವೆ. ಧರ್ಮ, ದೇವರು ಇವೆಲ್ಲಾ ಸೂತ್ರದಲ್ಲೇ ಇದೆ ಅಷ್ಟೆ. ಮನುಷ್ಯರನ್ನೇ ಜೀವಸಹಿತ ನುಂಗತಕ್ಕ ಜನರೂ ಇದ್ದಾರೆ. ಹಾಗಿರುವಾಗ ಪ್ರಾಣಿಗಳ ವಿಚಾರದಲ್ಲಿ ಅಷ್ಟೊಂದು ಧರ್ಮ, ನೀತಿ ಅನಾವಶ್ಯಕವೆಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು:– ಕೋತಿಗಳನ್ನು ಕೊಲ್ಲಬೇಕೆಂದು ನಾನು ಈ ನಿರ್ಣಯವನ್ನು ತಂದಿಲ್ಲ. ಕೋತಿಗಳು ರೈತರಿಗೆ ಬಹಳ ತೊಂದರೆ ಕೊಡುತ್ತವೆ. ಆದ್ದರಿಂದ ಅದನ್ನು ತಪ್ಪಿಸಬೇಕೆಂದು ಹೇಳಿದರೆ ಜನಾಬ್ ಇಮಾಮ್‌ರವರು ಇದನ್ನು ವಿರೋಧ ಮಾಡುತ್ತಾ ನೀತಿಶಾಸ್ತ್ರ, ಧರ್ಮಶಾಸ್ತ್ರ, ಅಹಿಂಸೆ ಮುಂತಾದುವನ್ನೆಲ್ಲಾ ಪ್ರಸ್ತಾಪ ಮಾಡಿದರು. ನಮ್ಮ ಮಿತ್ರರು ಹೇಳಿದ ಹಾಗೆ 12 ಘಂಟೆಯಾದ ಮೇಲೆ ಇವೆಲ್ಲಾ ಬಂದಿರಬಹುದು. ಕೋತಿಗಳನ್ನು ನಾಶಮಾಡಿ ನಾವು ಉದ್ಧಾರ ವಾಗಬೇಕೆಂದು ನನ್ನ ಉದ್ದೇಶ ಅಲ್ಲ. ಯಾವುದಾದರೂ ಒಂದು ವಿಧದಲ್ಲಿ ರೈತರಿಗೆ ಅವುಗಳಿಂದಾಗತಕ್ಕ ತೊಂದರೆಯನ್ನು ತಪ್ಪಿಸಬೇಕು ಹಾಗೆ ನೋಡುತ್ತಾ ಹೋದರೆ ಯಾವುದೋ ಒಂದು ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರೇ ಇವುಗಳನ್ನು ಕೊಲ್ಲಬಹುದೆಂದು ಹೇಳಿದ್ದಾರೆ. ನಾಗರ ಹಾವುಗಳನ್ನು ಸಹ ಕೊಲ್ಲಬಹುದೆಂದು ಹೇಳಿದ್ದಾರೆ. ಅಂಥವರೆ ಹೇಳಿರುವಾಗ ಜನಾಬ್ ಇಮಾಮ್‌ರವರ ತತ್ವಕ್ಕೆ ಎಷ್ಟರ ಮಟ್ಟಿಗೆ ಮನ್ನಣೆ ದೊರೆಯುತ್ತದೆಯೋ ಗೊತ್ತಿಲ್ಲ. ನಾವು ಎಷ್ಟೋ ಪ್ರಾಣಿಗಳನ್ನು ಕೊಲ್ಲುತ್ತೇವೆ. ಆದರೆ ಮಾನಸಿಕ ಭಾವನೆಗೆ ಎಡೆಗೊಡಬೇಕಾದ ಪರಿಸ್ಥಿತಿ ದೇಶದಲ್ಲಿ ಇನ್ನೂ ಉಳಿದಿರುವುದರಿಂದ ಅವುಗಳನ್ನು ಕೊಂದುಹಾಕದೆ ಬೇರೆ ವಿಧದಲ್ಲಿ ಕಡಿಮೆ ಮಾಡಬೇಕೆಂದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ಈ ನಿರ್ಣಯ ತಂದಿರುವುದರಲ್ಲಿ ಮಾನ್ಯ ಕೃಷ್ಣಪ್ಪನವರ ಉದ್ದೇಶವೇನೋ ಒಳ್ಳೆಯದು. ನಾನಾಗಲೇ ಹೇಳಿದಂತೆ ಕೋತಿಗಳ ಹಾವಳಿಯನ್ನು ತಪ್ಪಿಸುವ ವಿಷಯದಲ್ಲಿ ಪ್ರಜಾಭಿಪ್ರಾಯವು ಸರಿಯಾಗಿ ರೂಪುಗೊಂಡರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.


ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರುಜಿಲ್ಲೆ):– ಪ್ರಾಯೋಗಿಕವಾಗಿ ಯಾವುದಾದರೂ ಒಂದೆರಡು ಕಡೆ ಟಿಯರ್ ಗ್ಯಾಸ್ ಉಪಯೋಗಿಸಿ ಅವುಗಳಿಗೆ ಭಯವನ್ನುಂಟುಮಾಡಿದರೆ ಅವುಗಳು ಹೆದರಿ ಕಾಡಿಗೆ ಓಡಿ ಹೋಗಬಹುದು. ಒಂದು ಸಲ ಪರೀಕ್ಷೆ ಮಾಡಿ ನೋಡಿ.

ಶ್ರೀ ಟಿ. ಮರಿಯಪ್ಪನವರು:– ನೀವು ಹೇಳುವುದೂ ಸಾಧುವಾಗಿ ಕಾಣುತ್ತದೆ. ಅದನ್ನು ಯೋಚನೆ ಮಾಡಿ ನೋಡುತ್ತೇವೆ, ಜನರೂ ಕೂಡ ಈ ವಿಚಾರದಲ್ಲಿ ತಮ್ಮ ಮನೋಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿ ನಾನಾ ಸಾರ್ವಜನಿಕ ಸಂಸ್ಥೆಗಳ ಮುಖಾಂತರ ನಿರ್ಣಯಗಳನ್ನು ಮಾಡಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ನಾವು ತಕ್ಕ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ನಾನು ಕೊಟ್ಟ ಭರವಸೆಯ ಮೇಲೆ ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತಾರೆಂದು ನಂಬಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು:– ಮಾನ್ಯ ಸಚಿವರು ಕೊಟ್ಟ ಭರವಸೆಯ ಮೇಲೆ ನಾನು ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

(ವಿಧಾನಸೌಧದ ಪತ್ರಾಗಾರ ಇಲಾಖೆಯಿಂದ ಸಂಗ್ರಹ ಮತ್ತು ಸಂಕ್ಷೇಪರೂಪಕ್ಕೆ)

■



## STATEMENT OF OWNERSHIP OF APARANJI
## (KANNADA MONTHLY)
## (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Bharath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2023
Bangalore

**M. ShivaKumar**
(Signature of the Publisher)